# ಮಹಿಳಾ ಸಮಖ್ಯಾ ಕರ್ನಾಟಕ ರಾಯಚೂರು ಘಟಕ

# ಜನಾರೋಗ್ಯ ಆಂದೋಲನ - 2000

## ಪ್ರಕ್ರಿಯೆಯ ಮೌಲ್ಯಮಾಪನ


## ಒಳಪುಟಗಳಲ್ಲಿ



| ವಿಷಯಗಳು | ಪುಟ ಸಂಖ್ಯೆ |
|---|---|
| 1. ಹಿನ್ನೆಲೆ - ಉದ್ದೇಶ, | 1 |
| 2. ಜನಾರೋಗ್ಯ ಆಂದೋಲನದ ಪೂರ್ವ ತಯಾರಿ, | 2 |
| 3. ಸ್ವಾಗತ ಸಮಿತಿ ರಚನೆ | 3 |
| 4. ಕಲಾಜಾಥಾದ ಕಾರ್ಯಕ್ರಮದ ವಿವರ | 4 |
| 5. " ಪೂರ್ವ ತಯಾರಿ, ತಾಲೂಕಾವಾರು ಭಾಗವಹಿಸುವಿಕೆ | 5 |
| 6. ರಾಯಚೂರು, ಮಾನ್ವಿ, ದೇವದುರ್ಗ ತಾಲೂಕಿನಲ್ಲಿ ಕಂಡುಕೊಂಡ ಸಮಸ್ಯೆಗಳು | 6 |
| 7. ತಾಲೂಕಾವಾರು ಕಂಡಂಥ ಕಾಯಿಲೆಗಳ ವಿವರ | 7 |
| 8. ಮಾಹಿತಿ ತಿಳಿಸಿದ ನಂತರ ಸಂಘದ ಮಹಿಳೆಯರು, ಗ್ರಾಮಸ್ಥರು ಶ್ರಮದಾನ ಮಾಡಿದ ಹಳ್ಳಿಗಳು | 8 |
| 9. ತಂಡದೊಂದಿಗೆ ಸಮಖ್ಯಾ ಸಿಬ್ಬಂದಿ ಹಾಗೂ ಸಂಘದ ಮಹಿಳೆಯರು ಸೇರಿ ಶ್ರಮದಾನ ಮಾಡಿದ ಹಳ್ಳಿಗಳು | 9 |
| 10. ಕಲಾಜಾಥಾ ನಡೆಸಿದ ಗ್ರಾಮಗಳ ಸಮಸ್ಯೆಗಳು ಹಾಗೂ ಶ್ರಮದಾನದ ಮಾಹಿತಿ | 10 - 12 |
| 11. ಜನಾರೋಗ್ಯ ಸಂವಾದದಿಂದ ಗಳಿಸಿದ ಮಾಹಿತಿಯನ್ನು ವರದಿ ವಿಧಾನದ ಪಟ್ಟಿ (ಮೂರು ತಾಲೂಕು) | 13 - 18 |
| 12. ಅನಿಸಿಕೆ, ಕ್ರಿಯಾಯೋಜನೆ, ತೀರ್ಮಾನ | 19 - 20 |
| 13. ಅಡಕಗಳು | 21 - 27 |
| 14. ರಾಜ್ಯ ಜನಾರೋಗ್ಯ ಸಮಾವೇಶದ ವರದಿ - ದಾವಣಗೆರೆ | 29 - 45 |
| 15. ರಾಷ್ಟ್ರ ಜನಾರೋಗ್ಯ ಸಮಾವೇಶದ ವರದಿ - ಕಲ್ಕತ್ತಾ | 47 - 56 |
| 16. ಅಂತರಾಷ್ಟ್ರ ಜನಾರೋಗ್ಯ ಸಮಾವೇಶದ ವರದಿ - ಢಾಕಾ | 58 - 78 |


*****

# ಜನಾರೋಗ್ಯ ಕಲಾಜಾಥಾದ ವರದಿ
# ರಾಯಚೂರು ಜಿಲ್ಲೆ

ದಿನಾಂಕ: 10-11-2000 ದಿಂದ 20-11-2000






ಸಭೆ-2000



## 1. ಹಿನ್ನಲೆ-ಉದ್ದೇಶ:

ಭಾರತದಲ್ಲಿ ಅನಾರೋಗ್ಯಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಪರಿಶೀಲಿಸಿದರೆ ಜನಾರೋಗ್ಯ ಸುಧಾರಣೆಯನ್ನು ಕಡೆಗಣಿಸಲಾಗಿದೆ ಎಂದು ಹೇಳಬಹುದಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಈಗ ಜನಾರೋಗ್ಯ ಸುಧಾರಣೆಯಾಗಬೇಕಾಗಿದೆ ಎಂದರೆ ಎರಡು ಮಾತಿಲ್ಲ. 2000 ಇಸ್ವಿಯ ವೇಳೆಗೆ "ಎಲ್ಲರಿಗೂ ಆರೋಗ್ಯ" ಎಂಬ ಘೋಷಣೆಯನ್ನು ವಿಶ್ವ ಆರೋಗ್ಯ ಸಂಸ್ಥೆ ನೀಡಿತು ಹಾಗೂ ಭಾರತ ಸರಕಾರ ಮೊದಲು ಒಪ್ಪಿಗೆ ನೀಡಿತ್ತು. ಆದರೆ ಆರೋಗ್ಯ ಪರಿಸ್ಥಿತಿ ಉತ್ತಮವಾಗುವ ಬದಲು ಹದಗೆಡುತ್ತಿದೆ. ಆರೋಗ್ಯ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಹಲವಾರು ಸಾಂಕ್ರಾಮಿಕ ರೋಗಗಳು, ಏಡ್ಸ್ ಪಿಡುಗು ಇತ್ಯಾದಿಗಳ ಹಲವು ರೋಗಗಳನ್ನು ತಡೆಗಟ್ಟಬಹುದಾಗಿದ್ದರೂ ತಡೆಗಟ್ಟದೇ ಇರುವುದರಿಂದ ಸಮಸ್ಯೆಯಾಗಿದೆ. ವೈದ್ಯಕೀಯ ವಿಜ್ಞಾನದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದರೂ ಅದು ಜನ ಸಾಮಾನ್ಯರಿಗೆ ನಿಲುಕದೇ ಕೆಲವರಿಗೆ ಮಾತ್ರ ಲಭ್ಯವಾಗುತ್ತಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಜಗತ್ತಿನಲ್ಲಿ ಬದಲಾದ ಆರ್ಥಿಕ ಪರಿಸ್ಥಿತಿ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳು, ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಕಡೆಗಣಿಸುವುದು ಇತ್ಯಾದಿಗಳೂ ಕಾರಣವಾಗಿವೆ. ಇದರಿಂದಾಗಿ ಎಲ್ಲರಿಗೂ ಆರೋಗ್ಯ ಸಾಧ್ಯವಾಗುತ್ತಿಲ್ಲ.

ಎಲ್ಲರಿಗೂ ಆರೋಗ್ಯ ಒದಗಿಸುವಲ್ಲಿ ಆದ ವಿಫಲತೆಗಳಿಗೆ ಕಾರಣಗಳನ್ನು ಹುಡುಕುವುದು ಇಂದಿನ ಆರೋಗ್ಯ ಸಮಸ್ಯೆಗಳಿಗೆ ಕಾರಣಗಳೇನು, ಜನಾರೋಗ್ಯ ಸಾಧಿಸಲು ಜನರ ಪಾತ್ರವೇನು, ಅದಕ್ಕೆ ಬೇಕಾದ ಸಿದ್ಧತೆ ಹಾಗೂ ಯೋಜನೆಗಳೇನು ಎಂಬುದನ್ನು ಚರ್ಚಿಸಿ ರೂಪರೇಷೆಗಳನ್ನು ಸಿದ್ಧಪಡಿಸುವುದೇ ಈ ಜನಾರೋಗ್ಯ ಸಭೆಯ ಉದ್ದೇಶವಾಗಿದೆ.

**ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದವರ ವಿವರ:**

1. ಭಾರತ ಜ್ಞಾನ ವಿಜ್ಞಾನ ಸಮಿತಿ.
2. ಮಹಿಳಾ ಸಮಖ್ಯಾ ಕರ್ನಾಟಕ.
3. ನೆಹರು ಯುವ ಕೇಂದ್ರ.
4. ಭಾರತೀಯ ವಿದ್ಯಾರ್ಥಿ ಒಕ್ಕೂಟ.
5. ಎ.ಐ.ಎ.ಡಬ್ಲ್ಯೂ.ಐ.ಸಿ.
6. ಭಾರತೀಯ ಕುಟುಂಬ ಯೋಜನಾ ಸಂಘ.
7. ಸಮುದಾಯ.
8. ಉದಯ ಸಂಸ್ಥೆ.
9. ಜನವಾದಿ ಮಹಿಳಾ ಸಂಘಟನೆ.
10. ಪ್ರೇರಣಾ.
11. ಜಿಲ್ಲಾ ಆರೋಗ್ಯ ಇಲಾಖೆ.
12. ಲಯನ್ಸ್ ಕ್ಲಬ್ ರಾಯಚೂರು.
13. ರೋಟರಿ ಕ್ಲಬ್ ರಾಯಚೂರು.
14. ಪ್ರತಿಧ್ವನಿ ಅಂಗವಿಕಲರ ಸಂಸ್ಥೆ ದೇವದುರ್ಗ.
15. ಸಮೂಹ ಜಾಲಹಳ್ಳಿ.
16. ಶಹರಿ ರೋಜಗಾರ ಯೋಜನೆ.
17. ನವಚೇತನ ಅಂಗವಿಕಲರ ಸಂಸ್ಥೆ ರಾಯಚೂರು.
18. ಜಿಲ್ಲಾ ಸಾಕ್ಷರತಾ ಸಮಿತಿ.

ಈ 18 ಸಂಘಟನೆಗಳಲ್ಲಿ ಒಂದು ಸಂಘಟನೆ ಕಲಾ ತಂಡವನ್ನು ಗುರುತಿಸುವ ಜವಾಬ್ದಾರಿ ತೆಗೆದುಕೊಂಡಿತು. ಹಳ್ಳಿಗಳಲ್ಲಿ ಜಾಥಾ ಹೋಗಲು ಜೀಪಿನ ವ್ಯವಸ್ಥೆ ಹಾಗೂ ಸ್ವಾಗತ ಸಮಿತಿಯ ರಚನೆಯನ್ನು ಮಹಿಳಾ ಸಮಖ್ಯಾ ವಹಿಸಿಕೊಂಡಿತ್ತು. ಕಲಾತಂಡ ಗ್ರಾಮಕ್ಕೆ ಹೋದಾಗ ಅವರ ಊಟ, ವಸತಿ ಹಾಗೂ ಜಾಥಾ ಪ್ರದರ್ಶನದ ವ್ಯವಸ್ಥೆಯನ್ನು ಸ್ಥಳೀಯ ಮಹಿಳಾ ಸಂಘ, ಇತರೆ ಸಂಘಟನೆಗಳು, ಶಾಲಾ ಶಿಕ್ಷಕರು, ಗ್ರಾ.ಪಂ. ಹಾಗೂ ಊರ ಪ್ರಮುಖರು ವಹಿಸಿಕೊಂಡಿದ್ದರು. ಜಾಥಾದ ಇತರೆ ತಯಾರಿ, ಮೈಕ್‌ಸೆಟ್, ಜಿಲ್ಲಾ ಕಾರ್ಯಾಗಾರದ ಜವಾಬ್ದಾರಿಯನ್ನು ಬಿ.ಜಿ.ವಿ.ಎಸ್. ವಹಿಸಿಕೊಂಡಿತ್ತು.

## *ಜನಾರೋಗ್ಯ ಆಂದೋಲನದ ಪೂರ್ವ ತಯಾರಿ*

ಢಾಕಾದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಜನಾರೋಗ್ಯ ಸಮಾವೇಶಕ್ಕೆ ಪೂರಕವಾಗಿ ರಾಜ್ಯ, ಜಿಲ್ಲೆ ಹಾಗೂ ಗ್ರಾಮ ಮಟ್ಟದಲ್ಲಿ ಅನೇಕ ಸಭೆ, ಕಾರ್ಯಾಗಾರ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅದೇ ರೀತಿ ರಾಯಚೂರು ಜಿಲ್ಲೆಯಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ನಡೆಸಲಾಯಿತು. ಹಲವಾರು ಸಂಘ ಸಂಸ್ಥೆಗಳ ಸಹಾಯ-ಸಹಕಾರದಿಂದ ಜನ ಜಾಗೃತಿ ಉಂಟುಮಾಡಲು ಪ್ರಾರಂಭಿಸಲಾಯಿತು.

### I. **ಜಿಲ್ಲಾ ಮಟ್ಟದ ಸಭೆಗಳು:**

| | |
|---|---|
| 1. ದಿನಾಂಕ 23-7-2000 | - ಪ್ರಥಮ ಸಾಮಾನ್ಯ ಸಭೆ |
| 2. ದಿನಾಂಕ 21-9-2000 | - ಕಾರ್ಯಕಾರಿ ಸಮಿತಿ ಸಭೆ |
| 3. ದಿನಾಂಕ 24-9-2000 | - " |
| 4. ದಿನಾಂಕ 27-9-2000 | - ಕಾರ್ಯಾಗಾರದ ಪೂರ್ವ ತಯಾರಿ ಸಭೆ. |
| 5. ದಿನಾಂಕ 2-10-2000 | - " |
| 6. ದಿನಾಂಕ 20-10-2000 ದಿಂದ 22-10-2000 | - ಜಿಲ್ಲಾ ಮಟ್ಟದ ಕಾರ್ಯಾಗಾರ (ಅಡಕ-1) |
| 7. ದಿನಾಂಕ 23-10-2000 | - ಕಲಾಜಾಥಾ ಯೋಜನಾ ಸಭೆ |
| 8. ದಿನಾಂಕ 1-11-2000 ದಿಂದ 5-11-2000 ವರೆಗೆ | - ಕಲಾತಂಡದ ಟಿ.ಓ.ಟಿ. ಚಿತ್ರದುರ್ಗ (ಅಡಕ-2) |
| 9. ದಿನಾಂಕ 9-11-2000 ರಿಂದ 10-11-2000 ವರೆಗೆ | - ಸ್ಥಳೀಯ ಕಲಾತಂಡ ರಚನೆ ಹಾಗೂ ತರಬೇತಿ (ಅಡಕ-3) |

10. ದಿನಾಂಕ 10-11-2000 ರಿಂದ 20-11-2000 ವರೆಗೆ - 31 ಹಳ್ಳಿಗಳಲ್ಲಿ ಕಲಾಜಾಥಾ.

ಜನಾರೋಗ್ಯವನ್ನು ಸುಧಾರಿಸಲು ಜಗತ್ತಿನಾದ್ಯಂತ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಪ್ರಯತ್ನಗಳು ನಡೆದಿವೆ. ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಜಾರಿಗೆ ತರಲು ಭಾರತದಲ್ಲಿ ಸಮಿತಿಯೊಂದನ್ನು ರಚಿಸಿದಂತೆ ರಾಜ್ಯ, ಜಿಲ್ಲೆ ಹಾಗೂ ಗ್ರಾಮಗಳಲ್ಲೂ ರಚಿಸುವ ಅವಶ್ಯಕತೆ ಇದೆ. ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಸಕ್ರಿಯಗೊಳಿಸಲು ವಿವಿಧ ಸಂಘಟನೆಗಳು ಮುಂದೆ ಬಂದು ಕ್ರಿಯಾಶೀಲರಾಗಿದ್ದಾರೆ. ರಾಯಚೂರು ಸಂಘಟಿತ ಜಿಲ್ಲೆಯಲ್ಲಿ ಅವರೆಲ್ಲರ ಕ್ರಿಯಾತ್ಮಕ ಕಾರ್ಯ ಚಟುವಟಿಕೆಗಳ ಕ್ರೋಢೀಕೃತ ವರದಿ ಇಲ್ಲಿದೆ.

*ಸ್ವಾಗತ ಸಮಿತಿ ರಚನೆ*

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಕಾರ್ಯಾಗಾರದಲ್ಲಿ ಭಾಗವಹಿಸಿದ ಜವಾಬ್ದಾರಿಗಳಲ್ಲಿ ಒಂದು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಿ ಆರೋಗ್ಯ ಸಮಸ್ಯೆಗಳ ಕುರಿತು ಸಂವಾದ ನಡೆಸುವುದು. ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಜನರನ್ನು ಸಂಘಟಿಸಿ, ಕಲಾಜಾಥಾದ ಕಾರ್ಯಕ್ರಮಕ್ಕೆ ಸಹಕರಿಸುವುದು, ಕ್ರಿಯಾ ಯೋಜನೆಯನ್ನು ತಯಾರಿಸುವುದು, ಸಮಸ್ಯೆಗಳ ಬಗೆಹರಿಸುವಿಕೆಗೆ ಕಾರ್ಯ ರೂಪಕ್ಕೆ ಇಳಿಯುವಂತೆ ಪ್ರೋತ್ಸಾಹಿಸಿ ತೊಡಗಿಸುವುದು ಇವುಗಳು ಸ್ವಾಗತ ಸಮಿತಿಯ ಮುಖ್ಯ ಜವಾಬ್ದಾರಿಗಳು. ಸ್ವಾಗತ ಸಮಿತಿ ರಚನೆ ಮಾಡಲು ಮೊದಲಿಗೆ 31 ಹಳ್ಳಿಗಳಿಗೆ ಹೋಗಿ ಶಾಲೆಯ ಮುಖ್ಯಸ್ಥರು, ಊರಿನ ದಳಪತಿ, ಗೌಡರು, ಗಾ.ಪಂ. ಅಧ್ಯಕ್ಷರು, ಗ್ರಾ.ಪಂ. ಸದಸ್ಯರು, ಮಹಿಳಾ ಸಮಖ್ಯಾ ಸಿಬ್ಬಂದಿ ಹಾಗೂ ಮಹಿಳಾ ಸಂಘ, ಯುವತಿ ಮಂಡಲ, ಇಂದಿರಾ ಮಹಿಳಾ ಮಂಡಳ, ಡ್ವಾಕ್ರಾ, ಊರಿನ ಪ್ರಮುಖರನ್ನು ಕರೆಯಿಸಿ ಮೊದಲಿಗೆ ಜನಾರೋಗ್ಯ ಕಲಾಜಾಥಾದ ಉದ್ದೇಶ ತಿಳಿಸಿ ಹಾಗೂ ಶ್ರಮದಾನ ಮಾಡುವುದರ ಬಗ್ಗೆ ಹೇಳಿ ತಿಳಿಸಿದಾಗ ಅದಕ್ಕೆ ಕೆಲವು ಕಡೆ ಒಳ್ಳೆಯ ಅಭಿಪ್ರಾಯ ತೋರಿಸಿದರು. ಕೆಲವು ಕಡೆ ತೊಂದರೆಯಾಯಿತು. ಆದರೂ ಮನವೊಲಿಸಿ ತಿಳಿಸಿದ ಮೇಲೆ ಸ್ವಾಗತ ಕಮಿಟಿಗೆ ಸಂಚಾಲಕರು ಹಾಗೂ ಅಧ್ಯಕ್ಷರನ್ನು ಉಳಿದ 10 ರಿಂದ 12 ಜನ ಸದಸ್ಯರೆಂದು ಕಮಿಟಿ ಮಾಡಿ ಜವಾಬ್ದಾರಿ ಕೊಡಲಾಯಿತು.

ಅದು ಏನೆಂದರೆ, ಕಲಾತಂಡದವರಿಗೆ ಊಟದ ವ್ಯವಸ್ಥೆ ಹಾಗೂ ಕಲಾಜಾಥಾ ಹಮ್ಮಿಕೊಳ್ಳುವ ಕಾರ್ಯಕ್ರಮದ ವ್ಯವಸ್ಥೆ ನೀವು ಮಾಡಬೇಕು. ಯಾಕೆಂದರೆ ಇದು ನಿಮ್ಮ ಹಳ್ಳಿಗಾಗಿ ಎಲ್ಲ ಎನ್.ಜಿ.ಓ. ಸೇರಿ ಮಾಡುತ್ತಿದ್ದಾರೆ. ನಿಮ್ಮೂರಿಗೆ ಕಲಾಜಾಥಾ ಬರುವುದರಿಂದ ಊರಿನ (ಸಮುದಾಯ) ಕಾರ್ಯಕ್ರಮ. ಅದಕ್ಕಾಗಿ ನೀವೇ ಜವಾಬ್ದಾರಿ ತೆಗೆದುಕೊಳ್ಳಬೇಕು. ಅದಕ್ಕಾಗಿ ಸ್ಥಳೀಯದಲ್ಲಿರುವ ಮಹಿಳಾ ಸಂಘದವರು ನಿಮ್ಮೆಲ್ಲದಕ್ಕೆ ಸಹಕಾರ ಕೊಡುತ್ತಾರೆ ಎಂದಾಗ, ಕೆಲವು ಕಡೆ ಗ್ರಾ.ಪಂ. ಅಧ್ಯಕ್ಷರು, ಕೆಲವು ಕಡೆ ಶಿಕ್ಷಕರು, ಊರಿನ ಪ್ರಮುಖರು, ಕೆಲವು ಕಡೆ ಮಹಿಳಾ ಸಮಖ್ಯಾದ ಮಹಿಳಾ ಸಂಘದವರು ಎಲ್ಲ ಕಡೆಯಲ್ಲೂ ಸಹಕಾರ ನೀಡಿ ವ್ಯವಸ್ಥೆ ಮಾಡಿರುವರು. ಅಲ್ಲದೇ ಮುಂಚಿತವಾಗಿ ಗ್ರಾಮದ ಎಲ್ಲ ಜನರಿಗೆ ಕಲಾಜಾಥಾ ಬರುವ ಬಗ್ಗೆ ಡಂಗುರ ಸಾರಿಸುವುದೆಂದು ತಿಳಿಸುವುದರೊಂದಿಗೆ ಈ ರೀತಿಯಾಗಿ ಜವಾಬ್ದಾರಿಗಳನ್ನು ವಹಿಸಿ ಸ್ವಾಗತ ಕಮಿಟಿ ರಚನೆ ಮಾಡಲು ಸಾಧ್ಯವಾಯಿತು.

*ಕಲಾಜಾಥಾದ ಪ್ರಕ್ರಿಯೆ*

ಕಲಾಜಾಥಾ ಯಾವ ಯಾವ ಹಳ್ಳಿಗಳಲ್ಲಿ ಯಾವ ಸಮಯದಲ್ಲಿ ಮಾಡುವುದು ಎಂಬುದು ಅಲ್ಲಿಯ ವ್ಯವಸ್ಥೆಗನುಗುಣವಾಗಿ ಮಹಿಳಾ ಸಮಖ್ಯಾ ಕರ್ನಾಟಕ, ಬಿಜಿ.ವಿ.ಎಸ್. ಹಾಗೂ ಸಾಕ್ಷರತಾದವರೊಂದಿಗೆ ಸಮಾಲೋಚಿಸಿ ವೇಳಾಪಟ್ಟಿಯನ್ನು ಈ ಕೆಳಗಿನಂತೆ ತಯಾರಿಸಲಾಯಿತು.

## ಜನಾರೋಗ್ಯ ಸಭೆಯ ಕಲಾಜಾಥಾದ ಕಾರ್ಯಕ್ರಮದ ವಿವರ

ಒಟ್ಟು ಹಳ್ಳಿಗಳು : 31.

| ಕ್ರ.ಸಂ. | ರಾಯಚೂರು | ದೇವದುರ್ಗ | ಮಾನ್ವಿ |
|---|---|---|---|
| 1. | ಸಿಂಗನೋಡಿತಾಂಡಾ | ಅಮರಾಪೂರ | ನುಗಡೋಣಿಕ್ಯಾಂಪ್ |
| 2. | ಕುರುಬದೊಡ್ಡಿ | ರಾಮದುರ್ಗ | ನುಗಡೋಣಿ |
| 3. | ವಡವಟ್ಟಿ | ಮಾನಸಯ್ಯನದೊಡ್ಡಿ | ನವಲಕಲ್ |
| 4. | ಮರ್ಚೇಡ್ | ಚಿಕ್ಕಹೊನ್ನಕುಣಿ | ಕುರಕುಂದಾ |
| 5. | ಜೇಗರಕಲ್ | ಕೋತಿಗುಡ್ಡ | ಚಿಂಚರಕಿ |
| 6. | ಮಲ್ಲಾಪೂರ | ಕರಿಮರಡಿತಾಂಡಾ | ಹೀರಾ |
| 7. | ಗೋನಾಳ | ಹುನಗುಂಡಬಾಡಾ | ಬುದ್ದಿನ್ನಿ |
| 8. | ಜಾಗೀರವೆಂಕಟಾಪೂರ | ಗೋವಿಂದಪಲ್ಲಿ | ಕಸನದೊಡ್ಡಿ |
| 9. | ಮನ್ಸಲಾಪೂರ | ಜಾಗಟಕಲ್ | ನಾರಬಂಡಾ |
| 10. | ಕಟ್ಲಟ್ಕೂರು | | ಮಾಡಗಿರಿ |
| 11. | | | ಹಳ್ಳಿಹೊಸೂರು |
| 12. | | | ಸಣ್ಣಹೊಸೂರು |
| | 9 | 9 | 12 |

| ಕ್ರ. ಸಂ. | ದಿನಾಂಕ | ಬೆಳಗ್ಗೆ | ಸಾಯಂಕಾಲ | ರಾತ್ರಿ | ವಸತಿ |
|---|---|---|---|---|---|
| 1. | 10-11-2000 | - | - | ಕಟ್ಲಟ್ಕೂರು | ಚಂದ್ರಬಂಡಾ |
| 2. | 11-11-2000 | ಸಿಂಗನೋಡಿ ತಾಂಡಾ | ಕುರುಬದೊಡ್ಡಿ | ವಡವಟ್ಟಿ | ರಾಯಚೂರು |
| 3. | 12-11-2000 | ಮರ್ಚೇಡ್ | ಜೇಗರಕಲ್ | ಮಲ್ಲಾಪೂರ | ಮಲ್ಲಾಪೂರ |
| 4. | 13-11-2000 | ಗೋನಾಳ | ಜಾಗೀರ ವೆಂಕಟಾಪುರ | ಮನ್ಸಲಾಪೂರ | ರಾಯಚೂರು |
| 5. | 14-11-2000 | ಅಮರಾಪೂರ | ರಾಮದುರ್ಗ | ಮಾನಸಯ್ಯನ ದೊಡ್ಡಿ | ಮಾನಸಯ್ಯನ ದೊಡ್ಡಿ |
| 6. | 15-11-2000 | ಚಿಕ್ಕಹೊನ್ನಕುಣಿ | ಕೋತಿಗುಡ್ಡ | ಕರಿಮರಡಿ ತಾಂಡಾ | ಕರಿಮರಡಿ ತಾಂಡಾ |
| 7. | 16-11-2000 | ಹುನಗುಂದಬಾಡಾ | ಗೋವಿಂದಪಲ್ಲಿ | ಜಾಗಟಕಲ್ | ಜಾಗಟಕಲ್ |
| 8. | 17-11-2000 | ನುಗಡೋಣಿ ಕ್ಯಾಂಪ್ | ನುಗಡೋಣಿ | ನವಲಕಲ್ | ನವಲಕ್ |
| 9. | 18-11-2000 | ಕುರಕುಂದಾ | ಚಿಂಚರಕಿ | ಹೀರಾ | ಹೀರಾ |
| 10. | 19-11-2000 | ಬುದ್ದಿನ್ನಿ | ಕಸನದೊಡ್ಡಿ | ನಾರಬಂಡಾ | ನಾರಬಂಡಾ |
| 11. | 20-11-2000 | ಮಾಡಗಿರಿ | ಹಳ್ಳಿಹೊಸೂರು | ಸಣ್ಣಹೊಸೂರು | ರಾಯಚೂರು |
| | | 10 | 10 | 11 | |

***ಕಲಾಜಾಥಾದಲ್ಲಿ ಪ್ರದರ್ಶನ ನೀಡಿದ ವಿವರ:***

**ಹಾಡುಗಳು:**

1. ಹಾಕ್ಸಮ್ಮ ಲಸಿಕೆ
2. ಜನಾರೋಗ್ಯ ಕಲಾಜಾಥಾ ಬಂತು ನಮ್ಮ ಊರಿಗೆ
3. ತಂದಾನೋ ತಾನು
4. ರೋಗ ಬಂದಾತು ಜೋಪಾನ
5. ಬನ್ನಿರೆ ಬನ್ನಿರೆ
6. ಗೆಲುವು ನಮ್ಮದು
7. ಏಡ್ಸ್‌ರೋಗ
8. ನೆಲಯಿಲ್ಲದ ಬದುಕು ನಮ್ಮದು
9. ಹೆಣ್ಣು ಮಗು ಒಂದು ಹುಟ್ಟಿದ ಮ್ಯಾಲೆ ಮುಟ್ಯಾಗಲೇ ಬೇಕು.
10. ಗ್ಯಾಟ್ ಒಪ್ಪಂದ
11. ನೋಡೋ ನೀ ರೈತ

ಗೀತರೂಪಕ: 1. ಕುಡಿ ಕುಡಿ ನಾ ಸ್ವರ್ಗವ, ಕುಡಿ ರಾತ್ರಿ ಕನಸಲ್ಲಿ 2. ಜ್ವರ ಬಂತು ಜ್ವರ ಬಂತು

ನಾಟಕ: 1. ವಿಸರ್ಜನೆ 2. ಬಾಡಿದ ಬದುಕು.

***ಕಲಾಜಾಥಾದ ಪೂರ್ವ ತಯಾರಿ:***

ಕಲಾಜಾಥಾ ಪ್ರತಿಯೊಂದು ಹಳ್ಳಿಗಳಲ್ಲಿ ಮಾಡುವಾಗ ಮೊದಲು ಶಾಲೆಯ ಮಕ್ಕಳೊಂದಿಗೆ ಪ್ರಭಾತ್ ಫೇರಿ ಹಾಗೂ ಡಂಗುರ ಸಾರುತ್ತ, ಹಾಡುಗಳ ಮೂಲಕ ಜನರು ಬರುವಂತೆ ಕಲಾತಂಡ ಹಾಗೂ ಊರಿನ ಪ್ರಮುಖರಿಂದ, ಗ್ರಾಮಸ್ಥರಿಂದ ಜನರೆಲ್ಲ ಸೇರುವ ಸ್ಥಳವನ್ನು ಗುರುತಿಸಿ ಡಂಗುರ ಸಾರುವ ಮೂಲಕ ಪೂರ್ವ ತಯಾರಿ ಮಾಡಲಾಯಿತು. ಅದರಂತೆ ಎಲ್ಲ 31 ಹಳ್ಳಿಗಳಲ್ಲೂ ಬಹಳ ಶಿಸ್ತಿನಿಂದ ಜನಾರೋಗ್ಯ ಕಲಾಜಾಥಾದಲ್ಲಿ ತಿಳಿಸುವ ಆರೋಗ್ಯದ ಮಾಹಿತಿ ಸಂಪೂರ್ಣವಾಗಿ ಗ್ರಾಮದ ಎಲ್ಲ ಜನರಿಗೆ ತಿಳಿಸಲು ಸಾಧ್ಯವಾಯಿತು.

**ತಾಲೂಕಾವಾರು ಭಾಗವಹಿಸುವಿಕೆ:**

| ಕ್ರ.ಸಂ. | ತಾಲೂಕು | ಹಳ್ಳಿಗಳು | ಮಹಿಳೆಯರು | ಪುರುಷರು | ಮಕ್ಕಳು | | ಒಟ್ಟು |
|---|---|---|---|---|---|---|---|
| | | | | | ಹೆಣ್ಣು | ಗಂಡು | |
| 1. | ರಾಯಚೂರು | 10 | 960 | 1400 | 1025 | 1135 | 4520 |
| 2. | ದೇವದುರ್ಗ | 9 | 530 | 925 | 790 | 965 | 3210 |
| 3. | ಮಾನ್ವಿ | 12 | 2857 | 2425 | 2864 | 2789 | 10935 |
| | | 31 | 4347 | 4750 | 4679 | 4889 | 18665 |

**ಕಲಾಜಾಥಾದವರು ಪ್ರದರ್ಶಿಸುವಾಗ ಜನರ ಪ್ರತಿಕ್ರಿಯೆ:**

ಈ ಕಾರ್ಯಕ್ರಮ ಮಾಡುವಾಗ ಜನರೆಲ್ಲರೂ ತುಂಬ ಶಿಸ್ತಿನಿಂದ ಕುಳಿತು ನೋಡುತ್ತಿದ್ದರು. ಕೆಲವೊಂದು ಸನ್ನಿವೇಶಗಳು ಬಂದಾಗ ಉದಾ: ವಿಸರ್ಜನೆಯಲ್ಲಿ ಬೆಳಿಗ್ಗೆ ಶೌಚಾಲಯಕ್ಕೆ ಹೋಗುವ ತೊಂದರೆ, ಹಂದಿಗಳ ಕಾಟ ತಮ್ಮದೇ ದಿನನಿತ್ಯ ನಡೆಯುವ ಕಷ್ಟ ಎಂದರು. ಜ್ವರ ಬಂದರೂ ದಿನಾಲೂ ದುಡಿದು ಬಂದು ನಮ್ಮ ಗೋಳು ಎಂದು ದುಃಖ ವ್ಯಕ್ತಪಡಿಸುತ್ತಿದ್ದರು. ವೃದ್ಧರ ಕಷ್ಟ ತಮ್ಮ ಮನೆಯಲ್ಲಿ ಹೇಗೆ, ತಂದೆ-ತಾಯಿಗಳಿಗೆ ಹಿಂಸೆ ಕೊಡುತ್ತಿದ್ದುದನ್ನು ಜ್ಞಾಪಿಸಿ ನಾಚಿಕೊಳ್ಳುತ್ತಿದ್ದರು. ಒಟ್ಟಾರೆ ತಮ್ಮ ಜೀವನದಲ್ಲಿ

ನಡೆಯುತ್ತಿರುವ ಜೀವನದ ಬಗ್ಗೆ ಇನ್ನು ಮುಂದೆ ಕುಡಿಯಬಾರದೆಂದು ಅರ್ಥಮಾಡಿಕೊಂಡರು ಹಾಗೂ ಉತ್ಸಾಹದಿಂದ, ಆಸಕ್ತಿಯಿಂದ ಪುರುಷರು, ಮಹಿಳೆಯರು, ವೃದ್ಧರು ಅದರಲ್ಲಿ ಮಕ್ಕಳಿಲ್ಲರೂ ತುಂಬ ಆಸಕ್ತಿಯಿಂದ ಪೂರ್ಣ ಮುಗಿಯುವವರಿಗೂ ಕುಳಿತುಕೊಂಡು ನೋಡಿದರು. ಕೊನೆಗೆ ಗ್ರಾಮದಿಂದ ಇಬ್ಬಿಬ್ಬರು ಬಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

**ಒಟ್ಟಾರೆ ರಾಯಚೂರು, ಮಾನ್ವಿ, ದೇವದುರ್ಗ ತಾಲೂಕಿನಲ್ಲಿ ಕಂಡುಕೊಂಡ ಸಮಸ್ಯೆಗಳು:**

1. **ರಾಯಚೂರು ತಾಲೂಕು:**

- ಊರು ಸ್ವಚ್ಛತೆಯಿಲ್ಲ.
- ಚರಂಡಿ ವ್ಯವಸ್ಥೆಗಳು ಇರುವುದಿಲ್ಲ, ರೋಡಿನ ತುಂಬ ಬಚ್ಚಲು ನೀರು ಹರಿಯುತ್ತಿದೆ.
- ಸಿಂಗನೋಡಿ ತಾಂಡಾ, ಕುರುಬದೊಡ್ಡಿಯಲ್ಲಿ ರೋಡಿನ ವ್ಯವಸ್ಥೆಗಳು ಸರಿಯಿಲ್ಲ, ಬಸ್ಸಿನ ಅನಾನುಕೂಲತೆ.
- ವೈಯಕ್ತಿಕ ಹಾಗೂ ಸಾಮೂಹಿಕ ಶೌಚಾಲಯ ಇರುವುದಿಲ್ಲ.
- ಸಿಂಗನೋಡಿ ತಾಂಡಾದಲ್ಲಿ ಶಿಕ್ಷಕರು ಇರುವುದಿಲ್ಲ, ಶಿಕ್ಷಕರ ಸಮಸ್ಯೆ.
- ಕೆಲವೊಂದು ಕಡೆ ಆರೋಗ್ಯ ಉಪಕೇಂದ್ರಗಳಿದ್ದರೂ ಸ್ಥಳೀಯವಾಗಿ ಯಾವ ವೈದ್ಯರು, ದಾಯಿಯರು ಇರುವುದಿಲ್ಲ. ಉದಾ: ಸಿಂಗನೋಡಿ, ಕಟ್ಲಟ್ಕೂರು
- ಎ.ಎನ್.ಎಂ. ಪಿ.ಹೆಚ್.ಸಿ. ಇರುವುದಿಲ್ಲ ಹಾಗೂ ಇದ್ದರೂ ಕೆಲವೊಂದು ಕಡೆ ಸರಿಯಾಗಿ ಬರುತ್ತಿಲ್ಲ. ಯೋಗ್ಯ ಸಂಬಂಧಪಟ್ಟ ಮಾತ್ರೆ, ಔಷಧಿಗಳ ವಿತರಣೆ ಸರಿಯಿರುವುದಿಲ್ಲ.

2. **ದೇವದುರ್ಗ ತಾಲೂಕು:**

- ಸಾರ್ವಜನಿಕ, ವೈಯಕ್ತಿಕ ಶೌಚಾಲಯವಿಲ್ಲ
- ಕುಡಿಯುವ ನೀರನ್ನು ಹಳ್ಳದಿಂದ ತಂದು ನೀರು ಕುಡಿಯುತ್ತಾರೆ. ಅಲ್ಲೇ ಶೌಚಾಲಯ ಮಾಡುತ್ತಾರೆ.
- ಎ.ಎನ್.ಎಂ. ಬರುವುದೇ ಇಲ್ಲ. ಬಂದರೂ ಸರಿಯಾದ ಮಾಹಿತಿ ಕೊಡುವುದಿಲ್ಲ.
- ಬಸ್ ವ್ಯವಸ್ಥೆ ಇರುವುದಿಲ್ಲ. ಇದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಸೇವೆ ಸಕಾಲದಲ್ಲಿ ದೊರೆಯುವುದಿಲ್ಲ.
- ಪಿ.ಹೆಚ್.ಸಿ. ಇದ್ದರೂ ಸರಿಯಾಗಿ ಡಾಕ್ಟರರು ಬರುವುದಿಲ್ಲ. ಕೆಲವು ಕಡೆ ಪಿ.ಹೆಚ್.ಸಿ. ಪ್ರಾರಂಭವಾಗಿ 6 ತಿಂಗಳಾಯಿತು.
- ದವಾಖಾನೆ ಕಟ್ಟಡ ಇರುವುದಿಲ್ಲ
- ಚರಂಡಿ ವ್ಯವಸ್ಥೆ ಇರುವುದಿಲ್ಲ.
- ಆಯುರ್ವೇದಿಕ್ ಡಾಕ್ಟರರು ಸರಿಯಾಗಿ ಬರುವುದಿಲ್ಲ.
- ರಸ್ತೆ ಸರಿಯಾಗಿ ಇರುವುದಿಲ್ಲ.
- ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಎಲ್ಲಿಯೂ ಇಲ್ಲ.

3. **ಮಾನ್ವಿ ತಾಲೂಕು:**

- ಎ.ಎನ್.ಎಂ. ಸರಿಯಾಗಿ ಬರುವುದಿಲ್ಲ. ಬಂದ ಕೆಲವು ಕಡೆ ಸರಿಯಾಗಿ ಮಾಹಿತಿ ಕೊಡುತ್ತಿಲ್ಲ.
- ವೈಯಕ್ತಿಕ ಹಾಗೂ ಸಾಮೂಹಿಕ ಶೌಚಾಲಯ ಇರುವುದಿಲ್ಲ.
- ಚರಂಡಿ ವ್ಯವಸ್ಥೆ ಇಲ್ಲ.

- ಬಸ್ಸಿನ ವ್ಯವಸ್ಥೆ ಇಲ್ಲ. ಇದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಸೇವೆ ಸಕಾಲದಲ್ಲಿ ದೊರೆಯುವುದಿಲ್ಲ.
- ಕುಡಿಯುವ ನೀರಿನ ತೊಂದರೆ
- ಬೀದಿದೀಪ. ತೊಂದರೆ
- ರೋಡ್ ಸರಿಯಿರುವುದಿಲ್ಲ. ಇದರಿಂದ ಆರೋಗ್ಯ ಸೇವೆ ಸಕಾಲದಲ್ಲಿ ದೊರೆಯುತ್ತಿಲ್ಲ.

**ಒಟ್ಟಾರೆ:**

- ♦ ಗ್ರಾಮ ಮಟ್ಟದಲ್ಲಿ ಪಿ.ಹೆಚ್.ಸಿ. ಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳಿಲ್ಲದೇ ಇರುವುದು.
- ♦ ಕುಟುಂಬ ಯೋಜನಾ ವಿಧಾನಗಳಿಗೆ ಮಹಿಳೆಯರನ್ನು ಗುರಿ ಮಾಡಿರುವುದು.
- ♦ ಗ್ರಾಮ ಮಟ್ಟದಲ್ಲಿ ಆರೋಗ್ಯ ಸಮಿತಿಗಳ ರಚನೆ ಆಗದಿರುವುದು. ಆಗಿದ್ದಲ್ಲಿ ವ್ಯವಸ್ಥಿತವಾಗಿ ಕಾರ್ಯ ಚಟುವಟಿಕೆ ನಡೆಯದಿರುವುದು.
- ♦ ಆರೋಗ್ಯ ತಪಾಸಣೆಯ ಹೆಚ್ಚಿನ ಸೌಲಭ್ಯ ಪಿ.ಹೆಚ್.ಸಿ. ಯಲ್ಲಿ ಇಲ್ಲದಿರುವುದು **ಉದಾ:** X-ray, ರಕ್ತ, ಮೂತ್ರ, ಗರ್ಭಧಾರಣೆಯ ತಪಾಸಣೆ.
- ♦ ಪಿ.ಹೆಚ್.ಸಿ. ಯ ವೈದ್ಯರು ಕರ್ತವ್ಯ ಲೋಪಿತರಾದಾಗ ಜನರು ಪ್ರಶ್ನಿಸಿದರೆ ತುರ್ತು ಪರಿಸ್ಥಿತಿಯಲ್ಲಿ ಕರೆದರೆ ಬರದೇ ಇರುವುದು, ಸಹಕರಿಸದೇ ಇರುವುದು.

**<u>ತಾಲೂಕಾವಾರು ಕಂಡಂತಹ ಕಾಯಿಲೆಗಳ ವಿವರ:</u>**

1. **ರಾಯಚೂರು ತಾಲೂಕು:**

- ಊರಿನಲ್ಲಿ ಹೆಚ್ಚಾಗಿ ಜವರ ಬರುತ್ತಿರುವದು
- ವಾಂತಿ-ಭೇದಿ
- ಪರಿಸರ ಸರಿಯಿಲ್ಲದ್ದಕ್ಕೆ ಈ ಎಲ್ಲ ಕಾಯಿಲೆ ಬರುವುದಿಲ್ಲ
- ಚಳಿಜ್ವರ, ಟೈಫಾಡ್ ಜ್ವರ
- ತಲೆನೋವು, ಕೆಮ್ಮು, ಗಂಟಲು ಬೇನೆ, ಕಾಮಣಿ
- ಕಣ್ಣುಬೇನೆ.

2. **ಮಾನ್ವಿ ತಾಲೂಕು:**

- ವಾಂತಿ-ಭೇದಿ
- ಟೈಫೈಡ್, ಕಾಮಾಲೆ, ಚಳಿಜ್ವರ
- ಪರಿಸರ ಸರಿಯಿರದಿರುವುದರಿಂದ ಕಾಮಾಣಿ, ಚರ್ಮರೋಗ, ಆನೆಕಾಲುರೋಗ.
- ಕ್ಷಯ, ದಮ್ಮು.

3. **ದೇವದುರ್ಗ ತಾಲೂಕು:**

- ಕಾಲರಾ, ಮಲೇರಿಯಾ,
- ಹೊಟ್ಟೆನೋವು, ಕೈಕಾಲು ನೋವು,
- ಕಣ್ಣು-ತಲೆನೋವು
- ಕಾಮಾಣಿ, ಟೈಫಾಡ್
- ವಿಡಸು, ಮೆದಳುಜ್ವರ

**ಪರಿಣಾಮ:** ಕಲಾಜಾಥಾ ಪ್ರದರ್ಶನವನ್ನು 31 ಹಳ್ಳಿಗಳಲ್ಲಿ ಹೋಗಿ ಸ್ವಾಗತ ಕಮಿಟಿ ರಚನೆ ಮಾಡುವಾಗ ಜನಾರೋಗ್ಯ ಜಾಥಾ ಬಗ್ಗೆ ಉದ್ದೇಶ ಹಿನ್ನಲೆ ತಿಳಿಸಿದಾಗ, ಕೆಲವೊಂದು ಹಳ್ಳಿಗಳು ಕಲಾಜಾಥಾ ಮಾಡುವುದಕ್ಕಿಂತ ಮುಂಚು ಶ್ರಮದಾನ ಮಾಡಿರುವುದು, ಕೆಲವೊಂದು ಕಡೆ ಕಲಾಜಾಥಾ ತಂಡದವರೊಂದಿಗೆ ಶ್ರಮದಾನ ಮಾಡಿರುವುದು.

- ಕೆಲವೊಂದು ಹಳ್ಳಿಗಳಲ್ಲಿ ಕಲಾಜಾಥಾ ಪ್ರದರ್ಶನದ ನಂತರ ಶ್ರಮದಾನ ಮಾಡಿರುವರು.
- ಕೆಲವೊಂದು ಹಳ್ಳಿಗಳಲ್ಲಿ ವೈಯಕ್ತಿಕ ಸ್ವಚ್ಛತೆ ಕಡೆ ಹಾಗೂ ಮನೆಯ ಸ್ವಚ್ಛತೆ ಕಡೆ ಗಮನ ಹರಿಸಿ ಮಾಡಿಕೊಂಡಿರುವರು.

**ಮಾಹಿತಿ ತಿಳಿಸಿದ ನಂತರ ಗ್ರಾಮಸ್ಥರು, ಮಹಿಳಾ ಸಮಖ್ಯಾ ಸಂಘದ ಮಹಿಳೆಯರು ತಾವೇ ಶ್ರಮದಾನ ಮಾಡಿಕೊಂಡ ಹಳ್ಳಿಗಳು:**

1. **ರಾಯಚೂರು ತಾಲೂಕು**
    1. ಕಟ್ಲಟ್ಕೂರು
    2. ವಡವಟ್ಟಿ
    3. ಜೇಗರಕಲ್
    4. ಮಲ್ಲಾಪೂರು
    5. ಜಾಗೀರ ವೆಂಕಟಾಪೂರು

2. **ದೇವದುರ್ಗ ತಾಲೂಕು:**
    1. ರಾಮದುರ್ಗ
    2. ಗೋವಿಂದಪಲ್ಲಿ
    3. ಜಾಗಟಕಲ್
    4. ಮಾನಸಯ್ಯನದೊಡ್ಡಿ
    5. ಹುನಗುಂದಬಾಡಾ

3. **ಮಾನ್ವಿ ತಾಲೂಕು:**
    1. ನುಗಡೋಣಿ
    2. ನುಗಡೋಣಿ ಕ್ಯಾಂಪ್
    3. ನವಲಕಲ್
    4. ಕುರುಕುಂದಾ
    5. ಹೀರಾ
    6. ನಾರಬಂಡಿ
    7. ಪೆಟಕನದೊಡ್ಡಿ
    8. ಬಿಂಚರಕಿ
    9. ಕಸನದೊಡ್ಡಿ
    10. ಮಾಡಗಿ 11. ಹಳ್ಳಿ 12. ಹಳ್ಳಿಹೊಸೂರು.

ಕಲಾಜಾಥಾ ತಂಡದೊಂದಿಗೆ ಮಹಿಳಾ ಸಮಖ್ಯಾ ಸಿಬ್ಬಂದಿ ಸಂಘದ ಮಹಿಳೆಯರು ಸೇರಿ ಶ್ರಮದಾನ ಮಾಡಿದ ಹಳ್ಳಿಗಳು:

1. ರಾಯಚೂರು ತಾಲೂಕು:
    1. ಸಿಂಗನೋಡಿ ತಾಂಡಾ - ಶಾಲೆ, ಅಂಗನವಾಡಿ

    2. ಕುರುಬದೊಡ್ಡಿ - ಶಾಲೆ, ಅಂಗನವಾಡಿ, ದೇವಸ್ಥಾನ, ಬೋರ್‌ವೆಲ್, ಗ್ರಾಮದ ಮುಖ್ಯರಸ್ತೆ

2. ದೇವದುರ್ಗ ತಾಲೂಕು:
    1. ಅಮರಾಪೂರ - ಬೋರ್‌ವೆಲ್, ಶಾಲೆ, ದೇವಸ್ಥಾನ
    2. ಚಿಕ್ಕಹೊನ್ನಕುಣಿ - ಅಂಗನವಾಡಿ, ಶಾಲೆ, ಬೋರ್‌ವೆಲ್ ಹತ್ತಿರ
    3. ಕೋತಿಗುಡ್ಡ - ಶಾಲೆ, ಹರಿಜನ ಓಣಿ


ಹಾಗೂ ಮರ್ಚೇಡ್ ಗ್ರಾಮ ದೊಡ್ಡದಿದೆ. ಕಾರ್ಯಕ್ರಮ ಮುಗಿದ ನಂತರ ಶ್ರಮದಾನ ಮಾಡುವುದೆಂದು ಮಹಿಳೆಯರು ತಾವೇ ತೀರ್ಮಾನಿಸಿ ಮಾಡಿಕೊಂಡರು.


ಒಟ್ಟು - 22 ಹಳ್ಳಿಗಳಲ್ಲಿ ಶ್ರಮದಾನ.

ಜನಾರೋಗ್ಯ ಕಲಾಜಾಥಾದಿಂದ ತಿಳಿದ ಮೇಲೆ ಆರೋಗ್ಯ ಹಾಗೂ ಸ್ವಚ್ಛತೆಯಿಂದ ಇರಬೇಕೆಂದು ಮಹಿಳಾ ಸಮಖ್ಯಾದ ಸಂಘದ ಮಹಿಳೆಯರೆಲ್ಲರು, ಮಹಿಳಾ ಸಮಖ್ಯಾ ಸಿಬ್ಬಂದಿ ಹಾಗೂ ಶಾಲೆ ಶಿಕ್ಷಕರು, ಮಕ್ಕಳು, ಊರಿನ ಗ್ರಾಮಸ್ಥರು, ಕಲಾತಂಡದವರೆಲ್ಲರೂ ಸೇರಿ ಶ್ರಮದಾನ ಮಾಡಿರುವರು.









# ಕಲಾಜಾಥಾ ನಡೆಸಿದ ಗ್ರಾಮಗಳ ಸಮಸ್ಯೆಗಳು ಹಾಗೂ ಶ್ರಮದಾನದ ಮಾಹಿತಿ

| ಕ್ರ. ಸಂ. | ತಾಲೂಕು | ಗ್ರಾಮ | ಶ್ರಮದಾನ ಮಾಡಿದವರ ವಿವರ | | ಕ್ಷೇತ್ರದ ಪ್ರಮುಖ ಸಾಮಾನ್ಯ ಕಾಯಿಲೆಗಳು | ಆರೋಗ್ಯಕ್ಕೆ ಸಂಬಂಧಿಸಿದಂತೆ ಗ್ರಾಮದಲ್ಲಿರುವ ಸಮಸ್ಯೆಗಳು |
|---|---|---|---|---|---|---|
| | | | ಕಲಾತಂಡದಿಂದ ಮ.ಸ.ಕ. ಸಿಬ್ಬಂದಿಗಳಿಂದ | ಮಹಿಳೆಯರು ಗ್ರಾಮಸ್ಥರಿಂದ | | |
| 1. | ದೇವದುರ್ಗ | ಅಮರಾಪೂರ | ಕಲಾ ತಂಡದವರು, ಶಿಕ್ಷಕರು, ಮಕ್ಕಳು ಕೂಡಿಕೊಂಡು ಶಾಲೆ ಮತ್ತು ದೇವಸ್ಥಾನ ಹಾಗೂ ಬೋರ್‌ವೆಲ್ ಸ್ವಚ್ಛತೆಯನ್ನು ಮಾಡಿದ್ದಾರೆ. | - | ಕಾಲರಾ, ಮಲೇರಿಯಾ, ಕೈ ಕಾಲು ನೋವು ಎದೆನೋವು, ಕಣ್ಣು - ತಲೆ ಉರಿತ ಕಾಮಣಿ, ಟೈಫಾಯಿಡ್. | ಸಾರ್ವಜನಿಕ, ವೈಯಕ್ತಿಕ ಶೌಚಾಲಯವಿಲ್ಲ, ಕುಡಿಯುವ ನೀರನ್ನು ಹಳ್ಳದಿಂದ ತಂದು ಕುಡಿಯುತ್ತಾರೆ ಅಲ್ಲಿಯೇ ಶೌಚಾಲಯ ಮಾಡುತ್ತಾರೆ, ಎ.ಎನ್.ಎಂ. ಬರುವದೇ ಇಲ್ಲ, ಬಸ್ ಇರುವದಿಲ್ಲ. |
| 2. | | ರಾಮದುರ್ಗ | | ಊರಿನ ಜನರು, ಸಂಘದ ಮಹಿಳೆಯರು ಅವರ ಮನೆಯ ಅಕ್ಕಪಕ್ಕ ಸ್ವಚ್ಛತೆಯನ್ನು ಮಾಡಿಕೊಂಡರೆ, ಮಕ್ಕಳು ಮತ್ತು ಶಿಕ್ಷಕರು ಶಾಲೆಯನ್ನು ಸ್ವಚ್ಛಗೊಳಿಸಿದರು. | | ಸಾರ್ವಜನಿಕ, ವೈಯಕ್ತಿಕ ಶೌಚಾಲಯವಿಲ್ಲ, ಪಿ.ಹೆಚ್.ಸಿ. ಇದ್ದರೂ ಸರಿಯಾಗಿ ಡಾಕ್ಟರ್ ಬರುವುದಿಲ್ಲ, ಪಿ.ಹೆಚ್.ಸಿ. ಪ್ರಾರಂಭವಾಗಿ 6 ತಿಂಗಳಲ್ಲಿ 3 ಜನ ಡಾಕ್ಟರರು ಬಂದು ಹೋದರು. ದವಾಖಾನೆಯ ಕಟ್ಟಡವಿರುವುದಿಲ್ಲ ಚರಂಡಿ ವ್ಯವಸ್ಥೆ ಇರುವುದಿಲ್ಲ. |
| 3. | | ಗೋವಿಂದಪಲ್ಲಿ | | — " — | | ಸಾರ್ವಜನಿಕ, ವೈಯಕ್ತಿಕ ಶೌಚಾಲಯವಿಲ್ಲ, ಕುಡಿಯುವ ನೀರನ್ನು ಹಳ್ಳದಿಂದ ತಂದು ಕುಡಿಯುತ್ತಾರೆ ಅಲ್ಲಿಯೇ ಶೌಚಾಲಯ ಮಾಡುತ್ತಾರೆ, ಎ.ಎನ್.ಎಂ. ಬರುವದೇ ಇಲ್ಲ, ರಸ್ತೆ ಸರಿಯಾಗಿಲ್ಲ ಹಾಗೂ ಬಸ್ ಇರುವದಿಲ್ಲ, ಆಯುರ್ವೇದಿಕ್ ದವಾಖಾನೆ ಇದ್ದರೂ ಡಾಕ್ಟರ್ ಬರುವುದೇ ಇಲ್ಲ. |
| 4. | | ಜಾಗಟಕಲ್ | | — " — | | ಸಾರ್ವಜನಿಕ ಶೌಚಾಲಯವಿದ್ದರೂ ಇಲ್ಲದಂತಾಗಿದೆ. ರಸ್ತೆ ಸರಿಯಾಗಿಲ್ಲ, ಬಸ್ ಸಂಚಾರವಿಲ್ಲ, ಚರಂಡಿ ಇದ್ದರೂ ಅದರ ಸರಿಯಾದ ಬಳಕೆ ಇಲ್ಲ. ಎ.ಎನ್.ಎಂ. ಬರುವದಿಲ್ಲ. ಕುಡಿಯುವ ನೀರನ್ನು ಹಳ್ಳದಿಂದ ತಂದು ಕುಡಿಯುತ್ತಾರೆ ಅಲ್ಲಿಯೇ ಶೌಚಾಲಯ ಮಾಡುತ್ತಾರೆ. |
| 5. | | ಮಾನಸಯ್ಯನದೊಡ್ಡಿ | | | | ಶೌಚಾಲಯ ಇಲ್ಲ, ನೀರಿನ ವ್ಯವಸ್ಥೆ ಇಲ್ಲ, ರಸ್ತೆ ಸರಿಯಾಗಿಲ್ಲ. |

| | | | | | | |
|---|---|---|---|---|---|---|
| 6. | | ಚಿಕ್ಕಹೊನ್ನಕುಣಿ | ಕಲಾತಂಡ ಹಾಗೂ ಮ.ಸ.ಕ. ಸಿಬ್ಬಂದಿ, ಊರಿನ ಜನರು, ಶಾಲಾ ಮಕ್ಕಳು ಶ್ರಮದಾನ ಮಾಡಿದ್ದಾರೆ. | ಸಂಘ ಮಹಿಳೆಯರೂ ಶ್ರಮದಾನ ಮಾಡಿದ್ದಾರೆ. | | ಶೌಚಾಲಯ ಇಲ್ಲ, ನೀರಿನ ವ್ಯವಸ್ಥೆ ಇಲ್ಲ, ಗ್ರಾಮ ಸ್ವಚ್ಛತೆ ಇಲ್ಲ. |
| 7. | | ಕೋತಿಗುಡ್ಡ | | | | ಶೌಚಾಲಯವಿಲ್ಲ, ಚರಂಡಿ, ರಸ್ತೆ ವ್ಯವಸ್ಥೆ ಇಲ್ಲ. |
| 8. | | ಕರಿಮರಡಿತಾಂಡಾ | | | | ಶಾಲೆ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ, ಸ್ವಚ್ಛತೆ ಇಲ್ಲ, ಕುಡಿತ ಇದೆ, ನೀರಿನ ವ್ಯವಸ್ಥೆ ಇಲ್ಲ, ಎ.ಎನ್.ಎಂ. ಬರುವುದಿಲ್ಲ. |
| 9. | | ಹುನಗುಂಡಬಾಡಾ | | | | ಬಸ್ಸಿನ ವ್ಯವಸ್ಥೆ ಇಲ್ಲ, ಎ.ಎನ್.ಎಂ ಬರುವುದಿಲ್ಲ, ದವಾಖಾನೆ ವ್ಯವಸ್ಥೆ ಇಲ್ಲ. |
| 10. | ಮಾನ್ವಿ | ನುಗಡೋಣಿ ಕ್ಯಾಂಪ್ | | ಸಂಘದ ಮಹಿಳೆಯರು ಮತ್ತು ಊರಿನ ಜನರು ತಮ್ಮ ಓಣಿ, ಮನೆ ಸ್ವಚ್ಛತೆ ಮಾಡಿಕೊಂಡಿದ್ದಾರೆ. | ವಾಂತಿ-ಭೇದಿ, ಟೈಫಾಯಿಡ್, ಕಾಮಾಲೆ ರೋಗ, ಚಳಿಜ್ವರ. | ಎ.ಎನ್.ಎಂ. ಸರಿಯಾಗಿ ಬರುವುದಿಲ್ಲ, (ವೈಯಕ್ತಿಕ, ಸಾಮೂಹಿಕ) ಶೌಚಾಲಯ ವಿರುವುದಿಲ್ಲ, ಚರಂಡಿ ವ್ಯವಸ್ಥೆ ಇಲ್ಲ, ಬಸ್ಸಿನ ವ್ಯವಸ್ಥೆ ಇಲ್ಲ |
| 11. | | ನುಗಡೋಣಿ | | — " — | | — " — |
| 12. | | ನವಲಕಲ್ | | — " — | | ಶೌಚಾಲಯ ಇಲ್ಲ, ಚರಂಡಿ ಇಲ್ಲ, ಕುಡಿಯುವ ನೀರಿನ ತೊಂದರೆ, ಬೀದಿದೀಪ ತೊಂದರೆ ಇದೆ. |
| 13. | | ಕುರಕುಂದಾ | | ಮಹಿಳೆಯರು, ಗ್ರಾಮಸ್ಥರು ನೀರಿನ ಟಾಕಿ ತೊಳೆದಿದ್ದಾರೆ, ತಗ್ಗು-ದಿನ್ನಗಳಿರುವ ರಸ್ತೆಗಳಿಗೆ ಮಣ್ಣನ್ನು ಹಾಕಿದ್ದಾರೆ ಬೋರ್‌ವೆಲ್ ಸುತ್ತ ಮಣ್ಣು ಹಾಕಿಸಿ ಕುಡಿಯುವ ನೀರಿಗೆ ಪೌಡರ್ ಹಾಕಿಸಿದ್ದಾರೆ. | | — " —<br>ಎ.ಎನ್.ಎಂ. ಬರುವುದೇ ಇಲ್ಲ. |
| 14. | | ಚಿಂಚರಕಿ | | ಊರಿನ ಜನರಿಗೆ ಸ್ವಚ್ಛತೆ ಮಾಡಲು ತಿಳಿಸಿ ಹೇಳಲಾಗಿದೆ | | ಶೌಚಾಲಯವಿಲ್ಲ, ಎ.ಎನ್.ಎಂ. ಬರುವುದಿಲ್ಲ. |
| 15. | | ಹೀರಾ | | ಊರಿನ ಜನರು ಮತ್ತು ಮಹಿಳೆಯರು ಮನೆ ಮತ್ತು ಓಣಿ ಸ್ವಚ್ಛಗೊಳಿಸಿರುವರು. | | ಚರಂಡಿ ವ್ಯವಸ್ಥೆ ಇಲ್ಲ, ವೈಯಕ್ತಿಕ-ಸಾಮೂಹಿಕ ಶೌಚಾಲಯ ವ್ಯವಸ್ಥೆ ಇಲ್ಲ. |
| 16. | | ಪಟಕನದೊಡ್ಡಿ | | ಕಲಾಜಾಥಾ ಮಾಡುವ ಸ್ಥಳದ ಸ್ವಚ್ಛತೆ, ಮನೆಯಲ್ಲಿ ಹಾಗೂ ಓಣಿ ಸ್ವಚ್ಛಗೊಳಿಸಿರುವರು. | | ನೀರಿನ ತೊಂದರೆ, ಬೀದಿದೀಪ ತೊಂದರೆ, ಶೌಚಾಲಯವಿಲ್ಲ, ಎ.ಎನ್.ಎಂ. ಬರುವುದಿಲ್ಲ. |
| 17. | | ಕಸನದೊಡ್ಡಿ | | | | ಚರಂಡಿ ವ್ಯವಸ್ಥೆ ಇಲ್ಲ, ಎ.ಎನ್.ಎಂ. ಬರುವುದಿಲ್ಲ. |

| | | | | | | |
|---|---|---|---|---|---|---|
| 18. | | ನಾರಬಂಡಾ | | ಮಹಿಳೆಯರು ಓಣಿಯಲ್ಲಿ ಹಾಗೂ ಬೀದಿನಾಟಕವಾಡುವ ಸ್ಥಳ ಸ್ವಚ್ಛ ಮಾಡಿರುವರು. | | ನೀರಿನ ತೊಂದರೆ ಇದೆ, ಬೀದಿದೀಪದ ವ್ಯವಸ್ಥೆ ಇಲ್ಲ, ಶೌಚಾಲಯವಿಲ್ಲ, ಎ.ಎನ್.ಎಂ. ಬರುವುದಿಲ್ಲ. |
| 19. | | ಮಾಡಗಿರಿ | ಶ್ರಮದಾನ ಮಾಡಿಲ್ಲ | | | |
| 20. | | ಹಳ್ಳಿಹೊಸೂರು | " | | | |
| 21. | | ಸಣ್ಣಹೊಸೂರು | " | | | |
| 22. | ರಾಯಚೂರು | ಸಿಂಗನೋಡಿ ತಾಂಡಾ | ಕಲಾತಂಡ ಹಾಗೂ ಮ.ಸ.ಕ. ಸಿಬ್ಬಂದಿ, ಊರಿನ ಜನರು, ಶಾಲಾ ಮಕ್ಕಳು ಶ್ರಮದಾನ ಮಾಡಿದ್ದಾರೆ. | ಸಂಘ ಮಹಿಳೆಯರೂ ಶ್ರಮದಾನ ಮಾಡಿದ್ದಾರೆ. | ವಾಂತಿ-ಭೇದಿ, ಜ್ವರ ಬಹಳ ಇದೆ. | ಶೌಚಾಲಯ ಇಲ್ಲ, ರಸ್ತೆ ಸರಿಯಾಗಿಲ್ಲ, ಬಸ್ಸಿನ ವ್ಯವಸ್ಥೆ ಇಲ್ಲ. |
| 23. | | ಕುರುಬದೊಡ್ಡಿ | — " — | — " — | | ಶೌಚಾಲಯ ಇಲ್ಲ, ಚರಂಡಿ ಇಲ್ಲ, ಸ್ವಚ್ಛತೆಇಲ್ಲ |
| 24. | | ವಡವಟ್ಟಿ | | | | ಚರಂಡಿ ವ್ಯವಸ್ಥೆ ಇಲ್ಲ, ರಸ್ತೆ ಸರಿಯಾಗಿಲ್ಲ ತಗ್ಗು ದಿನ್ನುಗಳಿವೆ, ಶೌಚಾಲಯ ಸಮಸ್ಯೆ. |
| 25. | | ಜೇಗರಕಲ್ | | ಸಂಘ ಮಹಿಳೆಯರು ಹಾಗೂ ಹಳ್ಳಿಯ ಗ್ರಾಮಸ್ಥರು ಸೇರಿ ತಮ್ಮ ಓಣಿ, ದೇವಾಲಯ, ಬಾವಿ ಹಾಗೂ ನಳದ ಸುತ್ತ ಸ್ವಚ್ಛತೆ ಮಾಡಿದ್ದಾರೆ. ಇದೇ ರೀತಿ ಪ್ರತಿ ಸಲ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ | | ಪಿ.ಹೆಚ್.ಸಿ. ಇದೆ. ಸರಿಯಾದ ವ್ಯವಸ್ಥೆ ಇಲ್ಲ. ಶೌಚಾಲಯವಿಲ್ಲ (ವೈಯಕ್ತಿಕ, ಸಾಮೂಹಿಕ), ಎ.ಎನ್.ಎಂ. ಬರುವುದಿಲ್ಲ, ಆರೋಗ್ಯ ವ್ಯವಸ್ಥೆ ಇಲ್ಲ. |
| 26. | | ಮನ್ಸಲಾಪೂರ | | — " — | | ಶೌಚಾಲಯವಿಲ್ಲ (ವೈಯಕ್ತಿಕ, ಸಾಮೂಹಿಕ), ಎ.ಎನ್.ಎಂ. ಬರುವುದಿಲ್ಲ, ಆರೋಗ್ಯ ವ್ಯವಸ್ಥೆ ಇಲ್ಲ. |
| 27. | | ಮಲ್ಲಾಪೂರ | | — " — | | — " — |
| 28. | | ಜಾಗೀರ ವೆಂಕಟಾಪೂರ | | — " — | | — " — |
| 29. | | ಗೋನಾಳ | ಶ್ರಮದಾನ ಮಾಡಿಲ್ಲ | | | — " — |
| 30. | | ಮರ್ಚೇಡ್ | " | | | — " — |
| 31. | | | | | | — " — |
| 32. | | | | | | |
| 33. | | | | | | |
| 34. | | | | | | |
| 35. | | | | | | |
| 36. | | | | | | |

## ಮೂರು ತಾಲೂಕಿನ ಜನಾರೋಗ್ಯ ಸಂವಾದದಿಂದ ಗಳಿಸಿದ ಮಾಹಿತಿಯ ವರದಿ ವಿಧಾನದ ಪಟ್ಟಿ

**ತಾಲೂಕಾ** ರಾಯಚೂರು

ಕಲಾ ಜಾಥಾ ಮಾಡಿದ ಹಳ್ಳಿಗಳು ಕಟ್ಲಟ್ಕೂರು, ಕುರುಬದೊಡ್ಡಿ, ವಡವಟ್ಟಿ, ಸಿಂಗನೋಡಿತಾಂಡಾ, ಮರ್ಚೇಡ್, ಜೇಗರಕಲ್, ಮಲ್ಲಾಪೂರು, ಮನ್ಸಲಾಪೂರ, ಜಾಗೀರ ವೆಂಕಟಾಪೂರ, ಗೋನಾಳ.

### ಯೋಜನಾ ಪ್ರದೇಶದ ಮೂಲ ಮಾಹಿತಿ

1. ಭೌಗೋಳಿಕ
2.
3. ಜನಸಂಖ್ಯೆ 31,200
4. ಜಾತಿವಾರು ವಿಂಗಡನೆ ಹರಿಜನ (ಮಾದಿಗರು) ತೆಂಗರು, ಒಡ್ಡರು, ನಾಯಕರು, ತಾಂಡಾಜನರು, ಕುರುಬರು, ಲಿಂಗಾಯತ, ಮುಸ್ಲಿಂ

### 1.ಜನರ ಸಾಮಾಜಿಕ/ರಾಜಕೀಯ ಹಿನ್ನೆಲೆ:

ಸಾಮಾಜಿಕ ಹಿನ್ನೆಲೆ: ಸಿಂಗನೋಡಿ ತಾಂಡಾದವರು ಬೇರೆ ಯಾವ ದೇವರುಗಳಿಗೆ ಪೂಜಿ ಮಾಡುವುದಿಲ್ಲ. ತಮ್ಮದೇ ಆದ ದೇವರಿಗೆ ಪೂಜೆ ಮಾಡುವರು. ಅದೇ ಊರು ಬಿಟ್ಟು ಯಾವ ಊರಿಗೆ ಹೋಗಿ ಯಾರ ಜೊತೆ ಸೇರುವುದಿಲ್ಲ.

### ರಾಜಕೀಯ ಹಿನ್ನೆಲೆ:

- ಕಟ್ಲಟ್ಕೂರು - ಗೌಡರು ಹಾಗೂ ಊರಿನ ಗ್ರಾ.ಪಂ. ಸದಸ್ಯರ ಹಿಡಿತದಲ್ಲಿದೆ.
- ಮಲ್ಲಾಪೂರು - ಊರಿನ ಮುಖಂಡರ ಹಿಡಿತದಲ್ಲಿದೆ.
- ಜೇಗರಕಲ್ - ಊರಿನ ಮುಖಂಡರ ಹಾಗೂ ಗ್ರಾ.ಪಂ. ಸದಸ್ಯರ ಹಿಡಿತದಲ್ಲಿದೆ.
- ಮನ್ಸಲಾಪೂರ- ಊರಿನ ಮುಖಂಡರ ಗೌಡರ ಹಿಡಿತದಲ್ಲಿದೆ.

### ಲಭ್ಯವಿರುವ ಮೂಲ ಸೌಲಭ್ಯಗಳು

**2.ನೀರು:**

1. ಮೂಲಗಳು - ಬಾವಿ, ಬೋರ್‌ವೆಲ್, ನಳಗಳು, ಕೆರೆ.
2. ಲಭ್ಯತೆ - ಮರ್ಚೇಡ್ - ಇದೆ ಆದರೆ ಊರಿಗೆ ಒಂದೇ ಇದೆ. ಜಾ. ವೆಂಕಟಾಪೂರು - 1 ಕಿ.ಮಿ. ಹೋಗಿ ನೀರು ಬಾವಿಯಿಂದ ತರಬೇಕು, ಮಲ್ಲಾಪೂರ - ನೀರು ಇದೆ. ಆದರೆ ಸಿಹಿನೀರಿನ ಅನುಕೂಲವಿಲ್ಲ.
3. ಅವಕಾಶ - ಜಾ. ವೆಂಕಟಾಪೂರ - 1 ಕಿ.ಮೀ. ದೂರ ಹೋಗಿ ನೀರು ತರಬೇಕು. ಸಿಹಿ ನೀರಿನ ಅನುಕೂಲವಿಲ್ಲ. ಮನ್ಸಲಾಪೂರ - 1/2 ಕಿ.ಮೀ. ದೂರ ಹೋಗಿ ಬೋರ್‌ವೆಲ್ ನೀರು ತರಬೇಕು, ಅದು ಊರೊಳಗೆ.
4. ಗುಣಮಟ್ಟ - ಶೇ. 50 ರಷ್ಟು ಉಪ್ಪು ನೀರು.

**3.ನೈರ್ಮಲ್ಯ:**

1. ನೀರಿನ ಸೌಲಭ್ಯದ ಸುತ್ತಮುತ್ತ ಸ್ವಚ್ಛತೆ ಶೇಕಡ 70 ರಷ್ಟು ಸ್ವಚ್ಛತೆ ಇದೆ.
2. ರಸ್ತೆಗಳ ಪರಿಸ್ಥಿತಿ: ಸಿಂಗನೋಡಿ ತಾಂಡಾ, ಕುರುಬದೊಡ್ಡಿ, ಗೋನಾಳ ರಸ್ತೆಗಳು ಸರಿಯಿರುವುದಿಲ್ಲ.
3. ಇಂಗು ಬಚ್ಚಲು/ಗುಂಡಿಗಳು: ಜೇಗರಕಲ್‌ನಲ್ಲಿ ಮಾತ್ರ 3-4 ಜನರಿಗೆ ಇಂಗು ಗುಂಡಿಗಳು ಇವೆ. ಉಳಿದ ಕಡೆಯಿಲ್ಲ.
4. ಗ್ರಾಮದಲ್ಲಿ ಮಲ ವಿಸರ್ಜನೆ ಮಾಡುವ ಜಾಗಗಳು: ಜಾ. ವೆಂಕಟಾಪೂರು ಕ್ಯಾನಲ್ ಮೇಲೆ ಉಳಿದ ೯ ಹಳ್ಳಿಗಳಲ್ಲಿ ಬಸ್ಸು ಹೋಗುವ ರಸ್ತೆ, ಹೊಲದಲ್ಲಿ ಹೊರಗಡೆ ತಿಪ್ಪೆ ಸ್ಥಳದಲ್ಲಿ

**ವಸತಿ:**

1. ಮಾಳಿಗೆ ಮನೆಗಳು: ಶೇಕಡ 35 ರಷ್ಟು
2. ಹೆಂಚಿನ ಮನೆಗಳು: ಶೇ. -
3. ಗುಡಿಸಿಲುಗಳು: ಶೇ 65 ರಷ್ಟು

**4.ವಿದ್ಯುಚ್ಛಕ್ತಿ:**

1. ಎಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಇದೆ - ಶೇ. 75 ರಷ್ಟು ಇದೆ. ಒಂದು ಹಳ್ಳಿಯಲ್ಲಿ 500 ಮನೆಗಳು ಇವೆ. 100 ಮನೆಗಳಿ ಇಲ್ಲ.

**5.ಸಾರ್ವಜನಿಕ ವಿತರಣಾ ವ್ಯವಸ್ಥೆ:** ವಿತರಣೆ ಸಮಯದಲ್ಲಿ ಬಂದಂತಹ ಆಹಾರ ಬೇಗನೆ ವಿತರಿಸುವುದಿಲ್ಲ.

1. ನ್ಯಾಯಬೆಲೆ ಅಂಗಡಿ ವಡವಟ್ಟಿ, ಮನ್ನಲಾಪೂರಿನಲ್ಲಿದೆ. ಆದರೆ ನ್ಯಾಯಬೆಲೆ ಅಂಗಡಿ ಎಲ್ಲ ಹಳ್ಳಿಗಳಲ್ಲಿ ಇಲ್ಲ. ಎರಡು ಮೂರು ಹಳ್ಳಿಗೆ ಒಂದು ನ್ಯಾಯಬೆಲೆ ಅಂಗಡಿ ಇರುತ್ತದೆ.
2. ಅಂಗಡಿಯ ಬಗ್ಗೆ ಸಮುದಾಯ ಅಭಿಪ್ರಾಯ: ಇರುವ 2-3 ಹಳ್ಳಿಗೆ ಒಂದು ನ್ಯಾಯಬೆಲೆ ಅಂಗಡಿ ಇದ್ದರೂ ಸರಿಯಾಗಿ ವೇಳೆಗೆ ತಕ್ಕಂತೆ ವಿತರಿಸುವುದಿಲ್ಲ. ತುಂಬಾ ಕಾಯಬೇಕು. ವಿತರಣೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಕೂಡ ಕೊಡುತ್ತಾರೆ.

**6.ಕಸುಬು/ವೃತ್ತಿ:** 1. ಕೂಲಿ 2. ವ್ಯವಸಾಯ ಆ ಪ್ರದೇಶದ ಮುಖ್ಯ ಕಸುಬು

**7.ಶಿಕ್ಷಣ ಸೌಲಭ್ಯಗಳು:** ಶಾಲೆ 1. ಪ್ರಾಥಮಿಕ ಶಾಲೆ 1 ರಿಂದ 4 ನೇ ತರಗತಿ ಈ 10 ಹಳ್ಳಿಗಳಲ್ಲಿ ಇವೆ. 2. ಮಾಧ್ಯಮಿಕ 5 ರಿಂದ 7 ನೇ ತರಗತಿಗಳು ಜೇಗರಕಲ್, ಮರ್ಚೆಡ್. 3. ಪ್ರೌಢಶಾಲೆಗಳು ಜೇಗರಕಲ್‌ನಲ್ಲಿ ಮಾತ್ರ ಇವೆ.

**ಅಂಗನವಾಡಿ /ಬಾಲವಾಡಿ:** ಈ 10 ಹಳ್ಳಿಗಳಲ್ಲಿ ಅಂಗನವಾಡಿ ಶಾಲೆಗಳು ಇರುತ್ತವೆ. ಬಾಲವಾಡಿ ಇಲ್ಲ.

**ಪಂಚಾಯತ್ ವ್ಯವಸ್ಥೆ:**

1. ಆ ವ್ಯವಸ್ಥೆಯ ಬಗ್ಗೆ ಸಮಯದಾಯ ಅಭಿಪ್ರಾಯ: ಜೇಗರಕಲ್, ಮನ್ನಲಾಪೂರು, ಜಾ. ವೆಂಕಟಾಪೂರ ಈ ಮೂರು ಹಳ್ಳಿಯಲ್ಲಿ ಮಾತ್ರ ಪಂಚಾಯತ್ ವ್ಯವಸ್ಥೆ ಇದೆ. ಉಳಿದದ ಕಡೆ ಇಲ್ಲ. ಆದರೆ ಪಂಚಾಯತ್‌ದಲ್ಲಿ ಜನರಲ್ಲಿ ಒಳ್ಳೆ ಆತ್ಮವಿಶ್ವಾಸ ಇಲ್ಲ. ಕೇವಲ ರಾಜಕೀಯ ದುರುಪಯೋಗ. ನಮ್ಮಂತಹ ಬಡಜನರಿಗಾಗಿ ಅಲ್ಲ ಎಂಬ ಅನಿಸಿಕೆ.
2. ಇದು ಸಮುದಾಯಕ್ಕೆ ಎಷ್ಟು ಪ್ರಯೋಜನಕಾರಿ: ಶೇ. 35 ರಷ್ಟು
3. ಇದರಿಂದ ಸಮುದಾಯಕ್ಕೆ ಏನಾದರೂ ಸಮಸ್ಯೆ ಆಗಿದೆಯಾ - ಗ್ರಾ.ಪಂ. ಅಧ್ಯಕ್ಷರು ಕಾರ್ಯದರ್ಶಿ, ಹೆಚ್ಚಾಗಿ ಬರುವುದಿಲ್ಲ. ಪಂ. ಕಾರ್ಯಾಲಯ ಬೀಗ ಹಾಕಿ ಬಹಳ ಸಮಸ್ಯೆ.

**ಆ ಪ್ರದೇಶದ ಮುಖ್ಯ ಆರೋಗ್ಯ ಸಮಸ್ಯೆಗಳು:**

1. ಸಾಮಾನ್ಯ ಸಮಸ್ಯೆಗಳು: ಚಳಿಜ್ವರ, ಕಜ್ಜಿ, ಭೇದಿ, ವಾಂತಿ, ಟಾಯ್ಫೆಡ್, ಕಾಮಾಣಿ, ಕಣ್ಣುಬರುವುದು.
2. ಮಹಿಳೆಯರ ಆರೋಗ್ಯ ಸಮಸ್ಯೆಗಳು: ಹೆರಿಗೆಯ ತೊಂದರೆ, ಬಿಳಿಮುಟ್ಟು, ಕೆಂಪು ಮುಟ್ಟು, ಕೈಕಾಲು ಸೊಂಟ ನೋವು, ಮೈ ಹೊರ ಬೀಳುವುದು.
3. ಮಕ್ಕಳ ಆರೋಗ್ಯ ಸಮಸ್ಯೆಗಳು: ವಾಂತಿ ಭೇದಿ, ಕಾಮಾಣಿ, ಕಣ್ಣಿನ ನೋವು, ಕಜ್ಜಿ.
4. ಕಾಲಮಾನದ ಆರೋಗ್ಯ ಸಮಸ್ಯೆಗಳು: ವಾಂತಿಭೇದಿ, ಕಜ್ಜಿ, ಕಣ್ಣು ಕೆಂಪಾಗುವುದು, ಸೆಕೆ ಹಿಡಿಯುವುದು, ತಟ್ಟು ಬರುವುದು.

<u>ಲಭ್ಯವಿರುವ ಮುಖ್ಯ ಆರೋಗ್ಯ ಸೇವೆಗಳು:</u>

ಸರ್ಕಾರಿ: ಪೋಲಿಯೋ, ಚುಚ್ಚುಮದ್ದು, ಕುಟುಂಬ ನಿಯಂತ್ರಣಾ ಯೋಜನೆ, ಉದಾ: ಕಾಪರ್ಟಿ, ನಿರೋದ್, ಬಾಣಂತಿಯರ ಔಷಧೋಪಚಾರಗಳು.
ಖಾಸಗಿ: ಆರ್.ಎಂ.ಪಿ. ಡಾಕ್ಟರ್, ಆಯುರ್ವೇದಿಕ್ ಔಷಧಿ, ಸ್ಥಳೀಯ ನಾಟಿ ವೈದ್ಯರು, ದಾಯಿಯರು.
ಸ್ವಯಂ ಸೇವಾ ಸಂಸ್ಥೆ ಇತ್ಯಾದಿ: ಆರೋಗ್ಯ ಶಿಬಿರದ ಮೂಲಕ ಮಾಹಿತಿ.

<u>ಆ ಪ್ರದೇಶದ ಮುಖ್ಯ ಸಾಮಾಜಿಕ ಸಮಸ್ಯೆಗಳು:</u>


ಜಾತೀಯತೆ, ಲಿಂಗಭೇದ, ಕುಡಿತ, ಬಾಲ್ಯವಿವಾಹ, ವರದಕ್ಷಿಣೆ, ಮಹಿಳೆಯರ ಮೇಲೆ ಅತ್ಯಾಚಾರ, ಮಹಿಳೆಯರ ಮೇಲೆ ದೈಹಿಕ ಹಿಂಸೆ, ಕೂಲಿ ಅಸಮಾನತೆ, ಅನಕ್ಷರತೆ.

<u>ಈ ಸಮಸ್ಯೆಗಳನ್ನು ಪರಿಹರಿಸಲು ಜನರ ಉಪಕ್ರಮಗಳು:</u>

ಶೇ 50 ರಷ್ಟು ಸಂಘಟನೆಗಳ ಮುಖಾಂತರ ಬದಲಾವಣೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಗ್ರಾ.ಪಂ. ಮೀಸಲಾತಿಯಿಂದ ಮಹಿಳೆಯರು ಸ್ವಲ್ಪ ಬದಲಾವಣೆ ಕಾಣುತ್ತಿದ್ದಾರೆ. ಇತರೆ ಸ್ವಯಂ ಸೇವಾ ಸಂಸ್ಥೆಗಳಿಂದ ಮಾಹಿತಿ ಮತ್ತು ಪ್ರೇರಣೆ.

<u>ಸಮುದಾಯದ ಅಭಿವೃದ್ಧಿ ಜನರ ಉಪಕ್ರಮಗಳು:</u>

ಸಾಕ್ಷರತೆ ಮತ್ತು ಶಿಕ್ಷಣ ಹಾಗೂ ಸಂಘಟನೆ ಮೂಲಕ ಸ್ವಲ್ಪ ಬದಲಾವಣೆಗೆ ಪ್ರಯತ್ನ ಮಾಡುತ್ತಿದ್ದಾರೆ.



# ಜನಾರೋಗ್ಯ ಸಂವಾದದಿಂದ ಗಳಿಸಿದ ಮಾಹಿತಿಯನ್ನು ವರದಿ ವಿಧಾನದ ಪಟ್ಟಿ


1. ತಾಲೂಕಾ ದೇವದುರ್ಗ
2. ಕಲಾಜಾಥಾ ಮಾಡಿದ ಹಳ್ಳಿಗಳು: ಹುನಗುಂದಬಾಡಾ, ಕರಿಮರಡಿತಾಂಡಾ, ಚಿಕ್ಕಹೊನ್ನಕುಣಿ, ಮಾನಸಯ್ಯನ ದೊಡ್ಡಿ, ಕೋತಿಗುಡ್ಡ, ಅಮರಾಪೂರ, ರಾಮದುರ್ಗ, ಜಾಗಟಕಲ್, ಗೋವಿಂದಪಲ್ಲಿ.
3. ಭೌಗೋಳಿಕ: 100 ಎಕರೆಯಿಂದ 500 ಎಕರೆವರೆಗೆ ಇದೆ.
4. ಜಾತಿವಾರು ವಿಂಗಡನೆ: ಲಿಂಗಾಯತ, ಕುರುಬರು, ನಾಯಕರು, ಬುದ್ಧರು, ಎಸ್.ಸಿ., ಎಸ್.ಟಿ., ಲಂಬಾಣಿ ಇತರೆ.
5. ರಾಜಕೀಯ ಹಿನ್ನೆಲೆ: ಎಲ್ಲೆಲ್ಲೂ ಮುಖಂಡರ ಕೈಯಲ್ಲಿರುವುದು.
6. ಲಭ್ಯವಿರುವ ಮೂಲ ಸೌಲಭ್ಯಗಳು:
   ಅ) ಕೆರೆ, ಭಾವಿ, ನಳ, ಬೋರ್‌ವೆಲ್, ಹೊಂಡದಿಂದ ತೆಗೆದು ನೀರು ಕುಡಿಯುವುದು.
   ಆ) ಗುಣಮಟ್ಟ: ಎಷ್ಟು ನೀರು ಲೀ. 25 ರಷ್ಟು ಸಿಹಿ ನೀರು, 75 ರಷ್ಟು.
   ಇ) ನೀರಿನ ಸಂಪನ್ಮೂಲ: ಅಮರಾಪೂರ, ಜಾಗಟಕಲ್ ಗುಂಡಿಯಿಂದ ನೀರು ತೆಗೆದು ಕುಡಿಯುತ್ತಾರೆ.
7. ನೈರ್ಮಲ್ಯ: ಬೋರ್‌ವೆಲ್ ನಳದ ಸುತ್ತ ಮುತ್ತ ಸ್ವಚ್ಛತೆ, ಮೊದಲಿನಿಂದ ಇದ್ದ ಹಳ್ಳಿಗಳು ಹುನಗುಂದಬಾಡಾ, ಕೋತಿಗುಡ್ಡ.
   - ಈ ಮೇಲಿನ ಹಳ್ಳಿಗಳಿಗೆ ರಸ್ತೆ ದುರಸ್ತಿ ಇದೆ.
   - ಇಂಗು ಬಚ್ಚಲು: ಗುಂಡಿಗಳ ವ್ಯವಸ್ಥೆ ಇಲ್ಲದಿರುವುದು.
   - ಈ ಮೇಲಿನ ಗ್ರಾಮದಲ್ಲಿ ಮಲವಿಸರ್ಜನೆ ಮಾಡುವ ಜಾಗಗಳು ತಮ್ಮ ಓಣಿಯ ಮುಂದೆ ಊರು ಬಿಟ್ಟು ಒಂದು ಕಿ.ಮೀ. ದೂರ.
8. ವಸತಿ: ಆರ್.ಸಿ.ಸಿ. 2000, ಗುಡಿಸಲು 6,000.
9. ವಿದ್ಯುಚ್ಛಕ್ತಿ: 6,000 ಮನೆಗಳಿಗೆ ಲೈಟಿನ ವ್ಯವಸ್ಥೆ ಇದೆ. 2,000 ಮನೆಗಳಿಗೆ ಲೈಟಿನ ವ್ಯವಸ್ಥೆ ಇಲ್ಲ.
10. ನ್ಯಾಯಬೆಲೆ ಅಂಗಡಿ: ಶಾಖಾಪೂರ, ಮುಷ್ಠೂರ, ಕೋತಿಗುಡ್ಡ ರೇಷನ್ ವಿತರಣೆ ಮಾಡುತ್ತಾರೆ. ಈ ಒಂದು ತಿಂಗಳಿಂದ ಕೊಡುತ್ತಾ ಇಲ್ಲ.
11. ಕಸುಬು: ವೃತ್ತಿ: ಕೂಲಿ, ಜಾಸ್ತಿ ಮನೆ ಕಟ್ಟಡ ಕೆಲಸ.
12. ಶಿಕ್ಷಣ ಸೌಲಭ್ಯಗಳು: 1 ರಿಂದ 4 ರವರೆಗೆ, 4 ರಿಂದ 7 ರವರೆಗೆ ಇದೆ. 7 ನೇ ತರಗತಿಯಿಂದ 10 ನೇ ತರಗತಿಗೆ 6 ಕಿ.ಮೀ. ದೂರ ಹೋಗಬೇಕು.
13. ಒಂದು ಹಳ್ಳಿಯಲ್ಲಿ ಅಂಗನವಾಡಿ ಶಾಲೆ ಇಲ್ಲ. (ಹುನಗುಂದಬಾಡಾ) ಉಳಿದ ಹಳ್ಳಿಯಲ್ಲಿ ಇದೆ.
14. ಪಂಚಾಯ್ತಿ: ರಾಮದುರ್ಗ, ಮುಷ್ಠೂರು, ಇರಬಗೇರಾ, ಜಾಗೀರ ಜಾಡಲದಿನ್ನಿ, ಅರಕೇರಾ ಪಂಚಾಯ್ತಿಯ ಕೆಲಸ ಸರಿಯಾಗಿ ನಡೀತಾ ಇಲ್ಲ ಮತ್ತು ಉದಾ: ಮನೆ ವಿತರಣೆ, ಭಾಗ್ಯಜ್ಯೋತಿ ಇತರೆ.
15. ಆರೋಗ್ಯ: ಮಸರಕಲ್, ಗಬ್ಬೂರು, ಅರಕೇರಾ, ದೇವದುರ್ಗ, ರಾಮದುರ್ಗ ಪಿ.ಹೆಚ್.ಸಿ. ಗಳು ಇವೆ.


ಸಮಸ್ಯೆ: ಪಿ.ಹೆಚ್.ಸಿ. ದೂರವಿರುವುದರಿಂದ ಸಮಸ್ಯೆಗಳು ಇವೆ.

## ಜನಾರೋಗ್ಯ ಸಂವಾದದಿಂದ ಗಳಿಸಿದ ಮಾಹಿತಿಯನ್ನು ವರದಿ ವಿಧಾನದ ಪಟ್ಟಿ

1. ತಾಲೂಕಾ ಮಾನ್ವಿ
2. ಕಲಾಜಾಥಾ ಮಾಡಿದ ಹಳ್ಳಿಗಳು: ನುಗಡೋಣಿ ಕ್ಯಾಂಪ್, ನವಲಕಲ್, ಕುರಕುಂದಾ, ಚಿಂಚರಕಿ, ಹೀರಾ, ಪಟಕನದೊಡ್ಡಿ, ಕಸನದೊಡ್ಡಿ, ನಾರಬಂಡಾ, ಮಾಡಗಿರಿ, ಹಳ್ಳಿಹೊಸೂರು, ಸಣ್ಣಹೊಸೂರು.
3. ಭೌಗೋಳಿಕ: 1500 ರಿಂದ 2000 ಎಕರೆ, ಜನಸಂಖ್ಯೆ: 1 ಲಕ್ಷ ಅಂದಾಜು.
4. ಜಾತಿವಾರು ವಿಂಗಡಣೆ - ಲಿಂಗಾಯಿತ, ನಾಯಕರು, ಕುರುಬ, ಉಪ್ಪಾರ, ಕಬ್ಬಲಿಗ, ಎಸ್.ಸಿ., ಎಸ್.ಟಿ., ಬುದ್ಧ, ಕ್ರಿಸ್ತರು, ಲಂಬಾಣಿ.
5. ರಾಜಕೀಯ ಹಿನ್ನಲೆ: ಹೆಚ್ಚು ಈ ತಾಲೂಕಿನಲ್ಲಿ ಊರಿನ, ಗೌಡರ ಕೈಯಲ್ಲಿ ಹಾಗೂ ರಾಜಕೀಯ ವ್ಯಕ್ತಿಗಳ ಕೈಯಲ್ಲಿರುವುದು ಕಂಡು ಬಂದಿದೆ.
6. ರಾಜಕೀಯ: ಈ ಗ್ರಾಮಗಳಲ್ಲಿ ಹೆಚ್ಚು ಅಷ್ಟೊಂದು ರಾಜಕೀಯ ಕಂಡು ಬಂದಿಲ್ಲ ಹಾಗೂ ಊರಿನ ಗೌಡರ ಹತ್ತಿರ ಇರುತ್ತದೆ ಹಾಗೂ ಇಲ್ಲಿ ಪಂಚಾಯ್ತಿಗಳನ್ನು ಹೊರತುಪಡಿಸಿ ಯಾವುದೂ ರಾಜಕೀಯ ಕಂಡು ಬಂದಿಲ್ಲ.
7. ಲಭ್ಯವಿರುವ ಮೂಲಭೂತ ಸೌಲಭ್ಯಗಳು: ಕೆರೆ, ಭಾವಿ, ನಳ, ಬೋರ್‌ವೆಲ್, ಹೊಂಡ, ಹಳ್ಳ, ಕೆನಾಲ್ ಇತ್ಯಾದಿಗಳಿಂದ ನೀರು ಕುಡಿಯುವುದು.
8. ನೀರಿನ ಸಂಪನ್ಮೂಲ: ಕುರಕುಂದಾ, ಚಿಂಚರಕಿ, ಹೀರಾ, ಕಸನದೊಡ್ಡಿ, ನಾರಬಂಡಿ, ಹೊಸಳ್ಳಿ-ಟ್ಯಾಂಕ್, ಮಾಡಗಿರಿ-ನಳದ ವ್ಯವಸ್ಥೆ.
   ನೀರಿನ ಸಂಪನ್ಮೂಲವಿಲ್ಲದ ಹಳ್ಳಿ: ನುಗಡೋಣಿ, ನುಗಡೋಣಿ ಕ್ಯಾಂಪ್.
9. ಶ್ರಮದಾನದ ಮೂಲಕ ಸ್ವಚ್ಛತೆ ಮಾಡಿದ ಹಳ್ಳಿ: ಕುರಕುಂದಾ, ಹೀರಾ, ಚಿಂಚರಕಿ, ಕಸನದೊಡ್ಡಿ, ನುಗಡೋಣಿ, ನವಲಕಲ್, ನುಗಡೋಣಿ ಕ್ಯಾಂಪ್.
10. ರಸ್ತೆಗಳು: ಮೇಲಿನ ಎಲ್ಲಾ ಹಳ್ಳಿಗೆ ರಸ್ತೆ ಸೌಕರ್ಯ ಇದೆ ಹಾಗೂ ಬಸ್ಸಿನ ವ್ಯವಸ್ಥೆ ಇದೆ. ರಸ್ತೆ ಇಲ್ಲದ ಹಳ್ಳಿ - ನುಗಡೋಣಿ, ನುಗಡೋಣಿ ಕ್ಯಾಂಪ್, ಹಳ್ಳಿಹೊಸೂರು, ಮಾಡಗಿರಿ.
11. ಇಂಗು ಬಚ್ಚಲು ಯಾವ ಹಳ್ಳಿಯಲ್ಲಿ ಇಲ್ಲ.
12. ಈ ಮೇಲಿನ ಯಾವ ಹಳ್ಳಿಯಲ್ಲೂ ಮಲ ವಿಸರ್ಜನೆಗಳು ಇಲ್ಲ. ಇದಕ್ಕಾಗಿ ಹೊರಗೆ, ತಿಪ್ಪೆಗುಂಡಿ, ಕೆನಾಲ್ ರಸ್ತೆ, ಹೊಲಗಳಿಗೆ ಒಟ್ಟು 1 ಕಿ.ಮೀ. ನಡೆದುಕೊಂಡು ಹೋಗುತ್ತಾರೆ.
13. ವಸತಿ: 2000 ರಿಂದ 6000 ದವರೆಗೆ ಗುಡಿಸಲುಗಳಿವೆ.
14. ವಿದ್ಯುಚ್ಛಕ್ತಿ: 800 ರಿಂದ 900 ಲೈಟಿನ ವ್ಯವಸ್ಥೆ ಇದೆ. ಇನ್ನುಳಿದ ಹಳ್ಳಿಗಳಲ್ಲಿ 8,900 ಹಳ್ಳಿಗಳಲ್ಲಿ ಇಲ್ಲ.
15. ನ್ಯಾಯಬೆಲೆ ಅಂಗಡಿ: ನುಗಡೋಣಿ, ನವಲಕಲ್, ಕುರಕುಂದಾ, ಚಿಂಚರಕಿ, ಹೀರಾ, ಕಸನದೊಡ್ಡಿ, ನಾರಬಂಡಿ, ಮಾಡಗಿರಿ ಇದೆ.
16. ಕಸುಬು: ಭತ್ತ ಬೆಳೆಯುವುದು, ಬುಟ್ಟಿ ಹೆಣೆಯುವುದು, ಹೊಲದ ಕೂಲಿ ಕೆಲಸ.
17. ಶಿಕ್ಷಣ ಸೌಲಭ್ಯ: ಈ ಮೇಲೆ ತಿಳಿಸಿದ ಹಳ್ಳಿಗಳಲ್ಲಿ 1 ರಿಂದ 4 ತರಗತಿಯವರೆಗೆ ಶಾಲೆಗಳು ಇವೆ. ಕೆಲವು ಹಳ್ಳಿಯಲ್ಲಿ 1 ರಿಂದ 10 ನೇ ತರಗತಿ.
18. ಅಂಗನವಾಡಿ ಶಾಲೆ ಎಲ್ಲಾ ಹಳ್ಳಿಯಲ್ಲಿ ಇದೆ.
19. ಪಂಚಾಯ್ತಿ: ಮಲ್ಲಟ, ಹೀರಾ, ಮಾಡಗಿರಿ.
20. ಆರೋಗ್ಯ ಇಲಾಖೆ: ಈ ಮೇಲಿನ ಹಳ್ಳಿಗಳು, ಕೌತಾಳ ಪಿ.ಹೆಚ್.ಸಿ. ಮತ್ತು ಬಲ್ಲಟಗಿ ಪಿ.ಹೆಚ್.ಸಿ. ಗೆ ಬರುತ್ತವೆ. ಸುಮಾರು 35 ಕಿ.ಮೀ. ದೂರ ಹೋಗಬೇಕು. ಈ ಹಳ್ಳಿಗೆ ಪಿ.ಹೆಚ್.ಸಿ. ದೂರ ಇರುವುದರಿಂದ ಸಮಸ್ಯೆಗಳು ಬಹಳ ಇವೆ.
    1. ಮಹಿಳೆಯರಿಗೆ ಮೂಲಭೂತ ಸಮಸ್ಯೆ.
    2. ಹೆರಿಗೆಗೆ ಕೋಣೆಗಳಿಲ್ಲ.
    3. ವಾಹನ ಸೌಕರ್ಯ ಇತ್ಯಾದಿ.

21. ಮಹಿಳೆಯರ ಆರೋಗ್ಯ: ಗರ್ಭಿಣಿ ಸ್ತ್ರೀ ಸಮಸ್ಯೆ, ಜ್ವರ ಹಾಗೂ ಇತರೆ ಕಾಯಿಲೆಗಳು, ಆರೋಗ್ಯ ಇಲಾಖೆಯಲ್ಲಿ ಮಹಿಳಾ ವೈದ್ಯರು ಇಲ್ಲದ ಕಾರಣ ಗುಪ್ತ ಕಾಯಿಲೆಗಳ ಬಗ್ಗೆ ಮಹಿಳೆಯರಿಗೆ ತುಂಬಾ ಸಮಸ್ಯೆಯಾಗಿದೆ. ಮಕ್ಕಳ ವೈದ್ಯರು ಇಲ್ಲದ ಕಾರಣ ಮಕ್ಕಳಿಗೆ ಆರೋಗ್ಯ ಸಮಸ್ಯೆ ಜಾಸ್ತಿಯಾಗುತ್ತಲಿದೆ. ಲಭ್ಯವಿರುವ ಮುಖ್ಯ ಆರೋಗ್ಯ ಸೇವೆಗಳು ಯಾವುದೂ ಇಲ್ಲ. ಯಾವುದೇ ಖಾಸಗಿ ಔಷಧೋಪಚಾರಗಳು ಕಂಡುಬಂದಿಲ್ಲ. ಇತ್ಯಾದಿ.





**ಅನಿಸಿಕೆ**

31 ಹಳ್ಳಿಯಿಂದ ಕಲಾಜಾಥಾ ಪ್ರದರ್ಶಿಸಿದ ನಂತರ ತಮ್ಮ ತಮ್ಮ ಅನಿಸಿಕೆಯನ್ನು ಈ ಕೆಳಕಂಡಂತೆ ವ್ಯಕ್ತಪಡಿಸಿದರು.

- ನಮ್ಮ ಹಳ್ಳಿಯನ್ನು ನಾವು ಸ್ವಚ್ಛತೆಯಿಂದ ಇಡುವದು ಒಳ್ಳೆಯದು. ನಮ್ಮ ಹಳ್ಳಿಗಳಲ್ಲಿ ರೋಗ ಹೇಗೆ ಬರುತ್ತದೆ ಅಂದರಿಂದ ಎಂತಹ ಪರಿಣಾಮಗಳು ಬೀರುತ್ತವೆ ಎಂಬುವದು ನಾಟಕದ ಮುಖಾಂತರ ತಿಳಿಯಿತು. ಇದರಿಂದ ನೀವು ಒಳ್ಳೆಯ ಮುನ್ನೆಚ್ಚರಿಕೆಗಳನ್ನು ತಿಳಿಸಿದ್ದಿರಿ. ಇಂತಹ ಮುನ್ನೆಚ್ಚರಿಕೆಗಳು 3 -4 ತಿಂಗಳಿಗೊಮ್ಮೆ ಮೂಡಿಸಿದರೆ ಜನ ಸುಧಾರಿಸುತ್ತಾರೆ. ಇಂತಹ ಒಳ್ಳೆಯ ಕಾರ್ಯಕ್ರಮ ನಮ್ಮ ಹಳ್ಳಿಯ ಭಾಷೆಯಲ್ಲಿ ಹೇಳಿದ್ದು ಯಾವುದೂ ಸಿನಿಮಾ ನಾಟಕದಲ್ಲಿ ಸಿಗುವುದಿಲ್ಲ. ಜನರನ್ನು ಬಡಿದೆಬ್ಬಿಸಿದಂತಾಯಿತು ಎಂದರು.
- ನಮ್ಮ ಜನರಿಗೆ ಗಿಡ ಬೆಳೆಸುವ ಮಹತ್ವ ತಿಳಿಸಿದ್ದೀರಿ. ಈ ಕಾರ್ಯಕ್ರಮ ಮಕ್ಕಳಿಗೆ ಚಟುವಟಿಕೆ ಆಧಾರಿತ ಪಾಠವಾಯಿತು. ಇದರಿಂದ ಮೂಢನಂಬಿಕೆ ಹೋಗುತ್ತದೆ, ಅರಿವು ಸಿಗುತ್ತದೆ ಮತ್ತು ವಯೋವೃದ್ಧರ ಸೇವೆ ಮಾಡುವುದು ಮನಮುಟ್ಟುವಂತೆ ತಿಳಿಯಿತು. ಇದು ಒಂದು ಜೀವನದ ಸಾರ್ವಜನಿಕರಿಗೆ ಮಾರ್ಗದರ್ಶನ ಮತ್ತು ತೃಪ್ತಿ ತಂದಿದೆ ಎಂದರು.
- ವಿಶೇಷ ಸೂಚನೆ: ಏಡ್ಸ್ ರೋಗದ ಬಗ್ಗೆ ಹಾಡು ಮಾಹಿತಿ ಸಾಲದು. ಅದು ಒಂದು ನಾಟಕದ ಮುಖಾಂತರ ತಿಳಿಸಬೇಕು ಎಂದರು.
- ಸಮಾಜದ ಅನಿಷ್ಟ ಪಿಡುಗು, ಕುಡಿತದ ನಿರ್ಮೂಲನೆ ಮತ್ತು ಗುಟ್ಕಾ, ಗಾಂಜಾ ತಂಬಾಕು ಸೇವನೆ ಹಾನಿಕಾರಕ ಎಂದು ನಾಟಕದ ಮೂಲಕ ಜನರಿಗೆ ತಿಳಿಸಿ ಎಂದರು.
- ಜನಸಂಖ್ಯಾ ನಿಯಂತ್ರಣಕ್ಕಾಗಿ ಕುಟುಂಬ ಕಲ್ಯಾಣ ಕಾರ್ಯಕ್ರಮದ ನಾಟಕ ಮಾಡಿ ತಿಳಿಸಬೇಕು ನಮ್ಮ ಹಳ್ಳಿಗಳಲ್ಲಿ ಎಂದರು.
- ಕೌತಾಳ (PHC) ಆರೋಗ್ಯ ಶಿಕ್ಷಕ ಎಂ. ಕೊಟ್ರಪ್ಪ ಭಾಗವಹಿಸಿ ಅವರು ಆರೋಗ್ಯದ ಬಗ್ಗೆ ತಿಳಿಸುವ ಈ ಕಾರ್ಯಕ್ರಮದಿಂದ ಜನರು ಬೇಗ ಎಚ್ಚರವಹಿಸುತ್ತಾರೆ ಎಂದರು.
- ಸಿ.ಆರ್.ಸಿ. ಜಿಲ್ಲಾ ಸಹಯೋಜಕರು ತ್ರಿಮೂರ್ತಿ ಆರೋಗ್ಯ ಮತ್ತು ಅಕ್ಷರದ ಬಗ್ಗೆ ತಿಳಿಸುತ್ತಾ, ಇಂತಹ ಜಾಥಾಗಳಿಂದ ವಿಷಯಗಳು ಜನರ ಮನಮುಟ್ಟುತ್ತವೆ ಎಂದರು.
- ಪರಿಸರದಲ್ಲಿ ನಡೆಯುವಂಥ ವಿಷಯವನ್ನು ಮನಮುಟ್ಟುವಂತೆ ಹಾಗೂ ಬುದ್ಧಿ ತರುವಂಥ ಕಾರ್ಯಕ್ರಮ ನಡೆಸಿದ್ದಾರೆ.
- ಕುಡಿಯುವ ಅಂಗಡಿ ಊರ ಹೊರಗೆ ಇರಬೇಕು.

**<u>ಕ್ರಿಯಾಯೋಜನೆ (ಟಾಸ್ಕ್) :</u>**

31 ಹಳ್ಳಿಯಲ್ಲಿ ಇನ್ನು ಮುಂದೆ ಕಲಾಜಾಥಾ ನೋಡಿದ ನಂತರ ತಿಳುವಳಿಕೆ ಬಂದಿದೆ. ಈ ಕೆಳಕಂಡ ಕೆಲಸವನ್ನು ಮಾಡಬೇಕೆಂದು ತಿಳಿಸಲಾಯಿತು.


- ಊರು ಸ್ವಚ್ಛತೆಯಿಟ್ಟುಕೊಳ್ಳಬೇಕು.
- ಮನೆಯ ಮುಂದೆ ಗಿಡ ಬೆಳೆಸಬೇಕು
- ಶ್ರಮದಾನ ಮಾಡಬೇಕು ಹಾಗೂ ಸುತ್ತಮುತ್ತ ಮನೆಯಲ್ಲಿ ಸ್ವಚ್ಛ ಇಡಬೇಕು
- ಶೌಚಾಲಯ ಮಾಡಿಸಿಕೊಳ್ಳಿರಿ. ಅದಕ್ಕಾಗಿ ಗ್ರಾ.ಪಂ. ಅರ್ಜಿ ಕೊಡಬೇಕೆಂದು ತಿಳಿಸಲಾಯಿತು.
- ಕುಡಿಯುವುದನ್ನು ಬಿಡಬೇಕು.

- ಎ.ಎನ್.ಎಂ. ಡಾಕ್ಟರ್ ಬರುವಂತೆ ಪಿ.ಹೆಚ್.ಸಿ. ಹೋಗಿ ಕೇಳಬೇಕು.
- ಸಮಯಕ್ಕೆ ಸರಿಯಾಗಿ ಔಷಧಿಗಳು ಉಚಿತವಾಗಿ ಪಿ.ಹೆಚ್.ಸಿ. ಯಲ್ಲಿ ಸಿಗುತ್ತವೆ, ಪಡೆಯಬೇಕು.
- ಚರಂಡಿ ವ್ಯವಸ್ಥೆ ಮಾಡಿಸಿಕೊಳ್ಳಬೇಕು.
- ವೈಯಕ್ತಿಕ ಸ್ವಚ್ಛತೆ ಕಡೆ ಗಮನ ಕೊಡಬೇಕು. ಉದಾಃ ದಿನಾಲೂ ಅಡುಗೆಯ ಮೇಲೆ ಮುಚ್ಚಳ ಮುಚ್ಚುವುದು, ಮಕ್ಕಳನ್ನು ಸ್ವಚ್ಛವಾಗಿಡುವುದು.
- ರೋಡಿನ ವ್ಯವಸ್ಥೆ ಮಾಡಿಸಿಕೊಳ್ಳಿರಿ, ಸಂಬಂಧ ಪಟ್ಟವರಿಗೆ ಅರ್ಜಿ ಕೊಡಿರಿ.
- ಬಸ್ಸು ಬಾರದಿದ್ದಲ್ಲಿ ಹೋಗಿ ಕೇಳಬೇಕು.

<u>ತೀರ್ಮಾನಃ</u>

- ಸಿಂಗನೋಡಿ ತಾಂಡಾ - ರೋಡ್ ಸರಿಯಿಲ್ಲ, ಬಸ್ಸಿನ ವ್ಯವಸ್ಥೆಯಿಲ್ಲ, ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಯವರಿಗೆ ಅರ್ಜಿ ಕೊಡುವುದು.
- ಕಟ್ಲಟ್ಕೂರು - ಸ್ವಚ್ಛತೆಯಿಂದ ಇರುತ್ತೇವೆ. ಕುಡಿಯುವುದನ್ನು ಬಿಡಲು ಪ್ರಯತ್ನಿಸುತ್ತೇವೆ.
- ಶೌಚಾಲಯಕ್ಕಾಗಿ ವಡವಟ್ಟಿಯವರಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಕೊಡುತ್ತೇವೆ.
- ದೇವದುರ್ಗ ತಾಲೂಕಿನ ಹಳ್ಳಿಗಳು ಶೌಚಾಲಯಕ್ಕಾಗಿ ಅರ್ಜಿ ಕೊಡುತ್ತೇವೆ ಎಂದರು.
- ವೈಯಕ್ತಿಕ ಸ್ವಚ್ಛತೆಯಿಂದ ಇರುತ್ತೇವೆ.
- ಎ.ಎನ್.ಎಂ. ಬರಲಿಕ್ಕೆ ಅರ್ಜಿ ಕೊಡುತ್ತೇವೆ ಎಂದರು. ನೀರು ಹರಿಯುವಂತೆ ದೇವದುರ್ಗ ತಾಲೂಕಿನ ಹಳ್ಳಿಗಳಲ್ಲಿ ಗುಂಡಿಗಳನ್ನು ತೋಡಿ ಬಚ್ಚಲು ನೀರು ಬಿಡುತ್ತೇವೆ ಎಂದರು.
- ಮಕ್ಕಳಿಗೆ ತಂತ್ರ - ಮಂತ್ರ ಹಾಕಿಸುವುದಿಲ್ಲ, ದವಾಖಾನೆಗೆ ತೋರಿಸುತ್ತೇವೆ ಎಂದರು.
- ತಿಪ್ಪೆಗಳನ್ನು ತೆಗೆಯುವುದು ಹಾಗೂ ಬೋರ್‌ವೆಲ್ ಹತ್ತಿರ ಸ್ವಚ್ಛವಾಗಿರುವಂತೆ ನೋಡುತ್ತೇವೆ ಎಂದರು.
- ಮಾನ್ವಿ ತಾಲೂಕಿನ ಕುರುಕುಂದಾ, ಪಟಕನದೊಡ್ಡಿಯಲ್ಲಿ ಸರಾಯಿ ಅಂಗಡಿ ಬಗ್ಗೆ ಹೋರಾಟ ಮಾಡುತ್ತೇವೆ ಎಂದರು.
- ಉಳಿದ ಹಳ್ಳಿಗಳಲ್ಲಿ ಶ್ರಮದಾನ ಮಾಡುತ್ತೇವೆ ಎಂದರು.

****



ಅಡಕ - 1.

ಜನಾರೋಗ್ಯ ಸಭೆ-2000
ಭಾರತ ಜ್ಞಾನ ವಿಜ್ಞಾನ ಸಮಿತಿ ರಾಯಚೂರು
ಜನಾರೋಗ್ಯ ಸಭೆ-2000 ಜಿಲ್ಲಾ ಕಾರ್ಯಾಗಾರ
ದಿ. 20-10-2000 ರಿಂದ 22-10-2000 ವರೆಗೆ.

3 ದಿನದ ಕಾರ್ಯಾಗಾರದ ವರದಿ

ಪ್ರಾಯೋಜಕರು: ಲಯನ್ಸ್ ಕ್ಲಬ್ ರಾಯಚೂರು, ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಗೂ ಮಹಿಳಾ ಸಮಖ್ಯಾ ರಾಯಚೂರು. ದಿನಾಂಕ: 20-10-2000 ರಂದು ಬೆಳಗ್ಗೆ 11-30 ಕ್ಕೆ ಲಕ್ಷ್ಮಿರೆಡ್ಡಿ ಹಾಗೂ ಸಂಗಡಿಗರ ಹಾಡಿನೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಉದ್ಘಾಟಕರು: ಶ್ರೀಮತಿ ಕೆ. ಸರಸ್ವತಿ ಜಿ.ಪಂ. ಅಧ್ಯಕ್ಷರು, ಅಧ್ಯಕ್ಷರು: ಡಾ. ಎನ್. ಕುಮಾರ, ಸಂಘಟನಾ ಸಮಿತಿ ಅಧ್ಯಕ್ಷರು, ಮುಖ್ಯ ಅತಿಥಿಗಳು: ಡಾ. ಬಿ.ಎಫ್. ಅಪ್ಪಣ್ಣನವರ್, ಡಿ.ಎಚ್.ಓ. ರಾಯಚೂರು, ಡಾ ಎಸ್.ಬಿ. ಮಾನ್ವಿಕರ್, ಡಿ.ಎಸ್. ಜಿಲ್ಲಾ ಆಸ್ಪತ್ರೆ ರಾಯಚೂರು, ಶ್ರೀ ಎಸ್. ನಾಗರಾಜ ಲಯನ್ಸ್ ಕ್ಲಬ್ ರಾಯಚೂರು, ಶ್ರೀ ಲೀಲಾ ಕುಲಕರ್ಣಿ ಮಹಿಳಾ ಸಮಖ್ಯಾ ಕರ್ನಾಟಕ ರಾಯಚೂರು, ಶ್ರೀ ಸುರೇಶ್ ಕುಷ್ಟಗಿ ಪ್ರತಿಧ್ವನಿ ಸಂಘ ದೇವದುರ್ಗ, ಶ್ರೀಮತಿ ಫಾತಿಮಾ ಬೇಗಂ ಪ್ರಾಂಶುಪಾಲರು ಡೈಯಟ್, ಶ್ರೀಮತಿ ಎಸ್. ಸಿದ್ದಪ್ಪ ಸಾ.ಸಂ.ಕ. ದೇವದುರ್ಗ.

ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಎಫ್.ಸಿ. ಬೇಗರೆಡ್ಡಿ, ಬಿ.ಜಿ.ವಿ.ಎಸ್. ಕರ್ನಾಟಕ ಜನಾರೋಗ್ಯ ಸಭೆ-2000 ದ ಬಗ್ಗೆ ಮಾಹಿತಿ ನೀಡಿದರು. 2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಘೋಷಣೆ ಏನಾಯಿತು? ಇದನ್ನು ಅಸ್ತಿತ್ವಕ್ಕೆ ತರಲು 132 ರಾಷ್ಟ್ರಗಳು ಒಪ್ಪಿಕೊಂಡಿದ್ದವು. ಆದರೆ ವಿಫಲವಾದದ್ದೇಕೆ? ಇಂದಿನ ಜನಾರೋಗ್ಯದ ಸ್ಥಿತಿಗತಿ ಬಗ್ಗೆ ವಿವರಿಸುತ್ತಾ, ಜನರಿಗೆ ಆರೋಗ್ಯ ವಿಷಯಗಳನ್ನು ತಿಳಿಸಿ, ಜನಾರೋಗ್ಯದ ಇಂದಿನ ಪರಿಸ್ಥಿತಿಗೆ ಕಾರಣವನ್ನು ಹುಡುಕಿ ಜನರ ಸಹಾಯದಿಂದ ಅದನ್ನು ಸರಿಪಡಿಸಲು ಸರಕಾರವನ್ನು ಎಚ್ಚರಿಸುವುದೇ ಜನಾರೋಗ್ಯ ಸಭೆ-2000 ದ ಗುರಿ. ಈ ಸಭೆ ಜಿಲ್ಲೆ, ರಾಜ್ಯ, ರಾಷ್ಟ್ರ ಜಾಗತಿಕ ಮಟ್ಟದಲ್ಲಿ ನಡೆಯುತ್ತದೆಂದು ಈ ಮೂರು ದಿನದ ಕಾರ್ಯಾಗಾರಕ್ಕೆ ಜಿಲ್ಲೆಯ ಬೇರೆ ಬೇರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸುತ್ತಾರೆಂದು ವಿವರಿಸಿದರು.

ಉದ್ಘಾಟಕರಾದ ಶ್ರೀಮತಿ ಕೆ. ಸರಸ್ವತಿ ಮಾತನಾಡುತ್ತಾ, ಇಂತಹ ಜನಾರೋಗ್ಯ ಸಭೆಗಳು ನಡೆಯಬೇಕು, ಜನರಿಗೆ ಜನಾರೋಗ್ಯದ ಬಗ್ಗೆ ಅರಿವು ಮೂಡಿಸಬೇಕು, ಸಮುದಾಯದ ಪಾತ್ರ ಇದರಲ್ಲಿ ಬಹಳ ಮುಖ್ಯ. ಇಂತಹ ಜನಪರ ಕಾರ್ಯಕ್ರಮಕ್ಕೆ ನನ್ನ ಸಹಾಯ ಸಹಕಾರವಿದೆ. ಇದರಲ್ಲಿ ನಾವು ಸಕ್ರಿಯವಾಗಿ ಭಾಗವಹಿಸುತ್ತೇವೆ ಎಂದು ನುಡಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಡಾ. ಎನ್. ಕುಮಾರ ಜನಾರೋಗ್ಯದ ಸಂದೇಶವನ್ನು ಗುರಿಯನ್ನು ಮುಟ್ಟೋಣ, ಸರಕಾರವನ್ನು ಎಚ್ಚರಿಸೋಣವೆಂದರು. ಶ್ರೀ ಸಿದ್ದಪ್ಪ ವಂದಿಸಿದರು. ಶ್ರೀ ಬಿ.ಎಫ್. ಅಪ್ಪಣ್ಣನವರು ಜಿಲ್ಲೆಯ ಆರೋಗ್ಯ ಸ್ಥಿತಿಗತಿ ತಿಳಿಸುತ್ತಾ, ಜಿಲ್ಲೆಯ ಆರೋಗ್ಯ ಸಮರ್ಪಕವಾಗಿಲ್ಲ, ಶಿಶು ಮರ ಬಾಣಂತಿ ಮರಣ, ಸಾಂಕ್ರಾಮಿಕ ರೋಗಗಳು ಕುರಿತು ಉಪನ್ಯಾಸವನ್ನು ಮಂಡಿಸಿದರು. ಎರಡನೆಯ ಉಪನ್ಯಾಸಕರಾಗಿ ಡಾ. ಎಸ್.ಬಿ. ಮಾನ್ವಿಕರ್ ಅವರು ಏಡ್ಸ್ ಬಗ್ಗೆ ಮಂಡಿಸಿದರು. ಏಡ್ಸ್ ಲಕ್ಷಣ, ಉಪಾಯದ ಬಗ್ಗೆ ಮಾಹಿತಿ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಗುಂಪು ಚರ್ಚೆ ನಡೆಯಿತು. 1. ಜನಸಂಖ್ಯೆ ಸ್ಫೋಟದಿಂದ ಬಡತನವೋ, ಬಡತನದಿಂದ ಜನಸಂಖ್ಯಾ ಸ್ಫೋಟವೋ? 2. ಸಂತಾನ ಶಸ್ತ್ರ ಚಿಕಿತ್ಸೆ ಮಹಿಳೆಯರಿಗೆ ಹೆಚ್ಚು ಏಕೆ? ನಂತರ ಅವಧಿಯಲ್ಲಿ ಡಾ. ಮಂಜುನಾಥ ಸಂತಾನೋತ್ಪತ್ತಿ ಮತ್ತು ಮಕ್ಕಳು ಆರೋಗ್ಯ (R.C.H.) ಬಗ್ಗೆ ವಿವರಿಸಿದರು.ದಆ ದಿನದ ಕಾರ್ಯಾಗಾರ ಮುಕ್ತಾಯ.

ದಿನಾಂಕ 21-10-2000 ಬೆಳಗ್ಗೆ 10-30 ಕ್ಕೆ ಚಂದು ನೆಲಹಾಳ ಇವರ ಹಾಡಿನೊಂದಿಗೆ ಎರಡನೆಯದಿನ ಕಾರ್ಯಾಗಾರ ಆರಂಭ. N.Y.K. ಶ್ರೀ ಮಂಗಳಾ ಇವರಿಂದ ವರದಿ ಮಂಡನೆ, ಶ್ರೀ R.C. ಬೇಗರೆಡ್ಡಿಯವರಿಂದ ನಿನ್ನೆ ಅರ್ಧಕ್ಕೆ ನಿಂತ ಚರ್ಚೆ ಮುಂದುವರಿಯಿತು.
ಶ್ರೀ ಸಿ.ವಿ.ಓಡಿಸೋಮಠ ಬಿ.ಜಿ.ವಿ.ಎಸ್. ದೇವದುರ್ಗ ಇವರಿಂದ ಜನಾರೋಗ್ಯ ಸಭೆ-2000 ದ ಏಕೆ, ಏನು, ಹೇಗೆ? ಹಾಗೂ ಆರೋಗ್ಯ ಪ್ರಾಥಮಿಕ ಆರೋಗ್ಯ ಪಾಲನೆ ಬಗ್ಗೆ ಮಂಡಿಸಿದರು. ಶ್ರೀಮತಿ ಎಸ್. ರೇಣುಕಾ ಮಹಿಳಾ ಸಮಖ್ಯಾ ಕರ್ನಾಟಕ ಇವರಿಂದ ರೂಢಿಗತ ಔಷಧಿಗಳ ಬಗ್ಗೆ ವಿಷಯ ಮಂಡಿಸಿ, ಹಿತ್ತಲ ಅಕ್ಕ ಪುಸ್ತಕ ಪರಿಚಯ ಮಾಡಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಸುರೇಶ ಕುಷ್ಟಗಿಯವರಿಂದ ಅಂಗವಿಕಲರು, ವಯೋವೃದ್ಧರು ವಿಷಯ ಮಂಡಿಸಿದರು. ಅಂಗವಿಕಲರು ಅಸಮರ್ಥರಲ್ಲ ಎಂದು ನಿರೂಪಿಸಿದರು.

ನಂತರ ಮಹಾದೇವಿ ಗುಡಿ ಮಹಿಳಾ ಸಮಖ್ಯಾ ಕರ್ನಾಟಕ ಇವರು ಮಹಿಳೆ ಮತ್ತು ಆರೋಗ್ಯ ವಿಷಯ ಮಂಡಿಸಿದರು. ಗ್ರಾಮೀಣ ಮಹಿಳೆಯರ ಆರೋಗ್ಯದ ಸ್ಥಿತಿಗತಿ, ಅವರ ಸಮಸ್ಯೆಗಳೇನೆಂದು ಚರ್ಚಿಸಿದರು. ಆರೋಗ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಇಲ್ಲಿಗೆ ಎರಡನೆಯ ದಿನದ ಕಾರ್ಯಾಗಾರ ಮುಕ್ತಾಯ.

ಜನಾರೋಗ್ಯದ ಚಪ್ಪಾಳೆಯೊಂದಿಗೆ ಸ್ವಾಗತ ಬಯಸುತ್ತಾ, ಶ್ರೀ ಚಂದ್ರು ನೆಲಹಾಳ್ ಹಾಕಮ್ಮ ಲಸಿಕೆಯ ಹಾಡಿನೊಂದಿಗೆ ಮೂರನೆಯ ದಿನದ ಕಾರ್ಯಾಗಾರ ಆರಂಭವಾಯಿತು. ಶ್ರೀಮತಿ ರೇಣುಕಾ ಎಸ್. ಮಹಿಳಾ ಸಮಖ್ಯಾ ಕರ್ನಾಟಕ ರಾಯಚೂರು ಇವರಿಂದ ವರದಿ ಮಂಡನೆಯಾಯಿತು.

ಮೊದಲಿಗೆ ಶ್ರೀ ಪ್ರದೀಪ್ ಆಂಧ್ರ ಬ್ಯಾಂಕ್ ರಾಯಚೂರು ಇವರು ಜಾಗತೀಕರಣ ಮತ್ತು ಜಾಗತೀಕರಣದಿಂದ ಆರೋಗ್ಯದ ಮೇಲೆ ಪರಿಣಾಮ ಈ ವಿಷಯವಾಗಿ ಮಾತನಾಡಿದರು. ಜಾಗತೀಕರಣ, ಬಂಡವಾಳಶಾಹಿ ದೇಶಗಳ ಬಗ್ಗೆ ವಿವರಿಸಿದರು.

ನಂತರ ಡಾ. ಅನಂತರಾವ್ ಕ್ಷಯರೋಗದ ಬಗ್ಗೆ ಲಕ್ಷಣ ತಡೆಗಟ್ಟುವಿಕೆ ನಮ್ಮ ಪಾತ್ರ ಈ ವಿಷಯದ ಕುರಿತು ಮಂಡಿಸಿದರು. ಡಾಟಾ ಮಾಹಿತಿ ನೀಡಿದರು. ಶ್ರೀ ಲಕ್ಷ್ಮೀರೆಡ್ಡಿಯವರಿಂದ ಹಾಡು. ನಂತರ ಡಾ. ಶಿವರಾಜ ಪಾಟೀಲ್ ವಿಚಾರಾತ್ಮಕ ಔಷಧಿ ನೀತಿ, ಸರಕಾರದ ಔಷಧಿ ಪಾಲಿಸಿ, ಡ್ರಗ್ಸ್ ಬಗ್ಗೆ ಬೇರೆ ದೇಶದಲ್ಲಿ ಹೆಲ್ತ್ ಸಿಸ್ಟಂ ಬಗ್ಗೆ ವಿವರಿಸಿದರು.

ಮಧ್ಯಾಹ್ನದ ಅವಧಿಯಲ್ಲಿ ಶ್ರೀ ರಾಘವೇಂದ್ರ ಕೋಲ್ಕರ್ ಪಂಚಾಯ್ತಿ ವ್ಯವಸ್ಥೆ ಮತ್ತು ಆರೋಗ್ಯ ಈ ವಿಷಯ ಮಂಡಿಸಿದರು. ನಮ್ಮ ಆರೋಗ್ಯದ ಯೋಜನೆಗಳನ್ನು ನಾವೇ ತಯಾರಿಸಿಕೊಳ್ಳುವುದು, ಜಾರಿಗೆ ತರುವಂತೆ ಸರಕಾರವನ್ನು ಒತ್ತಾಯಿಸುವುದು, ಅಲ್ಲದೇ ಜನರ ಸಹಭಾಗಿತ್ವದ ಬಗ್ಗೆ ತಿಳಿಸಿದರು. ನಂತರ ಶ್ರೀ ರಾಮಕೃಷ್ಣ ಎಸ್.ಎಫ್.ಐ. ಇವರು ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಸಮಾಜವಾದ, ಆರೋಗ್ಯ ವಿಷಯಗಳ ಬಗ್ಗೆ ತಿಳಿಸಿದರು. ನಂತರ ಶ್ರೀ ನರಸಿಂಹಮೂರ್ತಿ, ಪ್ರಾಚಾರ್ಯರು ಜನಸಂಖ್ಯಾ ಸ್ಫೋಟದ ಬಗ್ಗೆ ತಿಳಿಸಿದರು. ಕಾರಣಗಳು, ತಡೆಗಟ್ಟುವಿಕೆ, ನಮ್ಮ ಪಾತ್ರ ಕುರಿತು ವಿವರಿಸಿದರು.

**ಮುಕ್ತಾಯ ಸಮಾರಂಭ:** ಅಧ್ಯಕ್ಷತೆ ಶ್ರೀ ಸಿದ್ದಪ್ಪ ಎಸ್. ಅಧ್ಯಕ್ಷರು ಬಿಜಿವಿಎಸ್ ರಾಯಚೂರು, ಅತಿಥಿಗಳು: ಶ್ರೀ ನರಸಪ್ಪ ಬಿ.ಇ.ಓ. ರಾಯಚೂರು, ಶ್ರೀ ಕೋಲ್ಕಾರ್ ಬಿ.ಜಿ.ವಿ.ಎಸ್. ರಾಯಚೂರು, ಶ್ರೀ ನಾಗರಾಜ ಲಯನ್ಸ್ ಕ್ಲಬ್ ರಾಯಚೂರು, ಗೋವಿಂದರಾಜು ರಾಯಚೂರು, ಶ್ರೀ ರಾಮಕೃಷ್ಣ ಲಕ್ಷ್ಮಿ ನಾರಾಯಣ ನರ್ಸಿಂಗ್ ಹೋಂ ರಾಯಚೂರು.

ಸ್ವಾಗತ: ಶ್ರೀ ಶಂಕರಗೌಡ, ಬಿಜಿವಿಎಸ್ ಸಿರವಾರ, ವಂದನಾರ್ಪಣೆ: ಬಂದ್ರು ನೆಲಹಾಳ, ನಿರೂಪಣೆ: ಎಫ್.ಸಿ. ಚೇಗರೆಡ್ಡಿ. ಅತಿಥಿಗಳಾಗಿ ಮಾತನಾಡಿದ ಶ್ರೀ ನರಸಪ್ಪ ಇಂತಹ ಜನಾರೋಗ್ಯ ಸಭೆ ಬಹಳ ಮಹತ್ವದ್ದಾಗಿದೆ. ಬಿ.ಜಿ.ವಿ.ಎಸ್. ಮಿತ್ರರನ್ನು ತುಂಬಾ ಪ್ರಶಂಸಿಸಿದರು. ಶಿಕ್ಷಣ ಇಲಾಖೆಯಿಂದ ನಮ್ಮಿಂದ ಸಹಾಯ ಇದ್ದೇ ಇದೆ. ನಾನು ಶಿಕ್ಷಕರಿಗೂ ಇಂತಹ ಸಭೆ ಮಾಡಿಕೊಡುವಂತೆ ಕೇಳಿಕೊಂಡರು. ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಅಧ್ಯಕ್ಷೀಯ ಭಾಷಣದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಅಡಕ - 2

## ಜನಾರೋಗ್ಯ ಸಭೆ - 2000
## ರಾಜ್ಯ ಮಟ್ಟದ ಕಲಾಜಾಥ ಕಾರ್ಯಾಗಾರ

**ದಿನಾಂಕಃ 1-11-2000 ರಿಂದ 5-11-2000 ವರೆಗಿನ ವರದಿ**

ಸ್ಥಳಃ ಮುರುಗರಾಜೇಂದ್ರ ಮಠ, ಚಿತ್ರದುರ್ಗ, ಸಮಯಃ 11 ಗಂಟೆ.

**ಅನಿಸಿಕೆಃ** ಈ ನಾಲ್ಕು ದಿನದ ಶಿಬಿರದಲ್ಲಿ ನಿರ್ದೇಶಕರು ನಮಗೆ ರೂಪಕ ಹಾಡುಗಳನ್ನು ಮನದಟ್ಟಾಗುವಂತೆ ತಿಳಿಸಿದ್ದು, ಈ ಎಲ್ಲಾ ವಿಷಯಗಳನ್ನು ನಾವು ಗ್ರಾಮಗಳಲ್ಲಿ ಜನರಿಗೆ ತಿಳಿಸುತ್ತೇವೆಂದು ತುಂಬಾ ಸಂತೋಷವಾಯಿತು.

ದಿನಾಂಕಃ 1-11-2000 ರಂದು ಶ್ರೀಯುತ ಬಿ.ಜಿ.ವಿ.ಎಸ್. ರಾಜ್ಯ ಸಂಚಾಲಕರಾದ ಬಸುರಾಜರವರು, ಸಂಪನ್ಮೂಲ ವ್ಯಕ್ತಿಗಳಾದ ಜಿ.ಎನ್. ಮಲ್ಲಿಕಾರ್ಜುನ, ಎ.ಎಸ್. ಉದಯ ಮೂರ್ತಿ, ಗ್ಯಾರಂಟಿ ರಾಮಣ್ಣ, ಶಾಂಬಶಿವು ದಳವಾಯಿ ಹಾಗೂ ಭಾಸ್ಕರ ಅವರ ಪರಿಚಯ ಮಾಡಿಸುವುದರ ಜೊತೆ ಕಾರ್ಯಕ್ರಮ ಉದ್ಘಾಟನೆಯನ್ನು ಮಾಡಲಾಯಿತು. ಕಾರ್ಯಕ್ರಮ ನಿರೂಪಣೆಯನ್ನು ಮಾಧವರೆಡ್ಡಿಯವರು ಮಾಡಿದರು. ಈ ಕಲಾಜಾಥಾಕ್ಕೆ ಭಾಗವಹಿಸಿದ ಉದಾಃ ಬಿಜಾಪುರ, ಮೈಸೂರ, ಚಾಮರಾಜನಗರ ಎಲ್ಲಾ ಜಿಲ್ಲೆಯ ಕಲಾವಿದರನ್ನು ನಾಲ್ಕು ಟೀಮುಗಳಾಗಿ ವಿಂಗಡಿಸಿ ಅವರಿಗೆ ಆರೋಗ್ಯದ ಬಗ್ಗೆ ಗುಂಪಿನವರೇ ಹಾಡು ರೂಪಕ ತಯಾರಿಸಲು ತಿಳಿಸಿದರು. ಅದರಂತೆ ದೊಡ್ಡ ಗುಂಪಲ್ಲಿ ರೂಪಕ ಪ್ರದರ್ಶಿಸಲಾಯಿತು. ಅವುಗಳಿಗೆ ಸಲಹೆ-ಸೂಚನೆ ಕೊಟ್ಟು ಮತ್ತೆ ನಾಲ್ಕು ಗುಂಪುಗಳಿಗೆ ಸಂಪನ್ಮೂಲ ವ್ಯಕ್ತಿಗಳ ಜೊತೆಗೂಡಿ ವಿಂಗಡಿಸಲಾಯಿತು.

ಒಟ್ಟಾರೆ ಈ ನಾಲ್ಕು ದಿನಗಳ ಶಿಬಿರದಲ್ಲಿ ಈ ಕೆಳಕಂಡ ವಿಷಯಗಳನ್ನು ಗ್ರಹಿಸಲಾಯಿತು.
ಒಟ್ಟು 5 ನಾಟಕಗಳುಃ 1. ಬಾಡಿದ ಬದುಕು 2. ಸಂದೇಶ 3. ವಿಸರ್ಜನೆ 4. ಆರೋಗ್ಯಭಾಗ್ಯ 5. ಹಳ್ಳಿಯ ಆರೋಗ್ಯ.
ಒಟ್ಟು 10 ಹಾಡುಗಳು ಉದಾಃ ಕಡೆ ಕಡೆ ನಾ ರಾತ್ರಿಯ ಕನಸಲಿ ಮತ್ತು ಗಿಗಿಗಿ ಪದ ಇನ್ನೂ ಅನೇಕ ಹಾಡುಗಳನ್ನು ರೂಪಕಗಳ ಮೂಲಕ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಿಂದ ಕಲಿಸಲಾಯಿತು. ಒಟ್ಟಾರೆ ಈ ಶಿಬಿರದಿಂದ ಹಾಡು ಮತ್ತು ರೂಪಕಗಳಿಂದ ವೈಯಕ್ತಿಕ ಕಲಿಕೆಯೂ ಆಯಿತು. ಮತ್ತು ಬಾಡಿದ ಬದುಕು ಎಂಬ ನಾಟಕ ಕೆಲವು ಹಾಡುಗಳನ್ನು 2 ತಂಡಗಳು ಸೇರಿ ಕುರುಬರಹಟ್ಟಿ ಎಂಬ ಹಳ್ಳಿಯಲ್ಲಿ ಪ್ರಾಯೋಗಿಕವಾಗಿ ಮಾಡಲಾಯಿತು. ಅದರಂತೆ ಇನ್ನೊಂದು ಹಳ್ಳಿಯಲ್ಲಿ ರೂಪಕದ ನಂತರ ಶಿಬಿರಾರ್ಥಿಗಳು ಸೇರಿ ಚಿತ್ರದುರ್ಗದ ಕೋಟೆಯನ್ನು ನೋಡಿ 4 ಗಂಟೆಗೆ ಎಲ್ಲಾ ಶಿಬಿರಾರ್ಥಿಗಳಿಗೆ ಎಲ್ಲಾ ಸಂಬಂಧಪಟ್ಟ ಫಾರ್ಮ್ ಹಾಗೂ ರೂಪಕದ ಸ್ಕ್ರಿಪ್ಟ್‌ಗಳನ್ನು ಕೊಟ್ಟ ನಂತರ ಶಿಬಿರಕ್ಕೆ ಕೊನೆಯದಾಗಿ ವಂದನೆಗಳನ್ನು ತಿಳಿಸಿ ಶಿಬಿರ ಮುಕ್ತಾಯಗೊಳಿಸಲಾಯಿತು.

ಅಡಕ - 3

**ಜನಾರೋಗ್ಯ ಕಲಾಜಾಥಾ ಶಿಬಿರ, ದಿನಾಂಕಃ 9-11-2000 ರಿಂದ 10-11-2000**

ಸಮಯಃ 9 ಗಂಟೆ.

ಭಾಗವಹಿಸಿದವರು ಈ ಕೆಳಗಿನಂತಿದ್ದಾರೆ.

**ನಿರ್ದೇಶಕರುಃ** 1. ರೇಣುಕಾ ಎಸ್. ಸಹಯೋಗಿನಿ, ಮಹಿಳಾ ಸಮಖ್ಯಾ ಕರ್ನಾಟಕ.
2. ಎನ್.ವೈ.ಕೆ.
3. ಎಸ್. ಸ್ವಾಮಿ ಬಿ.ಜಿ.ವಿ.ಎಸ್. ಕಾರ್ಯಕರ್ತ.

**ಕಲಾವಿದರುಃ** 1. ಶಿವಪ್ಪ
2. ವೆಂಕೋಬ ಕಾವಲಿ
3. ವಿಜಯಕುಮಾರ್ ಧೋರಿ
4. ರಮೇಶ ಧೋರಿ
5. ವಿಶ್ವನಾಥ ಪಾಟೀಲ್
6. ಲಕ್ಷ್ಮಣ ನಾಯಕ
7. ಶ್ರೀಧರ ಸಂಗಾಪೂರ
8. ಶಿವಪ್ಪ ಜಿ.

**ಅಜೆಂಡಾಗಳುಃ**

- ಪರಿಚಯ
- ಹಾಡು
- ರೂಪಕ ಮಾಡಲು ತಿಳಿಸುವುದರ ಬಗ್ಗೆ
- ಬಾಡಿದ ಬದುಕು ನಾಟಕ
- ವಿಸರ್ಜನೆ ನಾಟಕ
- ಆರೋಗ್ಯದ ಬಗ್ಗೆ ಹಾಡುಗಳುಃ 1. ಜ್ವರ ಬಂತು ಜ್ವರ 2. ಹಾಕಮ್ಮ ಲಸಿಕೆ 3. ಏಡ್ಸ್‌ರೋಗ 4. ತಂದಾನು ತಾನು 5. ನೆಲೆಯಿಲ್ಲದ ಬದುಕು 6. ಆರೋಗ್ಯ ಕಲಾಜಾಥಾ 7. ಕಡೆ ಕಡೆ ನಾ ಸ್ವರ್ಗವು 8. ರೋಗ ಬಂದಾತು ಜೋಪಾನ 9. ಬನ್ನಿರೆ ಬನ್ನಿರೆ 10. ಗೆಲುವು ನಮ್ಮದು.

ಇಷ್ಟು ವಿಷಯಗಳ ಬಗ್ಗೆ ಶಿಬಿರಾರ್ಥಿಗಳಿಗೆ ಸವಿಸ್ತಾರವಾಗಿ ತಿಳಿಸಿ ಹೇಳಲಾಯಿತು ಮತ್ತು ಜನಾರೋಗ್ಯ ಸಭೆ ಕರ್ನಾಟಕ, ಕಲಾಜಾಥಾ ಜಿಲ್ಲಾ ಶಿಬಿರದ ವಿವರಗಳ ಫಾರ್ಮ್‌ನ್ನು ತುಂಬಲಾಯಿತು. ನಂತರ ರೂಪಕ ಜ್ವರ ಬಂತು ಜ್ವರ ಮತ್ತು ವಿಸರ್ಜನೆ ನಾಟಕ ಮತ್ತೊಮ್ಮೆ ಮರುಕಳಿಸಿ ಹೇಳಿ ಸಭೆ ಮುಕ್ತಾಯ ಮಾಡಲಾಯಿತು.

**ಶಿಬಿರದ ಎರಡನೆಯ ದಿನ**

ಈ ದಿನ ಬೆಳಿಗ್ಗೆ 9 ಗಂಟೆಗೆ ಶಿಬಿರವನ್ನು ಪ್ರಾರಂಭಿಸಲಾಯಿತು. ಕಳೆದ ದಿನ ಹೇಳಿದ ನಾಟಕವನ್ನು ಮಾಡಿಸಲಾಯಿತು ಮತ್ತು ಕೆಲವು ಹಾಡುಗಳನ್ನು ಹೇಳಲಾಯಿತು.
ನಾಟಕಃ ಬಾಡಿದ ಬದುಕು ಇದರಲ್ಲಿ ತಪ್ಪಿದ ಪಾತ್ರಗಳಿಗೆ ಸಲಹೆ ಕೊಡಲಾಯಿತು. ನಾಟಕ ಪೂರ್ತಿ ಮಾಡಿಸಲಾಯಿತು.

ಈ ಕೆಳಗಿನ ಹಾಡುಗಳನ್ನು ಹೇಳಲಾಯಿತು.

- ಜ್ವರ ಜ್ವರ ಬಂತು - ಲಕ್ಷ್ಮಣ್ಣ
- ಹಾರಮ್ಮ ಲಸಿಕೆ - ವಿಶ್ವನಾಥ - ಕೋರಸ್
- ಏಡ್ಸ್ ರೋಗ - ಶ್ರೀಧರ್
- ತಂದಾನೋ ತಾನು - ವೆಂಕೋಬ
- ನೆಲೆಯಿಲ್ಲದ ಬದುಕು - ರೇಣುಕಾ ಎಸ್.
- ಜನಾರೋಗ್ಯ ಕಲಾಜಾಥಾ - "
- ಕಡೆ ಕಡೆ ನಾ ಸ್ವರ್ಗವು ಕಡೆ - "
- ರೋಗ ಬಂದಾತು ಜೋಪಾನ - ಅಂಬ್ರೇಶ್
- ಗೆಲುವು ನಮ್ಮದು - "

ಎಲ್ಲಾ ಹಾಡುಗಳನ್ನು ಸರಿಯಾಗಿ ರಾಗ ಹೇಳುವುದರ ಜೊತೆ ವಿಸರ್ಜನೆ ನಾಟಕ ಪ್ರಾಕ್ಟೀಸ್ ಮಾಡಿಸುತ್ತಾ 5-30 ಕ್ಕೆ ಶಿಬಿರ ಮುಕ್ತಾಯ ಹೇಳುವುದರ ಜೊತೆ ಮಹಿಳಾ ಸಮಖ್ಯಾ ಕರ್ನಾಟಕ ಜೀಪಿನಲ್ಲಿ ಕಟ್ಲಟ್ಕೂರಿಗೆ ಜನಾರೋಗ್ಯ ಕಲಾಜಾಥಾ ಪ್ರಾರಂಭ ಅಥವಾ ಉದ್ಘಾಟನೆಗೆ ಬರಲಾಯಿತು.

ಕಲಾವಿದರು: ದಿನಾಂಕ: 11-11-2000 ರಂದು ಜಾಡಲದಿನ್ನಿಯಾದ ತಮ್ಮ ಗ್ರಾಮದಲ್ಲಿ ಜಾತ್ರೆ ಇದೆ ಅದಕ್ಕಾಗಿ ಹೋಗುತ್ತೇವೆ, ನಮಗೆ ಶನಿವಾರ ಒಂದು ದಿನ ಬಿಡಿ, ಮರಳಿ ಬರುತ್ತೇವೆ ಎಂದರು. ಅವರಿಗೆ ನಮ್ಮ ಕಲಾಜಾಥಾ ಟೈಮ್ ಟೇಬಲ್ ಮತ್ತು ಹಳ್ಳಿಯ ಸ್ಥಿತಿಗತಿ ಹಾಗೂ ನಾವು ಮಾಡುವ ಕೆಲಸದ ವಿವರವನ್ನು ಸವಿಸ್ತಾರವಾಗಿ ಕನಿಷ್ಟ 1 ಗಂಟೆಗಳ ಕಾಲ ತಿಳಿಸಿ ಹೇಳಿದಾಗ ಕಲಾವಿದರು ನಾವು ಜಾಥಾ ಮುಗಿಯುವವರೆಗೂ ಇರುತ್ತೇವೆ ಎಂದು ಒಪ್ಪಿಕೊಂಡು ಮತ್ತೆ ಶಿಬಿರವನ್ನು ಪ್ರಾರಂಭಿಸಲಾಯಿತು. ಕಲಾವಿದರರು ಒಂದೇ ಸ್ಟೇಜಲ್ಲಿದ್ದವರೇ 8 ಜನರು ಮತ್ತು 2 ನಿರ್ದೇಶಕರು, ಒಬ್ಬ ನಿರ್ದೇಶಕರು ವೈಯಕ್ತಿಕ ಕಾರಣದಿಂದಾಗಿ ಶಿಬಿರದಲ್ಲಿ ಇರಲಿಲ್ಲ. ನಂತರ 6 ಗಂಟೆಗೆ ಸರಿಯಾಗಿ ಉದ್ಘಾಟನೆಯ ಕಾರ್ಯಕ್ರಮಕ್ಕೆ ಚಂದ್ರಬಂಡಾದಿಂದ ಕಟ್ಲಟ್ಕೂರಿಗೆ ಬರಲಾಯಿತು.

<u>ನಂತರ ಕೆಲಸದ ಹಂಚಿಕೆ :</u>

- ದಿನದ ವರದಿ ಬರೆಯುವುದು - ರೇಣುಕಾ ಎಸ್., ವಿಜಯ ಕುಮಾರ ಪ್ಯಾಕ್ ಮಾಡಿಕೊಡುವುದು ಮತ್ತು ಜನಾರೋಗ್ಯ ಕಲಾಜಾಥಾದ ಪತ್ರಿಕೆಯನ್ನು ಒಂದು ಹಳ್ಳಿಗೆ ಕೊಟ್ಟು ಅವರ ಹೆಸರು ಬರೆಯುವುದು.
- ಕಲಾಜಾಥಾದ ವೀಕ್ಷಕ ಫಾರ್ಮ್‌ಗಳನ್ನು ತುಂಬಲು ವಿಶ್ವನಾಥ ಅವರಿಗೆ ಜವಾಬ್ದಾರಿಯನ್ನು ಕೊಡಲಾಯಿತು.
- ಮೈಕ್‌ಸೆಟ್ ಜವಾಬ್ದಾರಿ ಶ್ರೀಧರ ಮತ್ತು ರಮೇಶ್ ಅವರಿಗೆ ಕೊಡಲಾಯಿತು. ಒಟ್ಟು ಮೈಕ್ - 2, ವಯರ್ - 1, ಮೈಕ್ರೋಫೋನ್ 1, ಲೈಟ್, ಎಲೆಕ್ಟ್ರಿಕ್ ಬೋರ್ಡ್, 2 ಬ್ಯಾನರ್
  ಇಷ್ಟು ಬಿಜಿವಿಎಸ್ ದಿಂದ ಕೊಟ್ಟಿರುವ ಸಾಮಗ್ರಿ.
- ಟೀಮ್ ಲೀಡರ್ ರೇಣುಕಾ ಎಸ್. ಸಹಯೋಗಿನಿ ಮಹಿಳಾ ಸಮಖ್ಯಾ ಕರ್ನಾಟಕ ಎಂದು ಗುಂಪಿಗೆ ಆಯ್ಕೆ ಮಾಡಿದರು. ಯಾವುದೇ ಕೆಲಸಕ್ಕೆ ಹೋದರೂ ಅವರನ್ನು ಕೇಳೇ ಹೋಗುವುದು ಎಂದು ತಿಳಿಸಿದರು.
- ವಿಶ್ವನಾಥರೆಡ್ಡಿ ಆರೋಗ್ಯದ ಅಥವಾ ಬೇಕಾದ ಗುಳಿಗೆಯನ್ನು ಕೊಡುವುದು.
- ಮಹಿಳಾ ಸಮಖ್ಯಾದಿಂದ ವರದಿ ಬುಕ್, ಕ್ಯಾಸೆಟ್, ಗಾನಗುಚ್ಛ, ಜೀಪು ತರಲಾಗಿತ್ತು.

ಅಡಕ-4

## ಜನಾರೋಗ್ಯ ಜಿಲ್ಲಾ ಸಮಾವೇಶದ ವರದಿ

ದಿನಾಂಕ 25-11-2000 ರಂದು ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಜನಾರೋಗ್ಯ ಸಭೆಯ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಇದು ಮಹಿಳಾ ಸಮಖ್ಯಾ ಕರ್ನಾಟಕ, ಬಿ.ಜಿ.ವಿ.ಎಸ್., ಸಾಕ್ಷರತಾ ಹಾಗೂ ಇತರೆ 16 ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಯಿತು.

ಇದಕ್ಕೆ ಮುಖ್ಯ ಅತಿಥಿಗಳಾಗಿ

1. ಶ್ರೀಮತಿ ಲೀಲಾ ಕುಲಕರ್ಣಿ, ಜಿಲ್ಲಾ ಸಂಯೋಜಕರು ಮಹಿಳಾ ಸಮಖ್ಯಾ ಕರ್ನಾಟಕ ರಾಯಚೂರು,
2. ಶ್ರೀಯುತ ಸಿದ್ದಪ್ಪ, ಸಾಕ್ಷರತಾ ಸಂಗ್ರಾಮ ಸಮಿತಿ ರಾಯಚೂರು,
3. ಶ್ರೀಯುತ ರಾಘವೇಂದ್ರ ಕೋಲ್ಕಾರ್ ಜನಾರೋಗ್ಯ ಸಭೆಯ ಸದಸ್ಯರು.
4. ಶ್ರೀಯುತ ಮುರಿಗೆಪ್ಪ, ಸಾಕ್ಷರತಾ ಸಂಯೋಜಕರು ಹಾಗೂ ಇನ್ನಿತರು ಭಾಗವಹಿಸಿದ್ದರು.


ಭಾಗಾರ್ಥಿಗಳು 50 ಜನ.


<u>ಮುಖ್ಯವಾಗಿ ಇಲ್ಲಿ ಚರ್ಚಿಸಿದ ವಿಷಯಗಳು:</u>

- ಅಲ್ಮಾ ಆಟಾ ಘೋಷಣೆಯ ಉದ್ದೇಶ.
- ಜನಾರೋಗ್ಯ ಆಂದೋಲನೆ - 2000 ದ ಉದ್ದೇಶ.
- ಜಿಲ್ಲೆಯಲ್ಲಾದ ಕಾರ್ಯಕ್ರಮದ ಕುರಿತು.
- ಜಿಲ್ಲಾ ಮಟ್ಟದ ಕಾರ್ಯಾಗಾರ.
- ಕಲಾತಂಡದ ಆಯ್ಕೆ.
- ಕಲಾತಂಡದವರಿಗೆ ತರಬೇತಿ.
- ಕಲಾಜಾಥಾ ಕಾರ್ಯಕ್ರಮ.
- ಕಲಾತಂಡದವರ ಅನುಭವದ ಹಂಚಿಕೆ.
- ಕ್ಷೇತ್ರ ಅಧ್ಯಯನದ ಹಂಚಿಕೆ.
- ಮುಂದಿನ ಕಾರ್ಯಾಚರಣೆಗಳ ಸಂಕ್ಷಿಪ್ತ ಚರ್ಚೆ.
- ರಾಜ್ಯ ಮಟ್ಟದ ಸಮಾವೇಶಕ್ಕೆ ಪೂರ್ವ ತಯಾರಿಯ ಸಿದ್ಧತೆ.

****







# ರಾಜ್ಯ ಜನಾರೋಗ್ಯ ಸಮಾವೇಶದ
# ವರದಿ - ದಾವಣಗೆರೆ

ದಿನಾಂಕ: 26-11-2000 ರಿಂದ 27-11-2000 ವರೆಗೆ

# ರಾಜ್ಯ ಜನಾರೋಗ್ಯ ಸಮಾವೇಶದ ವರದಿ

ದಿನಾಂಕ : 26-11-2000 ರಿಂದ 27-11-2000 ವರೆಗೆ

ಸ್ಥಳ : ರೇಣುಕಾ ಮಂದಿರ, ದಾವಣಗೆರೆ.

ಭಾಗಾರ್ಥಿಗಳು : 28 ಜಿಲ್ಲೆಯಿಂದ ಜನಾರೋಗ್ಯ ಕಲಾಜಾಥಾದಲ್ಲಿ ಭಾಗವಹಿಸಿದ ಸರ್ಕಾರಿ, ಅರೆಸರ್ಕಾರಿ ಸಂಸ್ಥೆಯ ಎಲ್ಲ ಸದಸ್ಯರು, 320 ಜನರು.

ರಾಯಚೂರು ಮ.ಸ.ಕ.
ಪ್ರತಿನಿಧಿಗಳು : ಶ್ರೀಮತಿ ಲೀಲಾ ಕುಲಕರ್ಣಿ, ಶ್ರೀಮತಿ ಚೆನ್ನಮ್ಮ ಹಾದಿಮನಿ, ಶ್ರೀಮತಿ ಮಹಾದೇವಿ ಗುಡಿ, ಶ್ರೀಮತಿ ರೇಣುಕಾ ಎಸ್.

ಈ ದಿನ ಬೆಳಗ್ಗೆ ಹಾಡಿನ ಮೂಲಕ ಜನಾರೋಗ್ಯ ಕಲಾಜಾಥಾದ ರಾಜ್ಯ ಸಮಾವೇಶ ಪ್ರಾರಂಭವಾಯಿತು. ನಂತರ ಶ್ರೀ ಕೆ. ಶಿವರಾಂ ಜಿಲ್ಲಾಧಿಕಾರಿಗಳು ದಾವಣಗೆರೆ ಜ್ಯೋತಿಯನ್ನು ಬೆಳಗಿಸಿ, ಕರ್ನಾಟಕದ ನಕ್ಷೆಯಲ್ಲಿ ಎಲ್ಲ ಜಿಲ್ಲೆಯವರು ಆಯಾ ಜಿಲ್ಲೆಯ ನಕ್ಷೆಯಲ್ಲಿ ಪಣತಿಯನ್ನು ಬೆಳಗಿಸಿ ಜನಾರೋಗ್ಯದ ಬಗ್ಗೆ ಜನರಲ್ಲಿ ಅರಿವನ್ನು ತರಲು ಈ ಪಣತಿಯ ಮೂಲಕ ಬೆಳಗಲಿ ಎಂದರು. ಜನಾರೋಗ್ಯ ರಾಜ್ಯ ಸಮಾವೇಶದ ಉದ್ಘಾಟನೆ ಕಾರ್ಯಕ್ರಮದಲ್ಲಿ ಈ ಕೆಳಕಂಡ ಮುಖ್ಯ ಅತಿಥಿಗಳು ಭಾಗವಹಿಸಿದ್ದರು.

1. ಶ್ರೀ ಸಿ.ವಿ. ಪಾಟೀಲ್, ಬಿಜಿವಿಎಸ್ ಸಂಚಾಲಕರು.
2. ಶ್ರೀ ಹೆಚ್. ಸುದರ್ಶನ್ ಜನಾರೋಗ್ಯದ ರಾಜ್ಯ ಸಂಚಾಲಕರು.
3. ಶ್ರೀ ಈ. ಬಸವರಾಜ, ಬಿಜಿವಿಎಸ್ ಕಾರ್ಯದರ್ಶಿಗಳು.
4. ಶ್ರೀ ಹೆಚ್.ಎನ್. ಷಡಕ್ಷರಪ್ಪ, ಜನತಾ ವಾಣಿ ಪತ್ರಕರ್ತರು.
5. ಶ್ರೀಮತಿ ಕೆ.ಎಸ್. ವಿಮಲಾ.
6. ಡಾ. ಚಟರ್ಜಿ
7. ಡಾ. ಸಿ. ಪ್ರಕಾಶ.
8. ಡಾ. ಜನಾರ್ಧನ.
9. ಡಾ. ಸಿ.ಆರ್. ಚಂದ್ರಶೇಖರ.
10. ಶ್ರೀಮತಿ ಅಮೃತಾ.
11. ಡಾ. ಬಿ.ಹೆಚ್. ನಾಗಪ್ರಕಾಶ.
12. ಡಾ. ಸಿನ್ನನಾರಾಯಣ.

<u>ಉದ್ದೇಶ:</u> ಒಬ್ಬ ಮನುಷ್ಯ ಬದುಕಲು ಬೇಕಾದ ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬನಿಗೂ ಸಿಗಬೇಕು. ಸಿಕ್ಕರೆ ಅದು ಜನರ ಆರೋಗ್ಯ, ಜನಾರೋಗ್ಯ ಮತ್ತು ಜೊತೆಗೆ ಇರುವ ತೊಂದರೆಗಳು ಏನು ಎನ್ನುವುದನ್ನು ಗುರುತಿಸಿ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದೇ ಮುಖ್ಯ ಉದ್ದೇಶ. ಈ ಜನಾರೋಗ್ಯ ಎಲ್ಲಾ ರಾಜ್ಯಗಳಲ್ಲಿಯೂ, ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಭಾರತದ ಎಲ್ಲಾ ರಾಜ್ಯದ ಎಲ್ಲಾ ಜನರಿಗೆ ಸಿಗಲಿ ಎಂದು ತಿಳಿಸುವುದರ ಜೊತೆಗೆ ಕಲ್ಕತ್ತಾದ ಸಮಾವೇಶದಲ್ಲಿ ಮತ್ತು ಢಾಕಾದ ಸಮಾವೇಶದಲ್ಲಿ ಭಾರತದ ಧ್ವಜ ಹಾರಲಿ ಎಂದು ತಿಳಿಸಿದರು.

ಕಲಾಜಾಥಾ ಮಾಡಿದ ತಂಡದವರು ತಮ್ಮ ತಮ್ಮ ಜಿಲ್ಲೆಯಲ್ಲಿ ಜಾಥಾ ಮಾಡಿ ತೆಗೆದುಕೊಂಡು ಬಂದ ಮಾಹಿತಿಯನ್ನು ಪ್ರತಿಯೊಂದು ಜಿಲ್ಲೆಯಿಂದ ಪ್ರತಿಯೊಬ್ಬರು ಹಂಚಿಕೊಂಡರು. ಮೊದಲು 4 ಜಿಲ್ಲೆಯವರಿಗೂ ಎರಡೆರಡು ನಿಮಿಷ ಸಮಸ್ಯೆಗಳು, ಕಾಯಿಲೆಗಳು, ಕಲಾಜಾಥಾದಲ್ಲಿ ಕಂಡುಬಂದ

ಅಂಶಗಳನ್ನು ಹಂಚಿಕೊಳ್ಳಲಾಯಿತು. ತಂದನಂತರ ಎಲ್ಲರಿಗೂ ಅನಿಸಿಕೆ ಹಂಚಿಕೊಳ್ಳಲು ಅವಕಾಶ ಇರುತ್ತದೆ ಎಂದು ಹೇಳಿ ಮೊದಲಿಗೆ ದಾವಣಗೆರೆ, ಕೊಪ್ಪಳ, ರಾಯಚೂರು, ಮಂಡ್ಯ ಜಿಲ್ಲೆಯವರು ಜನಾರೋಗ್ಯದ ಪೂರ್ವ ಸಿದ್ಧತೆಯಿಂದ ಹಿಡಿದು ಕಲಾಜಾಥಾದವರೆಗೆ ಪ್ರತಿ ಗ್ರಾಮದಲ್ಲಿ ಸಾಮಾನ್ಯ ರೋಗಗಳು, ವ್ಯವಸ್ಥೆಗಳು ಇವೆಲ್ಲವುಗಳನ್ನು ಬಹಳ ಚೆನ್ನಾಗಿ ಹಂಚಿಕೊಂಡರು.

ನಂತರ ಜನಾರೋಗ್ಯ ಕಲಾಜಾಥಾ ರಾಜ್ಯ ಸಮಾವೇಶದಲ್ಲಿ ಅಧ್ಯಕ್ಷರಾಗಿ ಆಗಮಿಸಿದ **ಶ್ರೀ ಕೆ. ಶಿವರಾಮ, ಜಿಲ್ಲಾಧಿಕಾರಿಗಳು ದಾವಣಗೆರೆ** ಇವರು ಮಾತನಾಡಿ, ಆರೋಗ್ಯ ಎಂದರೆ ದೈಹಿಕ ಮತ್ತು ಮಾನಸಿಕವಾಗಿ ಒಬ್ಬ ಮನುಷ್ಯ ಸದೃಢವಾಗಿದ್ದರೆ, ಆರೋಗ್ಯವಾಗಿದ್ದರೆ ಅದೇ ಆರೋಗ್ಯ. ಜಿಲ್ಲಾ ಆಡಳಿತ ಕಾರ್ಯಕ್ರಮ ಆಡಳಿತದಲ್ಲಿ ಜನರ ಪಾಲು ಇರಬೇಕು. ಜನರು ಎಲ್ಲಿಯವರೆಗೆ ಭಾಗವಹಿಸುವುದಿಲ್ಲ ಅಲ್ಲಿಯವರೆಗೆ ಆಡಳಿತ ಹಾಗೇ ಇರುತ್ತದೆ. ಶ್ರೀ ನಜೀರ್ ಅಹ್ಮದ್ ಅವರ ಕನಸು ನನಸಾಗಬೇಕಾದರೆ, ಗ್ರಾಮ ಸ್ವರಾಜ್ಯವಾಗಬೇಕಾದರೆ ಜನರು ಭಾಗವಹಿಸಿದರೆ ಬಹಳ ಒಳ್ಳೆಯದು ಎಂದರು. ಗ್ರಾಮಗಳಲ್ಲಿ ಸಾಕಷ್ಟು ಸಮಸ್ಯೆಗಳು, ರೋಗಗಳು, ವ್ಯವಸ್ಥೆಗಳು ಸರಿಯಾಗಿ ಇರುವುದಿಲ್ಲ. ಉದಾಃ ಎ.ಎನ್.ಎಂ. ಬರುವುದಿಲ್ಲ, ಡಾಕ್ಟರ್ ಕೆಲಸ ಮಾಡುವುದಿಲ್ಲ ಅದು ನಿಜ. ಆದರೆ ಜನರು ಎಚ್ಚರರಾಗಬೇಕು. ಈಗಾಗಲೇ ಸರ್ಕಾರ ಇದರ ಬಗ್ಗೆ ಕಾಳಜಿಯನ್ನು ವಹಿಸಿ ಗುತ್ತಿಗೆ ಆಧಾರದ ಮೇಲೆ ಡಾಕ್ಟರರನ್ನು ನೇಮಕ ಮಾಡಿರುವುದು, ನೀರಿಗಾಗಿ ನೀರಿನಂತೆ ಹಣ ಖರ್ಚು ಮಾಡಿದರೂ ಕುಡಿಯಲು ಸರಿಯಾದ, ಶುಚಿಯಾದ ನೀರು ಒದಗಿಸಲು ಆಗುತ್ತಿಲ್ಲ. ಕಾರಣ ಜನರ ಭಾಗವಹಿಸುವಿಕೆಯಿಲ್ಲ. ಆರೋಗ್ಯ ಕೇವಲ ಸರ್ಕಾರದ ಕೆಲಸವಲ್ಲ. ಅದು ಜನರ ಕರ್ತವ್ಯವೂ ಹೌದು ಎಂದು ಬಹಳ ಚೆನ್ನಾಗಿ ಜನರಿಗೆ ಮನದಟ್ಟಾಗುವ ಹಾಗೆ ಮಾತನಾಡಿದರು. ಆಮೇಲೆ ಈ ಜನಾರೋಗ್ಯ ಕಾರ್ಯಕ್ರಮದಲ್ಲಿ ಜನರಿಗೆ ಜಾಗೃತಿ ಮೂಡಿಸಲು ಸಾಕಷ್ಟು ಸ್ವಯಂ ಸೇವಾ ಸಂಸ್ಥೆಗಳು ಶ್ರಮಪಟ್ಟು ಸರ್ಕಾರಕ್ಕಿಂತ ಸರಿಯಾಗಿ ಕೆಲಸ ಮಾಡಿರುವ ಸಂಸ್ಥೆಗಳಿಗೆ ಅಭಿನಂದನೆ ಸಲ್ಲಿಸಿದರು. ಜೊತೆಗೆ ಜನಾರೋಗ್ಯ ಸಭೆಯ ರಾಜ್ಯ ಅಧ್ಯಕ್ಷರಾದ ಶ್ರೀ ಹೆಚ್. ಸುದರ್ಶನ ಅವರಿಗೆ ಅಭಿನಂದನೆ ಸಲ್ಲಿಸಿದರು.

**ಜನಾರೋಗ್ಯದ ರಾಜ್ಯ ಅಧ್ಯಕ್ಷರಾದ ಡಾ. ಸುದರ್ಶನ** ಇವರು ಮಾತನಾಡುತ್ತಾ, ದಾವಣಗೆರೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಶಿಷ್ಟ ಜಾತಿಯ ಜನರ ಸಲುವಾಗಿ ಬಹಳ ದುಡಿದಿದ್ದಾರೆ. ಈ ವರ್ಷ ದಾವಣಗೆರೆಯ ಪರಿಶಿಷ್ಟ ಜಾತಿಯ ಜನರಿಗೆ 3000 ಮನೆಗಳನ್ನು ಕಟ್ಟಿಸುತ್ತಿರುವರು. ಇವರು ಜನರಿಗಾಗಿ ಹಗಲಿರುಳು ದುಡಿಯುತ್ತಿದ್ದಾರೆಂದು ಜಿಲ್ಲಾಧಿಕಾರಿಗಳನ್ನು ಅಭಿನಂದಿಸಿದರು.

**ಡಾ. ಸಿನ್ನನಾರಾಯಣ** ಅವರು ಆರೋಗ್ಯ ಪುಸ್ತಕದ ಬಿಡುಗಡೆ ಮಾಡಿದರು. ಪುಸ್ತಕ ಬಿಡುಗಡೆ ನಂತರ ಇದು ಆರೋಗ್ಯ ಕಾರ್ಯಕ್ರಮದ ಆರಂಭ. ಈಗಾಗಲೇ ಕರ್ನಾಟಕದ ಕೆಲವು ಜಿಲ್ಲೆಯಲ್ಲಿರುವ ಮೂಲ ಸಮಸ್ಯೆಗಳ ಬಗ್ಗೆ ಹಂಚಿಕೊಂಡರು. ಅದನ್ನು ಕೇಳಿ ಬಹಳ ಖುಷಿಯಾಯಿತು. ಎಲ್ಲ ಸಮಸ್ಯೆಗಳು ಕೆಲವು ದಿನಗಳ ನಂತರ ಬಗೆಹರಿಯುತ್ತವೆ. ಆದರೂ ನಮ್ಮ ಪ್ರಯತ್ನ ನಿಲ್ಲಿಸಬಾರದು ಎಂದರು.

**ಡಾ. ಸಿ.ಆರ್. ಚಂದ್ರಶೇಖರ್** ಅವರು ಮಾತನಾಡುತ್ತಾ, ಸಮುದಾಯ ಮತ್ತು ಜನರ ಆರೋಗ್ಯದ ಬಗ್ಗೆ ಅದರಲ್ಲಿ ಮುಖ್ಯವಾಗಿ ವೈಯಕ್ತಿಕ ಆರೋಗ್ಯದ ಬಗ್ಗೆ, ಪೌಷ್ಠಿಕ ಆಹಾರದ ಬಗ್ಗೆ ಜನರು ಕಾಳಜಿಯನ್ನು ವಹಿಸಿಕೊಳ್ಳುವುದು ಬಹಳ ಮುಖ್ಯ ಎಂದು ಹೇಳಿದರು. ಅದರಲ್ಲಿ 2 ಭಾಗಗಳನ್ನು ಮಾಡಿ ತಿಳಿಸಿದರು. 1. ಮಾನಸಿಕ ಒತ್ತಡದಿಂದ ಬರುವ ಕಾಯಿಲೆಗಳು, 2. ದೈಹಿಕವಾಗಿ ಬರುವ ಕಾಯಿಲೆಗಳು ಮತ್ತು ಪರಿಹಾರವನ್ನು ತಿಳಿಸಿದರು.

ಮಾನಸಿಕ ಒತ್ತಡದ ಹೆಚ್ಚಳ, ಸ್ತ್ರೀ-ಪುರುಷ, ಶ್ರೀಮಂತ-ಬಡವ, ಗ್ರಾಮೀಣ-ನಗರ ಪ್ರದೇಶ ಎಲ್ಲೆಡೆ ಇದೆ. ಕೆಲವು ದೈಹಿಕ ಕಾಯಿಲೆಗಳು ಒಮ್ಮೆ ಮನುಷ್ಯನನ್ನು ಹೊಕ್ಕರೆ ಅವು ಜೀವನ ಸಂಗಾತಿಗಳಾಗಿ ಬಿಡುತ್ತವೆ. ಉದಾಃ ಆರ್ಥ್ರೈಟಿಸ್, ಸಕ್ಕರೆ ರೋಗ ಇತ್ಯಾದಿಗಳು ಸಮಾಜದಲ್ಲಿ ಪ್ರಚಲಿತವಿರುವ "ಹೆಂಗಸಾಗಿ ಕೋಪ

ಮಾಡಿಕೊಳ್ಳುವ ಹಾಗಿಲ್ಲ, ಗಂಡಸಾಗಿ ಅಳೋ ಹಾಗಿಲ್ಲ" ಅದುಮಿಟ್ಟು ಈ ಭಾವನೆಗಳು ಮನೋರೋಗಕ್ಕೆ ಕಾರಣವಾಗುತ್ತವೆ. ಸಾಮಾಜಿಕವಾಗಿ ಒಬ್ಬರು ಇನ್ನೊಬ್ಬರಿಗೆ ಶೋಷಿಸುವುದೂ ಸಹ ಮನೋರೋಗಕ್ಕೆ ಕಾರಣವಾಗುತ್ತದೆ. ಈ ಎಲ್ಲ ಸಮಸ್ಯೆಗಳ ನಡುವೆ ಮಾನಸಿಕ ನೆಮ್ಮದಿ ಕಾಪಾಡಿಕೊಳ್ಳಬೇಕು. ಇದಕ್ಕೆ ಕಲೆ, ಧಾರ್ಮಿಕ ಚಟುವಟಿಕೆಗಳು, ನಾಟ್ಯ, ಸಂಗೀತ, ಸಾಮಾಜಿಕ ಸಂಪರ್ಕ ಇತ್ಯಾದಿಗಳು ಸಹಾಯ ಮಾಡುತ್ತವೆ.

ಇದರೊಂದಿಗೆ ಕೌಟುಂಬಿಕ ಸಾಮರಸ್ಯ ಹೆಚ್ಚಿಸಲು ಸಕ್ರಿಯವಾದ ಮಾನಸಿಕ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಜೀವನದ 10 ಕೌಶಲ್ಯಗಳನ್ನು ತಿಳಿಸಿಕೊಟ್ಟರು.

- ಸಮಸ್ಯೆಗೆ ಪರಿಹಾರ
- ನಿರ್ಧಾರ ಶಕ್ತಿ
- ರಚನಾತ್ಮಕ ಆಲೋಚನೆ
- ವಿಮರ್ಶಾತ್ಮಕ ಆಲೋಚನೆ
- ಪರಿಣಾಮಕಾರಿ ಸಂವಹನ
- ಸ್ವಯಂ ಜಾಗೃತಿ
- ಭಾವನೆಗಳ ನಿರ್ವಹಣೆ
- ಒತ್ತಡ ಇತ್ಯಾದಿ.

ಇದರ ಜೊತೆಗೆ ಕಾರ್ಯಕ್ರಮಕ್ಕೆ ಸಹಾಯ ಮಾಡಿದ ಮತ್ತು ಕಾರ್ಯಕ್ರಮದ ರೂವಾರಿಯನ್ನು ವೇದಿಕೆಯ ಮೇಲೆ ನೆನಪಿಸಿಕೊಂಡರು.

ವಿಸರ್ಜನೆ ನಾಟಕವನ್ನು ಪ್ರತಿ ಜಿಲ್ಲೆಯ ಕಲಾತಂಡದ ನಾಯಕರೆಲ್ಲರೂ ಸೇರಿ ವೇದಿಕೆಯ ಮೇಲೆ ಮಾಡಿ ತೋರಿಸಿದರು. ಜೊತೆಗೆ ಹಾಡುಗಳನ್ನು ಹೇಳಿದರು. ಈ ನಾಟಕ ಮತ್ತು ಹಾಡುಗಳನ್ನು ನೋಡಿದರೆ, ಕೇಳಿದರೆ ನಮ್ಮ ರಾಜ್ಯದಲ್ಲಿ ಆರೋಗ್ಯದ ಸ್ಥಿತಿ ಹೇಗಿದೆ? ಹಾಗಾಗಬಾರದು ಎನ್ನುವುದು ಪ್ರತಿಯೊಬ್ಬರೂ ಚಿಂತಿಸುವ ಅವಶ್ಯಕತೆ ಇದೆ ಎನಿಸಿತು.

ಡಾ. ಹೆಚ್. ಸುದರ್ಶನ ಅವರು ಮಾತನಾಡಿ, ಆರೋಗ್ಯದ ಬಗ್ಗೆ ಆಗುವ ಕ್ರಾಂತಿಯ ಮುನ್ಸೂಚನೆಯೇ ಜನಾರೋಗ್ಯ ಜಾಥಾ ಅನ್ನಿಸುತ್ತದೆ. ಜೊತೆಗೆ ಈ ಕಾರ್ಯಕ್ರಮವನ್ನು ದಾವಣಗೆರೆಯಲ್ಲಿ ಮಾಡುವ ಉದ್ದೇಶ ಏನೆಂದರೆ, ಕರ್ನಾಟಕದ ಮಧ್ಯದಲ್ಲಿರುವ ಜಿಲ್ಲೆಯಾಗಿದ್ದರಿಂದ ಈ ಕಾರ್ಯಕ್ರಮವನ್ನು ಇಲ್ಲಿ ಮಾಡುತ್ತಿದ್ದೇವೆ. ಜೊತೆಗೆ ಈ ಜಿಲ್ಲೆಯಲ್ಲಿ ಸಂತಾನೋತ್ಪತ್ತಿ ಹಾಗೂ ಮಕ್ಕಳ ಆರೋಗ್ಯ, ಜಿಲ್ಲಾ ಸಾಕ್ಷರತಾ ಸಮಿತಿ ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆಯುತ್ತಾ ಇವೆ. ನನ್ನ ಅನುಭವದ ಪ್ರಕಾರ 21 ವರ್ಷದಿಂದ ಗುಡ್ಡಗಾಡು ಜನರ ಜೊತೆಗೆ ಆರೋಗ್ಯದ ಬಗ್ಗೆ ಬಹಳಷ್ಟು ಕೆಲಸವನ್ನು ಮಾಡಿದ್ದೇನೆ, ಮಾಡುತ್ತಾ ಇದ್ದೇನೆ. ಸರ್ಕಾರ ಆರೋಗ್ಯ ಇಲಾಖೆ ಮತ್ತು ಜನರು ಪ್ರಯತ್ನ ಮಾಡಿದರೆ ಯಾವ ಕೆಲಸವೂ ಹಿಂದೆ ಉಳಿಯುವುದಿಲ್ಲ. ಇದರಲ್ಲಿ ಶೇ. 35 ರಷ್ಟು ಆರೋಗ್ಯ ಇಲಾಖೆ ಕೆಲಸ ಮಾಡುತ್ತಾ ಇದೆ. ಶೇ. 65 ರಷ್ಟು ಸರ್ಕಾರ ಕೆಲಸ ಮಾಡಬೇಕು. ಅದರಲ್ಲಿ ಜನರು ಸಂಪೂರ್ಣ ಭಾಗಿಯಾಗಬೇಕು ಎಂದು ತಿಳಿಸುತ್ತಾ, ಜನಾರೋಗ್ಯ ಪರಿಕಲ್ಪನೆ, ಜನರ ಆರೋಗ್ಯದ ಬಗ್ಗೆ ತಿಳಿಸಿದರು.

ಕರ್ನಾಟಕದ ಟಾಸ್ಕ್‌ಫೋರ್ಸ್ ಕಮಿಟಿಯ ಚೇರ್‌ಮನ್ ಆದ ಡಾ. ಸುದರ್ಶನ್ ಅವರು ಯಾರೇ ಆದರೂ ವೈಯಕ್ತಿಕವಾಗಿ ಆರೋಗ್ಯಕ್ಕೆ ಸಂಬಂಧಿಸಿದ ಸಲಹೆ ಕೊಡುವುದಿದ್ದರೆ ಕೊಡಲು ಕರೆಕೊಟ್ಟರು. ಪ್ರತೀ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಸಮಿತಿ ಮಾಡಿ, ಪ್ರತಿ ಹಳ್ಳಿಯಿಂದ ಇಬ್ಬರು ಸದಸ್ಯರಿರುವಂತೆ ಹಾಗೂ ಪ್ರತೀ ಹಳ್ಳಿಗೆ ಒಬ್ಬ ಆರೋಗ್ಯ ಕಾರ್ಯಕರ್ತೆಯನ್ನು ಕೊಡುವ ಕುರಿತು ಸಮಿತಿ ಆಲೋಚಿಸುತ್ತಿದೆ

COMH 342
07527

ಎಂದು ತಿಳಿಸಿದರು. ಊಟದ ವಿರಾಮದ ನಂತರ ಕಲಾತಂಡದವರಿಂದ ಆರೋಗ್ಯ ಹಾಡುಗಳ ಮುಖಾಂತರ ಪುನಃ ಕಾರ್ಯಕ್ರಮ ಪ್ರಾರಂಭಿಸಲಾಯಿತು.

**ಡಾ. ಚಟರ್ಜಿ** ಇವರು ಖಾಸಗೀಕರಣ ಹಾಗೂ ಉದಾರೀಕರಣದ ಸ್ವಾತಂತ್ರ್ಯ ಮತ್ತು ಪರತಂತ್ರದ ವಿಷಯವನ್ನು ತಿಳಿಸಿದರು. ಆರೋಗ್ಯವೆಂದರೆ, ಇಡೀ ಸಮಾಜದ ಆರೋಗ್ಯ. ಬಡತನ, ಹಸಿವೆ, ಬೆಲೆ ಏರಿಕೆ, ಅನಕ್ಷರತೆ ಮುಂತಾದ ಜ್ವಲಂತ ಸಮಸ್ಯೆಗಳು ಕಾಡುತ್ತಿವೆ. ಆಮದು, ಮುಕ್ತ ಮಾರುಕಟ್ಟೆ ಹಾಗೂ ಮಾರುಕಟ್ಟೆ ಜಾಗತೀಕರಣ ನಡೆಯುತ್ತಿದೆ ವಿನಃ ಶಾಂತತೆಯ, ನೆಮ್ಮದಿಯ ಆರೋಗ್ಯದ ಜಾಗತೀಕರಣವು ನಡೆಯುತ್ತಿಲ್ಲ. ಅದು ನಡೆಯಬೇಕು ಎಂದರು. 1999 ರಲ್ಲಿ ಸಿಪ್ಸಿಲ್‌ನಲ್ಲಿ ಜಾಗತೀಕರಣ ನಡೆಯಿತು. ಸಫಲ ಆಗಲಿಲ್ಲ. ವಿಶ್ವ ವಾಣಿಜ್ಯ ಸಂಸ್ಥೆ (WTO) ಶಿಕ್ಷಣ ವಿಜ್ಞಾನದಲ್ಲಿ, ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿರುವರು ಎಂದು ತಿಳಿಸಿದರು.

**ಶ್ರೀಮತಿ ವಿಮಲಾ** ಅವರು ಮಾತನಾಡಿ, ಅನಿಷ್ಟಕ್ಕೆ ಅಂಗಾರಕ ಮದ್ದು. ಅನಿಷ್ಟತೆಯಿಂದ ನಿಷ್ಟತೆಗೆ ಬರಲು ಗುರಿ ಬಹಳ ಮುಖ್ಯ. ವಿಶ್ವ ವ್ಯಾಪಾರ ಸಂಸ್ಥೆ ಇದು ಕೇವಲ ವ್ಯಾಪಾರಕ್ಕಾಗಿ ಬಂದಿದ್ದು, ಇದರಲ್ಲಿ ಲಾಭ - ನಷ್ಟ, ಆರೋಗ್ಯ - ಅನಾರೋಗ್ಯದ ಬಗ್ಗೆ ಯಾರೂ ವಿಚಾರ ಮಾಡಿಲ್ಲ. ಆ ವಿಚಾರ ಇನ್ನು ಮೇಲೆ ಪ್ರಾರಂಭವಾಗಿ ಆರೋಗ್ಯಕ್ಕೆ ಅನುಕೂಲವಾಗಬೇಕೆಂದು ತಿಳಿಸಿದರು.

ಅಲ್ಲದೇ ಆರೋಗ್ಯವಾಗಿದ್ದರೆ ಅದೇ ಭಾಗ್ಯ. 130 ಮಿಲಿಯನ್ ಭಾರತೀಯರಿಗೆ ಆರೋಗ್ಯ ಲಭ್ಯ ಇಲ್ಲ. ಶೇ. 25 ರಷ್ಟು ಜನರಿಗೆ ಸೌಕರ್ಯ ಲಭ್ಯವಿಲ್ಲ. ಜಾಗತೀಕರಣ ನೀತಿಯಿಂದ ಉಳ್ಳವರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವ ಪರಿಸ್ಥಿತಿ ಇರುವಾಗ ಮೂಲಭೂತ ಸೌಕರ್ಯ ಸಿಗುತ್ತಿಲ್ಲ.

- ಜನಾರೋಗ್ಯ ಸಭೆ ಸರ್ವರ ಸಭೆ ಎಂದು ಕರೆಯುತ್ತಾರೆ.
- ಕರ್ನಾಟಕದ ತುಂಬ ಆರೋಗ್ಯ ಜ್ಯೋತಿಯನ್ನು ಹಚ್ಚಿದ್ದೇವೆ, ಆರೋಗ್ಯ ಸುಧಾರಣೆ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡಬೇಕೆಂದರು.

ಜನಾರೋಗ್ಯ ಕಲಾಜಾಥಾ ಮಾಡಿದ ಅಥವಾ ಸಂವಾದ ಮಾಡಿದ ವರದಿಯನ್ನು ಈ ಕೆಳಗಿನ ಜಿಲ್ಲೆಯವರು ಹಂಚಿಕೊಂಡರು.

1. ದಾವಣಗೆರೆ 2. ಬೀದರ್ 3. ಬೆಳಗಾಂವ್ 4. ಮಂಡ್ಯ 5. ಕೋಲಾರ್ 6. ಬೆಂಗಳೂರು (ಗ್ರಾಮ) 7. ದಕ್ಷಿಣ ಕನ್ನಡ 8. ಬಿಜಾಪುರ 9. ಬಾಗಲಕೋಟೆ 10. ತುಮಕೂರು 11. ಮೈಸೂರು 12. ಬಳ್ಳಾರಿ 13. ಗುಲ್ಬರ್ಗಾ 14. ಶಿವಮೊಗ್ಗ 15. ಚಿಕ್ಕಮಂಗಳೂರು 16. ಚಾಮರಾಜನಗರ 17. ಉಡುಪಿ 18. ಉತ್ತರ ಕನ್ನಡ ಈ ರೀತಿಯಾಗಿ ಮೊದಲಾದ ಜಿಲ್ಲೆಯವರು ತಮ್ಮ ಜಿಲ್ಲೆಗಳ ಅನಿಸಿಕೆಗಳನ್ನು ಹಂಚಿಕೊಂಡರು.

ಅ. 1. ಜಾಥಾದ ಪೂರ್ವ ಸಿದ್ಧತೆ.
2. ಜಾಥಾದ ಯೋಜನೆ.
3. ಜಾಥಾದ ಕಾರ್ಯಾಗಾರ.
4. ಜಿಲ್ಲೆಯಲ್ಲಿರುವ ಅಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಾಡಿದ ಸಹಾಯ.
5. ಕಲಾ ತಂಡದವರಿಗೆ ತರಬೇತಿ.
6. ಸ್ವಾಗತ ಸಮಿತಿ ರಚನೆ.

ಆ. ಗ್ರಾಮಗಳಲ್ಲಿಯ ಸಮಸ್ಯೆಗಳು.

ಇ. ಗ್ರಾಮಗಳಲ್ಲಿಯ ರೋಗಗಳು.

ಈ. ಸರ್ಕಾರದ ವ್ಯವಸ್ಥೆ.

ಉ. ಜನರ ಪಾಲ್ಗೊಳ್ಳುವಿಕೆ.

ಊ. ಜಿಲ್ಲಾ ಸಮಾವೇಶ.

ಋ. ಸಂವಾದ ಕಾರ್ಯಕ್ರಮ. (ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚೆ ಮುಖಾಮುಖಿ)

ಈ ಮೇಲಿನಂತೆ ಎಲ್ಲ ಕಡೆಯೂ ಗುರುತಿಸಿ ರೂಪವನ್ನು ಇಟ್ಟುಕೊಂಡು ಜನರ ಆರೋಗ್ಯಕ್ಕಾಗಿ ಸರ್ಕಾರದ ಯೋಜನೆ ಆಗಬೇಕೆಂದು ಪ್ರತಿ ಜಿಲ್ಲೆಯವರು ಸಲಹೆಗಳನ್ನು ಲಿಖಿತ ಮತ್ತು ಮೌಖಿಕವಾಗಿ ಮಂಡಿಸಿದರು. ಜೊತೆಗೆ ಸಂಪೂರ್ಣವಾದ ವರದಿಯನ್ನು ಜನಾರೋಗ್ಯ ರಾಜ್ಯ ತಂಡಕ್ಕೆ ಎಲ್ಲ ಜಿಲ್ಲೆಯವರು ಒಪ್ಪಿಸಿದರು. ವರದಿ ಮಂಡಿಸಿದ ನಂತರ ಡಾ. ಸಿ. ಆರ್. ಚಂದ್ರಶೇಖರ ಅವರು ಇಲ್ಲಿಯವರೆಗೆ ಹಂಚಿಕೊಂಡ ಗುಂಪುಗಳ (ಜಿಲ್ಲೆಗಳ) ವರದಿ ಬಹಳ ಚೆನ್ನಾಗಿದೆ. ಆದರೆ ಅದರಲ್ಲಿ ಜನರ ಪಾತ್ರ ಜಾಗರೂಕತೆಯಿಂದ ನಿರ್ವಹಿಸಬೇಕಾಗುತ್ತದೆ. ಅದು ಇಲ್ಲಿಲ್ಲ. ಜನರು ಜಾಗ್ರತರಾಗಬೇಕೇ ವಿನಹ ಇಲಾಖೆಯನ್ನು ದೂಷಿಸಬಾರದು ಎಂದು ಇಡೀ ಜನ ಸಮೂಹಕ್ಕೆ ಬಹಳ ಚೆನ್ನಾಗಿ ಹೇಳಿದರು.

<u>ಶ್ರೀ ಡಾ. ಚಟರ್ಜಿ</u> ಅವರು ಮಾತನಾಡಿ, ಆರೋಗ್ಯ ಪಾಲನೆ ಕ್ಷೀಣಿಸುತ್ತಿದೆ, ಅನ್ನಕ್ಕೆ ಅವಸಾನ, ಸೈನ್ಯಕ್ಕೆ ಸಹಾಯ. ಆಗುತ್ತಿದೆ. ಉನ್ನತ ಅಧ್ಯಯನದಲ್ಲಿ ಜ್ಯೋತಿಷ್ಯವನ್ನು ತೂರಿ ಬಿಡುತ್ತಿದ್ದಾರೆ. 1991 ರಿಂದ ಉದಾರೀಕರಣದ ಬೆಳಕಿನಿಂದ ನಮ್ಮ ದೇಶದ ಪರಿಸರ ಮತ್ತು ಸಂಪನ್ಮೂಲ ನಾಶವಾಗುತ್ತಿದೆ ಎನ್ನುವುದನ್ನು ಚಿಂತನೆ ಮಾಡಬೇಕಾಗಿದೆ ಎಂದರು. ವೈಜ್ಞಾನಿಕ ಚಿಂತನೆಯ ಅಗತ್ಯವಿರುವಾಗ ಅವೈಜ್ಞಾನಿಕ ಚಿಂತನೆಯಿಂದ ಕೀಟಾಣುಗಳಿಂದ ರೋಗಗಳು ಹರಡುತ್ತವೆ ಎಂಬುದರ ಬದಲು ಗ್ರಹಗಳ ಬದಲಾವಣೆಯಿಂದ ಆಗುತ್ತದೆ ಎಂಬ ತಪ್ಪು ಕಲ್ಪನೆ ಇದೆ. ಈ ರೀತಿಯಾಗಿ ಕೈಗೊಂಡ ತೀರ್ಮಾನವನ್ನು ತಿಳಿಸಿದಾಗ, ಗುಂಪು ಒಂದೊಂದು ಸಲ ವಾಗ್ವಾದಕ್ಕೆ ಇಳಿಯುತ್ತಿತ್ತು. ಕಾರ್ಯಕ್ರಮದ ಅಧ್ಯಕ್ಷರು ಗುಂಪನ್ನು ನೇರವಾದ ದಾರಿಗೆ ತರುತ್ತಿದ್ದರು. ಇದರ ನಂತರ 8 ಸಣ್ಣ ಸಣ್ಣ ಗುಂಪುಗಳನ್ನು ಮಾಡಿ ಚರ್ಚೆಗೆ ಬಿಟ್ಟರು.

<u>ವಿಷಯಗಳು:</u>

1. ಸಮುದಾಯ ಮಾನಸಿಕ ಆರೋಗ್ಯ.
2. ಅಸಮರ್ಥತೆ.
3. ಸ್ತ್ರೀ ಭ್ರೂಣ ಹತ್ಯೆ ಹಾಗೂ ಮಹಿಳೆ ಮತ್ತು ಮಕ್ಕಳ ಮೇಲೆ ಹಿಂಸೆ.
4. ಮಕ್ಕಳಲ್ಲಿ ಕಂಡು ಬಂದಂತಹ ಅಪೌಷ್ಟಿಕತೆ ಮತ್ತು ಬಾಲ ಕಾರ್ಮಿಕತೆ.
5. ಔಷಧಿಗಳು ಮತ್ತು ಸಂಪ್ರದಾಯಿಕ ಔಷಧಿಗಳು.
6. ಜನಸಂಖ್ಯಾ ನಿಯಂತ್ರಣ ಮತ್ತು ಲೈಂಗಿಕತೆ.
7. ಪರಿಸರ ಮತ್ತು ಆರೋಗ್ಯ, ಜಾಗತೀಕರಣ ಆರೋಗ್ಯ.
8. ಸಂಕ್ರಾಮಿಕ ಮತ್ತು ಅಂಟುರೋಗಗಳ ನಿಯಂತ್ರಣ.

ಪ್ರತಿಯೊಂದು ಗುಂಪುಗಳಲ್ಲಿ ಪ್ರತಿಯೊಂದು ಜಿಲ್ಲೆಯಿಂದ ಭಾಗಾರ್ಥಿಗಳು ಭಾಗವಹಿಸಿದ್ದರು. ಗುಂಪಿಗೆ ಕೊಟ್ಟ ವಿಷಯದ ಚರ್ಚೆ ಬಹಳ ಜೋರಾಗಿ ಒಂದು ತಾಸಿನವರೆಗೆ ಚಕಮಕಿಯಿಂದ ಚರ್ಚಿಸಿ, ಒಂದು ತೀರ್ಮಾನಕ್ಕೆ ಬಂದು ಆಯಾ ಗುಂಪಿನ ವರದಿಯನ್ನು ಅಲ್ಲೇ ತಯಾರಿಸಿ ಒಬ್ಬರಿಗೆ ಜವಾಬ್ದಾರಿ ಕೊಟ್ಟರು ಹಾಗೂ ಈ ದಿನದ ಕಾರ್ಯಕ್ರಮವನ್ನು ಮುಗಿಸಿ ರಾತ್ರಿ 9-00 ಗಂಟೆಗೆ ಊಟಕ್ಕೆ ಬಿಡಲಾಯಿತು. ನಂತರ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಇದೆ. ಈಗಾಗಲೇ ಹೆಸರು ನೋಂದಾಯಿಸಿದವರು ಊಟದ ನಂತರ ಬರಬೇಕೆಂದು ತಿಳಿಸಿ ಸಾಂಸ್ಕೃತಿಕ ಕಾರ್ಯಕ್ರಮದ ಮುಕ್ತಾಯದೊಂದಿಗೆ ಇಂದಿನ ಕಾರ್ಯಕ್ರಮ ಮುಕ್ತಾಯಗೊಳಿಸಿ ಪುನಃ ಬೆಳಿಗ್ಗೆ 8-00 ಗಂಟೆಗೆ ಸೇರಲು ತಿಳಿಸಿದರು.

ದಿನಾಂಕ 27-11-2000 ರಂದು ಪುನಃ ಜನಾರೋಗ್ಯ ಹಾಡಿನ ಮೂಲಕ ಕಾರ್ಯಕ್ರಮ ಮುಂದುವರಿಯಿತು. ಸಣ್ಣ ಸಣ್ಣ ಗುಂಪುಗಳನ್ನು ಮಾಡಿ 8 ವಿಷಯಗಳನ್ನು ಚರ್ಚಿಸಿದ್ದನ್ನು ಕ್ರೋಢೀಕೃತ ಮಾಡಿ ಒಂದೊಂದು ಗುಂಪಿನಿಂದ ಒಬ್ಬೊಬ್ಬರು ಬಂದು ಗುಂಪಿಗೆ ತೀರ್ಮಾನ ಹಾಗೂ ಚರ್ಚೆಯ ವಿಷಯವನ್ನು ಮಂಡಿಸಿದರು.

I. **ಆಧುನಿಕ ಔಷಧಿಗಳು ಮತ್ತು ಸಂಪ್ರದಾಯಿಕ ಔಷಧಿಗಳ ಸಮಂಜಸ ಬಳಕೆ, ಔಷಧೀ ಕ್ಷೇತ್ರದ ವ್ಯಾಪಾರೀಕರಣ:** ಈ ಗುಂಪಿನಲ್ಲಿ 18 ಜನರು ಇದ್ದರು. ಚರ್ಚೆ ಮುಖ್ಯಸ್ಥರು ಡಾ. ಪ್ರಕಾಶ ಇವರು ಇದ್ದರು. ಈ ಚರ್ಚೆಯಲ್ಲಿ ಬಂದ ಅಂಶಗಳು ಈ ರೀತಿಯಾಗಿವೆ.

- ಇಡೀ ಭಾರತದಲ್ಲಿ 83 ಸಾವಿರ ಔಷಧೀ ಕಂಪನಿಗಳಿವೆ. 28 ಸಾವಿರ ಕಂಪನಿಗಳ ಔಷಧಿ ಮಾತ್ರ ಚೆನ್ನಾಗಿವೆ, ಅವುಗಳನ್ನು ಉಪಯೋಗಿಸಬೇಕು. ಉಳಿದ ಎಲ್ಲ ಕಂಪನಿಗಳ ಉಪಯೋಗ ಇಲ್ಲ. ಆದರೆ ಭಾರತದಲ್ಲಿ ಪಾಶ್ಚಾತ್ತೀಕರಣದ ಪ್ರಭಾವ ಹೆಚ್ಚಾಗಿದೆ ಎಂದರು.
- ಸ್ಥಳೀಯ ಆರೋಗ್ಯ ಪದ್ಧತಿ ಜನರ ಆರೋಗ್ಯದ ಬಗ್ಗೆ ಕೆಲಸ ಮಾಡುವುದು, ಪರಂಪರಾಗತ ಔಷಧೀ ಪದ್ಧತಿ ಸ್ವತಂತ್ರವಾಗಿ ತಯಾರಿಸಿಕೊಂಡು ಬಂದಿದ್ದು, ಗಿಡಮೂಲಿಕೆಗಳ ಬಳಕೆ ಹಿಂದಿನಿಂದ ಬಂದಂತಹದ್ದು.
- ಸುಲಭವಾಗಿ ಸರಳವಾಗಿ ಹಣವಿಲ್ಲದೇ ತಕ್ಷಣವಾಗಿ ಪ್ರಥಮವಾಗಿ ಸಿಗುವ ಗಿಡಮೂಲಿಕೆ.
- ಎಲೆ ಚಕ್ಕೆ ಪುಡಿಗಳ ಮೂಲಕ ಊರಿನಲ್ಲಿ ಯಾರೋ ಒಬ್ಬರು ಕೊಡುತ್ತಾರೆ.
- ನಾಟಿಯ ವೈದ್ಯರು ಸ್ಥಳೀಯ ಗಿಡಮೂಲಿಕೆಗಳನ್ನು ಉಪಯೋಗಿಸಿ ಏಡ್ಸ್ ರೋಗಕ್ಕೆ ಔಷಧಿಯನ್ನು ಕೊಡಬಹುದು.
- ಅಂಗೈಯಲ್ಲಿ ಔಷಧಿ ಎಂದರೆ ಅಡುಗೆ ಮನೆಯಲ್ಲಿ ಔಷಧಿ.
- ಗಿಡಮೂಲಿಕೆ ಔಷಧಿಗಳ ಬಗ್ಗೆ ಪಠ್ಯ ಪುಸ್ತಕದಲ್ಲಿ ಹಾಕಬೇಕು.
- ಗಿಡಮೂಲಿಕೆ ಔಷಧಿ ನಂಬಿಕೆಯ ಮೇಲೆ ನಿಂತಿದೆ.
- ಶೇಕಡ 80 ರಷ್ಟು ಆಧುನಿಕ ಔಷಧಿ ಗ್ರಾಮೀಣ ಜನರಿಗೆ ತಲುಪಿಲ್ಲ.
- ಒಂದು ವರ್ಷಕ್ಕೆ ಶೇಕಡ 3 ರಷ್ಟು ಔಷಧಿಗೆ ಹಣವನ್ನು ಖರ್ಚು ಮಾಡಬೇಕೆಂದು 94 ರ ಪಂಚವಾರ್ಷಿಕ ಯೋಜನೆಯಲ್ಲಿ ಇತ್ತು. ಕೇರಳದಲ್ಲಿ ಔಷಧಿಗಾಗಿ ಶೇ. 8 ರಿಂದ 16 ರಷ್ಟು ಔಷಧ ಖರ್ಚಿಗೆ ಹಣವನ್ನು ಇಟ್ಟಿದ್ದಾರೆ.
- 15000 ಗಿಡದಲ್ಲಿ 8000 ಗಿಡಗಳನ್ನು ಮಾತ್ರ ಔಷಧಿಗಾಗಿ ಉಪಯೋಗಿಸುತ್ತಿದ್ದೇವೆ.
- ಭಾರತದಲ್ಲಿ 4638 ಜಾತಿಯ ಜನರಿದ್ದಾರೆ.
- 800 ಕಾಯಿಲೆಗಳಿಗೆ ಜನ ಮತ್ತು ದನಕ್ಕೆ ಗಿಡಮೂಲಿಕೆಯನ್ನು ಉಪಯೋಗಿಸುತ್ತಾರೆ.
- ಬೇರೆ ದೇಶದಲ್ಲಿ ಭಾರತದಲ್ಲಿರುವ 80 ಗಿಡಗಳು ಮಾತ್ರ ಸಿಗಬಹುದು. ಆದರೂ ಅವರು ಭಾರತದಲ್ಲಿನ ಸಂಪನ್ಮೂಲವನ್ನು ತೆಗೆದುಕೊಂಡು ಹೋಗಿ ಸಂಶೋಧಿಸಿ ಔಷಧಿ ತಯಾರಿಸಿ ತಮ್ಮ ದೇಶದ ಲೇಬಲ್ ಅಂಟಿಸಿ ಅದನ್ನು ಹೆಚ್ಚಿನ ಬೆಲೆಗೆ ನಮಗೆ ಮಾರುತ್ತಾರೆ.
- ನಮ್ಮ ದೇಶದಲ್ಲಿಯ ಸುಮಾರು 200 ಗಿಡಮೂಲಿಕೆಗಳು ನಶಿಸಿ ಹೋಗುವ ಸ್ಥಿತಿಯಲ್ಲಿವೆ.
- ಸಕ್ಕರೆ ಕಾಯಿಲೆ, ಬಿ.ಪಿ., ಅಸ್ತಮ, ಏಡ್ಸ್ ಈ ರೋಗಗಳು ಸಂಪೂರ್ಣವಾಗಿ ಗುಣವಾಗಲ್ಲ. ತಾತ್ಕಾಲಿಕವಾಗಿ ಹಿಡಿತದಲ್ಲಿ ಬರುತ್ತವೆ.

ಈ ರೀತಿಯಾಗಿ ಈ ಗುಂಪಿನಲ್ಲಿ ಇಂಗ್ಲೀಷ್ ಔಷಧಿ ಮತ್ತು ಆಯುರ್ವೇದಿಕ್ ಔಷಧಿಗಳ ಬಗ್ಗೆ ಬಹಳ ಚೆನ್ನಾಗಿ ಚರ್ಚೆಯಾಗಿದೆ ಎಂದು ದೊಡ್ಡ ಗುಂಪಿನಲ್ಲಿ ಹಂಚಿಕೊಂಡರು.

II. **ಜನಸಂಖ್ಯಾ ನಿಯಂತ್ರಣ ಮತ್ತು ಲೈಂಗಿಕತೆ:** ಇದರಲ್ಲಿ 23 ಜನ ಹಾಗೂ ವೈದ್ಯರು ಭಾಗವಹಿಸಿದ್ದರು. ಈ ಗುಂಪಿನಲ್ಲಿ ಮೊದಲಿಗೆ ಜನಸಂಖ್ಯೆಗೆ ಕಾರಣ ಕೇಳಿದರು.

- ಇರುವ ಸಂಪನ್ಮೂಲಕ್ಕಿಂತ ಜನ ಹೆಚ್ಚಾಗಿದ್ದರೆ.
- ಬಡತನ, ತಿಳುವಳಿಕೆಯಿಲ್ಲದ್ದರಿಂದ.
- ನಿರುದ್ಯೋಗದ ಸಮಸ್ಯೆ.
- ಮೂಢನಂಬಿಕೆ.
- ಶಿಕ್ಷಣ ಇಲ್ಲದಿರುವುದಕ್ಕೆ.
- ಒಂದೇ ಹೆಣ್ಣು ಇದ್ದಾಗ ಗಂಡು ಮಗುವಿಗಾಗಿ ಕಾಯುವುದು.
- ಹುಟ್ಟು ಜಾಸ್ತಿ ಆದರೆ ಸಾಯುವ ಸಂಖ್ಯೆ ಕಡಿಮೆ ಇದೆ.
- ಜನಸಂಖ್ಯಾ ನಿಯಂತ್ರಣ ಮಾಡುವಲ್ಲಿ ಕಾನೂನು ಏನು ಇಲ್ಲ. ಕಾನೂನು ಮಾಡಿದರೆ ನಿಯಂತ್ರಿಸಲು ಸಾಧ್ಯ.
- ಮುಸ್ಲಿಂರು ಕುಟುಂಬ ಯೋಜನೆ ಅಳವಡಿಸುತ್ತಿಲ್ಲ.
- ಹುಟ್ಟು ಪ್ರಮಾಣ ಕಡಿಮೆ ಆದರೆ ಜನಸಂಖ್ಯಾ ನಿಯಂತ್ರಣ ಮಾಡಬಹುದು.
- ಬಾಲ್ಯ ವಿವಾಹ ಆಗುವುದರಿಂದ.
- ಲೈಂಗಿಕತೆ ಮಾಹಿತಿ ಇಲ್ಲದಿರುವುದು.
- ಸೌಲಭ್ಯ ಇರುವುದಿಲ್ಲ.
- ಆಸೆ, ಬಯಕೆ. ಉದಾ: ಚೈನಾ ದೇಶದಲ್ಲಿ .
- ಕಾರ್ಯಕರ್ತರ ಜವಾಬ್ದಾರಿ ಇಲ್ಲ. ಸರಿಯಾಗಿ ಮಾಹಿತಿಯನ್ನು ಸರಕಾರಿ ನೌಕರರು ತಿಳಿಸುತ್ತಿಲ್ಲ.
- ತಪ್ಪು ತಿಳುವಳಿಕೆ.
- ಅಜ್ಞಾನ.
- ಮೂಢನಂಬಿಕೆ, ತಿಳುವಳಿಕೆ ಕೊಡಬೇಕು, ಕಾನೂನು ಮಾಡಬೇಕು. ಉದಾ: ಯೋಜನೆಗಳಲ್ಲಿ ಹಣಕಾಸಿನ ನೆರವು ಕೊಡುವಾಗ, ಒಂದು ಮತ್ತು ಎರಡು ಮಗು ಇದ್ದರೆ ಮಾತ್ರ ಅವಕಾಶ.
- ಚುನಾವಣೆಗಳಲ್ಲಿ 1 ಮಗು ಇದ್ದರೆ ಮಾತ್ರ ಸ್ಪರ್ಧಿಸಲು ಅವಕಾಶ.
- ಸರಕಾರಿ ನೌಕರಿ ಮಾಡಲು ಸಹ ಈ ಕಾನೂನು ಮಾಡಿದರೆ ಜನಸಂಖ್ಯಾ ನಿಯಂತ್ರಿಸಲು ಸಾಧಿಸಲು ಸಾಧ್ಯವಾಗುವುದೆಂದು ಚರ್ಚಿಸಲಾಯಿತು.

**ಲೈಂಗಿಕತೆ ಬಗ್ಗೆ:**

- ಮಹಿಳೆಯರ ಮೇಲೆ ಒತ್ತಡ
- ಶಿಕ್ಷಣ ಇಲ್ಲದಿದ್ದರೆ
- ಜೀವನ ಎಂದರೆ ಹೀಗೆ ಎಂಬ ತಿಳುವಳಿಕೆ ಇಲ್ಲ
- ಲಿಂಗಭೇದ
- ಮಕ್ಕಳಾಗುವ ಬಗ್ಗೆ, ಸಂಪೂರ್ಣವಾದ ಜೀವನದ ಬಗ್ಗೆ ಮಾಹಿತಿ
- ಕಿಶೋರಿಯರಿಗೆ ವಾಸ್ತವಿಕವಾಗಿ ನಿಜಸ್ಥಿತಿಯನ್ನು ತಿಳಿಸುವುದು.

- ಲೈಂಗಿಕತೆ ಬಗ್ಗೆ ಹೇಳುವಾಗ ಮುಜುಗರ ಆಗುತ್ತದೆ. ಮೊದಲು ಪಾಠ ಹೇಳುವ ಶಿಕ್ಷಕರು ಇದನ್ನು ಬಿಡಬೇಕು.
- ವ್ಯವಸ್ಥಿತವಾದ ರೀತಿಯಲ್ಲಿರಬೇಕು.
- 5 ನೇ ತರಗತಿ ಶಿಕ್ಷಣ ಕೊಡಿಸಬೇಕು.
- ಮಗು ಕೇಳಿದಾಗ ಒಳಗಿನ ಭಾವನೆಗಳು ತಿಳಿಸುತ್ತಿರಬೇಕು, ಸಂಕೋಚ ಪಡಬಾರದು.
- ಸಂದರ್ಭಕ್ಕನುಸಾರವಾಗಿ ವಿಷಯ ಮಂಡಿಸಬೇಕು. ಇಲ್ಲದಿದ್ದರೆ ಬೇರೆ ವಿಷಯ ತಿಳಿಸಿ ಮನವರಿಕೆ ಮಾಡಿಸಬೇಕು.
- ಗಂಡು ಮತ್ತು ಹೆಣ್ಣು ವ್ಯವಹಾರದ ಬಗ್ಗೆ ತಿಳಿಸಬೇಕು.
- ಅತ್ಯಾಚಾರದ ಬಗ್ಗೆ ಚರ್ಚೆ -ಪತ್ರಿಕೆಯಲ್ಲಿ ಬಂದಾಗ ಚಿಕ್ಕ ಮಕ್ಕಳಿಗೆ ಇದರ ಬಗ್ಗೆ ತಿಳಿಸಿ ಹೇಳಬೇಕು.
  ನೇರವಾಗಿ ಹೇಳದೇ ಬೇರೆ ಉದಾಹರಣೆಗಳ ಮುಖಾಂತರ ಹೇಳಬೇಕು.
- ಗೆಳೆತನದಿಂದ ಕಲಿಕೆ ಸಾಧ್ಯ.

**ಒಟ್ಟಾರೆ ಗುಂಪಿನಿಂದ ತೀರ್ಮಾನವಾದದ್ದು:**

- **ಕುಟುಂಬಕ್ಕೆ ಶಿಕ್ಷಣ ತಿಳುವಳಿಕೆ ಮುಖಾಂತರ**
- **ಕುಟುಂಬದಲ್ಲಿ ಹೊಂದಾಣಿಕೆಯಿರಬೇಕು.**
- ಸಮುದಾಯಕ್ಕೆ ಪುರುಷರ ಕುಟುಂಬ ಯೋಜನೆ ಅಳವಡಿಸುವಂತೆ ಜಾಗೃತಿ ಮೂಡಿಸುವುದು.
- ಸಮುದಾಯಕ್ಕೆ ಲೈಂಗಿಕತೆ ಬಗ್ಗೆ ಅರಿವು ಮೂಡಿಸಬೇಕು.
- ತಂದೆ-ತಾಯಿಗಳಿಗೆ ತಿಳುವಳಿಕೆ ನೀಡಬೇಕು.
- 6 ನೇ ತರಗತಿಯಿಂದ ಅಂಗಾಂಗಗಳ ಬದಲಾವಣೆ ಹಾಗೂ 8 ನೇ ತರಗತಿಯಲ್ಲಿ ಲೈಂಗಿಕತೆ ಬಗ್ಗೆ ಮಕ್ಕಳಿಗೆ ಶಿಕ್ಷಣ ಪಠ್ಯ ಪುಸ್ತಕದಲ್ಲಿ ಅಳವಡಿಸಬೇಕು.
- ಕಾನೂನು ಜಾರಿಗೆ ತರಬೇಕು.
- ಮಹಿಳೆಯರ ಮೇಲೆ ಒತ್ತಡ ಹಾಕಲಾರದೆ ಇಬ್ಬರು ಸಮಾನರು ಎಂಬ ತಿಳುವಳಿಕೆ ಸಮುದಾಯಕ್ಕೆ ವ್ಯವಸ್ಥಿತವಾಗಿ ಕೊಡುವುದು.

III. ಈ ಗುಂಪಿನಲ್ಲಿ ಮುಖ್ಯವಾಗಿ 2 ವಿಷಯಗಳ ಕುರಿತು ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಶ್ರೀಮತಿ ಅಮೃತಾ ಮಹಿಳಾ ಸಮಖ್ಯಾ ರಾಜ್ಯ ಸಂಪನ್ಮೂಲ ವ್ಯಕ್ತಿ, ವಿಮಲಾ ಜನವಾದಿ ಮಹಿಳಾ ಸಂಘಟನೆ ಇವರು ಗುಂಪಿನಲ್ಲಿ ಭಾಗವಹಿಸಿದ್ದರಲ್ಲದೇ ಬೇರೆ ಬೇರೆ ಸಂಸ್ಥೆಗಳಿಂದ ಒಟ್ಟು 50 ಜನ ಸದಸ್ಯರು ಭಾಗವಹಿಸಿದ್ದರು.

**1.ಮಹಿಳೆ ಮತ್ತು ಹಿಂಸಾಚಾರ:** ಈ ವಿಷಯದ ಕುರಿತು ಗುಂಪಿನಲ್ಲಿ ದೀರ್ಘವಾಗಿ ಚರ್ಚೆ ನಡೆಯಿತು. ಮುಖ್ಯವಾಗಿ ಮಹಿಳೆ ಕರ್ನಾಟಕ ಹಾಗೂ ಉತ್ತರ ಪ್ರದೇಶಗಳಲ್ಲಿ ಜಾಸ್ತಿ ಹಿಂಸೆಗೆ ಒಳಗಾಗುತ್ತಾಳೆ. ಅದು ಯಾರಿಂದ, ಹೇಗೆ, ಏಕೆ ಎಂಬುದು ನಮ್ಮ ಒಂದು ದೊಡ್ಡ ಪ್ರಶ್ನೆಯಾಗಿದೆ. ಮತ್ತು ಅವಳಿಗೆ ಕಾನೂನಿನ ಮೂಲಕವೂ ಕೂಡ ಒಂದು ರೀತಿಯ ಹಿಂಸೆಯೇ ಆಗಿದೆ. ಈ ಸಂದರ್ಭದಲ್ಲಿ ಪುರುಷರಿಂದ ಒಂದು ಪ್ರಶ್ನೆ ಬಂತು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಮೂಲಭೂತ ಸಮಸ್ಯೆ ಅನುಭವಿಸುವುದು. ನೀರು, ಉರುವಲು, ವರದಕ್ಷಿಣೆ ಇತ್ಯಾದಿ ಸಮಸ್ಯೆಗಳಿಂದ ಮಹಿಳೆ ಹಿಂಸೆಗೆ ಒಳಗಾಗುತ್ತಾಳೆ. ಅದರಂತೆ ಇದು ಬರೀ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲದೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೂಡ ಅತ್ಯಾಚಾರ, ಕೊಲೆಗಳು

ಇತ್ಯಾದಿ ಮಹಿಳೆಗೆ ಸಂಬಂಧಿಸಿದ್ದಾಗಿದೆ. ಅದರಂತೆ ಹೆಣ್ಣೇ ಹೆಣ್ಣಿಗೆ ಶತ್ರು ತಾನೇ ಎಂದು ಅವರು ಪ್ರಶ್ನಿಸಿದಾಗ, ಇದಕ್ಕೆ ಗುಂಪಿಂದ ಹೀಗೆ ಪ್ರತಿಕ್ರಿಯೆ ಬಂದಿತು. ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವುದು ಅದು ಭ್ರಮೆ ಮಾತ್ರ. ಈ ದೇಶದಲ್ಲಿ ಆಸ್ತಿಗಾಗಿ ಇತರೆ ರಾಜಕೀಯ ಕಾರ್ಯಗಳಲ್ಲಾಗಲಿ ಎಷ್ಟೋ ಜನ ಗಂಡಸರು ಒಬ್ಬರಿಗೊಬ್ಬರು ಹೊಡೆದಾಡಿ ಕೊಲೆ, ಸುಲಿಗೆ ಮಾಡಿಲ್ಲ? ಅವರಿಗೆಲ್ಲಾ ನಾವು ಗಂಡಿಗೆ ಗಂಡೇ ಶತ್ರು ಅಂತ ಹೇಳಿದ್ದಾರಾ? ಯಾವುದೇ ಹೆಣ್ಣು ಆ ರೀತಿ ಕೆಟ್ಟ ಕೊಡಬೇಕಾದರೆ ಅದರ ಹಿಂದೆ ಗಂಡಸರ ಪಾತ್ರ ಇರುತ್ತೆ. ಹಾಗೇನಾದರೂ ಇಲ್ಲ ಅನ್ನುವುದಾದರೆ . . . ಎಂದು ಹೇಳುವಾಗ, ಗುಂಪಿನಿಂದ ಒಬ್ಬ ಪುರುಷರು ಮಾತನಾಡಿ, ನಾನು ಸ್ವಂತ ವರದಕ್ಷಿಣೆ ಬೇಡ ಎಂದು ನನ್ನ ತಾಯಿಗೆ ಹೇಳಿದರೂ ಕೂಡ ಕೇಳಲಿಲ್ಲ. ಅವಳು ಹೇಳಿದ ಹಾಗೆ ಮಾಡಿದರೂ ಕೂಡ ನನ್ನ ಹೆಂಡತಿಗೆ ಮನೆಯಲ್ಲಿ ಹಿಂಸೆ ಕೊಡೋದು ನನ್ನ ತಾಯಿನೇ. ಇದಕ್ಕೆ ಏನು ಹೇಳುತ್ತೀರಿ ಎಂದು ಪ್ರಶ್ನಿಸಿದಾಗ, ನಾವು ನೋಡುವ ದೃಷ್ಟಿಕೋನವನ್ನು ಕೂಡ ಬದಲಾಯಿಸಿಕೊಳ್ಳಬೇಕಾಗುತ್ತದೆ. ಯಾವುದೇ ಹೆಣ್ಣು ಬೇಕಂತೇ ಇನ್ನೊಂದು ಹೆಣ್ಣನ್ನು ತುಚ್ಛವಾಗಿ ಕಾಣುವುದಿಲ್ಲ. ಅವರವರ ಕೆಲಸಗಳಲ್ಲಿ ಏರುಪೇರಾಗಿದ್ದಕ್ಕೆ ಮನೆಯಲ್ಲಿ ಹಿರಿಯರಾದವರು ಒಂದೊಂದು ಮಾತುಗಳನ್ನು ಹೇಳಬೇಕಾಗಿ ಬರಬಹುದು. ಅದನ್ನೇ ನಾವು ಶತ್ರುವಾಗಿ ಏಕೆ ತೆಗೆದುಕೊಳ್ಳಬೇಕು ಎಂದು ಪ್ರತಿಕ್ರಿಯಿಸಲಾಯಿತು. ಈ ರೀತಿಯಾಗಿ ಒಂದು ಕಾನೂನಿನಲ್ಲಿ ನಾವು ಮಹಿಳೆಗೆ ಹಿಂಸೆ ಆಗಬಾರದು ಎಂದು ಆಜ್ಞೆ ಮಾಡಿಸಬೇಕಾ ಎಂದು ಪ್ರಶ್ನಿಸಿದರು. ಅದಕ್ಕೆ ಈಗಿನ ಕಾಲದಲ್ಲಿ ಎಷ್ಟೋ ಕಾನೂನುಗಳು ಮಹಿಳೆಯರ ಪರವಾಗಿಯೇ ಇವೆ. ಆದರೆ ಯಾವುದು ಮಹಿಳೆಗೆ ದೊರಕಿದೆ, ಆಸ್ತಿ ಹಕ್ಕಿದೆ, ಅನ್ಯಾಯದ ವಿರುದ್ಧ ನ್ಯಾಯ ಇದೆ, ಅತ್ಯಾಚಾರಗಳು ಆದರೆ ಅವಳು ಕೋರ್ಟಿಗೆ ಹೋದರೆ ಅಲ್ಲಿ ಒತ್ತಿ ಒತ್ತಿ ಕೇಳೋದು ಮಹಿಳೆಯನ್ನೇ ಹೊರತು ಅವಳು ಹೇಳುವ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ. ಈ ರೀತಿಯ ಕಾನೂನುಗಳು ನಮಗೆ ಬೇಕಾ?

ಅದೇ ರೀತಿಯಾಗಿ ವರದಕ್ಷಿಣೆ ಸಾವು ಅಥವಾ ಕಿರುಕುಳ ತೆಗೆದುಕೊಂಡು ಹೋದರೆ ಅಲ್ಲಿ ಹೆಚ್ಚು ಹೊರೆ ಮಹಿಳೆಗೆ ಬೀಳುವುದು. ಈ ಮೊದಲು ನೀವು ಹೇಳಿದಂತೆ ಹೆಣ್ಣಿಗೆ ಹೆಣ್ಣು ಶತ್ರು. ಆದರೆ ಅಲ್ಲಿ ಅನುಭವಿಸುವವಳು ಹೆಣ್ಣೇ ಅಲ್ಲವೇ. ಈಗಿನ ಕಾಲದಲ್ಲಿ ಮನೆಯ ಒಳಗೂ, ಹೊರಗೂ ಕೂಡಾ ಅತ್ಯಾಚಾರಗಳು ನಡೀತಾ ಇವೆ. ಆದರೆ ಈ ಕಾನೂನು/ಸಮಾಜ, ನಾವು, ನೀವೆಲ್ಲ ಏನು ಮಾಡಿದ್ವಿ? ಇದರ ಬಗ್ಗೆ ಮೊದಲು ಪುರುಷರೇ ಇದನ್ನು ಅರ್ಥ ಮಾಡಿಕೊಳ್ಳಬೇಕು. ಮತ್ತು ಅವರಿಗೆ ಇದರ ಬಗ್ಗೆ ಅರಿವು ಮೂಡಿಸಬೇಕು. ಅಲ್ಲದೇ ಈ ವಿಷಯದಲ್ಲಿ ಯಾವುದೇ ಮಹಿಳೆ ಬೇಕಂತೇ ತನ್ನ ಶೀಲ ಕಳೆದುಕೊಳ್ಳಲು ಯಾರೂ ಮುಂದೆ ಬರಲ್ಲ. ಹಾಗೇನಾದರೂ ಇದ್ದರೆ ಬೆರಳೆಣಿಕೆಯಷ್ಟು. ಮಹಿಳೆಯರನ್ನು ಹೆಚ್ಚು ಚುಡಾಯಿಸುವುದು, ಅವರ ಹಿಂದೆ ಹೋಗಿ ಮಾನಭಂಗ, ಅತ್ಯಾಚಾರಗಳು ಹೆಚ್ಚು ಪುರುಷರೇ ಇದಕ್ಕೆ ಕಾರಣಕರ್ತರು. ಮೊದಲು ಅವರು ಅರಿತು ನಡೆದರೆ ಈ ರೀತಿಯ ಹಿಂಸೆಗಳನ್ನು ತಡೆಗಟ್ಟಲು ಸಾಧ್ಯ ಎಂದು ಹೇಳಲಾಯಿತು.

ಈ ಸಂದರ್ಭದಲ್ಲಿ ಗುಂಪಿನಿಂದ ಸಂಪನ್ಮೂಲ ವ್ಯಕ್ತಿಯವರು ಈ ಹಿಂದೆ ಅದೇ ರೀತಿಯಾಗಿ ಸತಿ ಸಹಗಮನ ಪದ್ಧತಿ ಇತ್ತು. ಇದರಿಂದ ಮಹಿಳೆ ತಾನು ಇನ್ನು ಇದ್ದು ಬದುಕಬೇಕೆಂದರೂ ಕೂಡಾ ಅವಳನ್ನು ಬೆಂಕಿಗೆ ತಳ್ಳುವ ಒಂದು ಸಂದರ್ಭ ಇತ್ತು. ಆದರೆ ಅದನ್ನು ನಾವು ಈಗಾಗಲೇ ಎದುರಿಸಿಕೊಂಡೇ ಬಂದಿದ್ದೇವೆ. ಅದರಂತೆ ಇದನ್ನೇ ಮತ್ತೆ ಸರ್ಕಾರ ಹಿಂದೆ ಇದ್ದಿದ್ದು ಸರಿ ಎಂದು ಅದನ್ನೇ ಜಾರಿಗೆ ತರಲು ಚರ್ಚೆಯಾಗುತ್ತಾ ಇದೆ. ಇದನ್ನೇ ನಾವು ಜನಾಂದೋಲನ ಮೂಲಕ ಹೋರಾಟ ಕೈಗೊಂಡು ಈ ರೀತಿಯ ಪದ್ಧತಿಯನ್ನು ಜಾರಿಗೆ ತರಲಾರದಂತೆ ನೋಡಿಕೊಳ್ಳಬೇಕು. ಇನ್ನೊಬ್ಬ ಸಂಪನ್ಮೂಲ ವ್ಯಕ್ತಿಯವರು ಕೂಡ ನೋಡಿ ಈ ರೀತಿಯ ಕಾನೂನು ತಿದ್ದುಪಡಿ ಮಾಡೋರು ಪುರುಷರೇ. ತಮಗೆ ಯಾವುದು ಒಳ್ಳೇದು ಹಾಗೇ ಕಾನೂನು ರಚನೆ ಮಾಡಿಕೊಳ್ಳುತ್ತಾರೆ. ಹೀಗೆ ಮಹಿಳೆ ಹಿಂಸೆಗೆ ಮೂಲ ಕಾರಣಕರ್ತರು ಪುರುಷರೇ. ಅವರ ಕುಟುಂಬದಲ್ಲಿ ಮಕ್ಕಳನ್ನು ಬೆಳೆಸುವ ರೀತಿಯೂ ಹಾಗೆ. ಗಂಡಸಿಗೆ ಹೆಚ್ಚು ಪ್ರಾತಿನಿಧ್ಯ, ಸಹಕಾರ

ಕೊಡುವುದು, ಮಹಿಳೆಗೆ ಹುಟ್ಟುತ್ತಲೇ ಹಿಂಸೆ ಕೊಡುವುದು. ಈ ರೀತಿಯಾಗಿ ಕುಟುಂಬದಲ್ಲಿ ಈ ರೀತಿ ನಾವು ಬೆಳೆಸುವ ಒಂದು ದೃಷ್ಟಿಯನ್ನು ಇನ್ನು ಮುಂದೆ ಬದಲಾವಣೆ ಮಾಡಬೇಕು, ನಾವು ಹೇಗೆ ಬೆಳೆಸುತ್ತೇವೆ ಹಾಗೇ ಮಕ್ಕಳು ಕೂಡಾ ಬೆಳೆಯುತ್ತವೆ ಎಂದು ಪ್ರತಿಕ್ರಿಯಿಸಿದಾಗ, ಈ ಸಂದರ್ಭದಲ್ಲಿ ಒಬ್ಬ ಪುರುಷನಿಗೆ ಸಿಟ್ಟು ಬಂದು, ನೀವು ಎಲ್ಲದಕ್ಕೂ ಪುರುಷ ಪುರುಷ ಎಂದು ಹೇಳುತ್ತೀರಿ. ಇದಕ್ಕೆ ಎಷ್ಟೋ ಜನ ಮಹಿಳೆಯರೂ ಕಾರಣರಿಲ್ಲವೇ. ನಾನು ಇದನ್ನು ನಂಬುವುದಿಲ್ಲ ಎಂದು ಹೊರಡಲು ಸಿದ್ಧರಾದಾಗ, ಸಂಪನ್ಮೂಲ ವ್ಯಕ್ತಿ ಹಾಗೂ ಭಾಗಾರ್ಥಿಗಳು, ಪುರುಷ ಅಂದರೆ ಪುರುಷರೇ ಅಲ್ಲ, ಪುರುಷ ಪ್ರದಾನ ಮೌಲ್ಯಗಳು ಹಾಗೆ ಮಾಡುತ್ತವೆ ಮತ್ತು ಪುರುಷ ಪ್ರಾಬಲ್ಯತೆಗಳು ಎಷ್ಟೋ ಜನರನ್ನು ಹಾಳು ಮಾಡುತ್ತಾ ಇವೆ. ಈಗಾಗಲೇ ನೀವೇ ಹೇಳಿದಂತೆ ಮಹಿಳೆಯರಲ್ಲಿ ಕೆಲವೊಬ್ಬರು ಆ ರೀತಿ ವರ್ತಿಸುತ್ತಾರೆ ಅಂತ. ಅದಕ್ಕೂ ಈ ಪುರುಷ ಪ್ರಾಬಲ್ಯತೆಗಳೇ ಕಾರಣಗಳು ಎಂದು ಹೇಳುತ್ತಾ ಅವರನ್ನು ಸಮಾಧಾನಪಡಿಸುತ್ತಾ ಈ ರೀತಿಯಾಗಿ ಪುರುಷ ಪ್ರಾಬಲ್ಯತೆಯಿಂದ ಕೂಡಿದ ಮೌಲ್ಯಗಳಿಂದ ಮಹಿಳೆಯರಿಗೆ ಹಿಂಸೆಗಳು ಜಾಸ್ತಿಯಾಗುತ್ತಿವೆ. ನೀವು ಏನೇ ಹೇಳಿದರೂ ಮಹಿಳೆಯರನ್ನು ಪುರುಷರ ಸಮ ತರಲಿಕ್ಕೆ ಆಗುವುದಿಲ್ಲ. ಕಾರಣ ಶಾರೀರಿಕ ಮತ್ತು ದೈಹಿಕ ಬೆಳವಣಿಗೆ ಎಂದಾಗ, ಈಗಿನ ಒಂದು ವ್ಯವಸ್ಥೆಯಲ್ಲಿ ಎಷ್ಟೋ ಜನ ಮಹಿಳೆಯರು ಪುರುಷರ ಸಮ ಇದ್ದಾರೆ. ಉದಾಃ ಓಲಂಪಿಕ್ಸ್ ಆಟದಲ್ಲಿ, ಓಟದಲ್ಲಿ, ಇಂದಿರಾಗಾಂಧಿ ರಾಜಕೀಯದಲ್ಲಿ, ಇದಷ್ಟೇ ಯಾಕೆ ಜರ್ಮನಿ ದೇಶದಲ್ಲಿ ಇಡೀ ಜರ್ಮನಿ ದೇಶವನ್ನು ನಡೆಸುತ್ತಿದ್ದುದು ಮಹಿಳೆಯರೇ. ಅಲ್ಲದೇ ಹೆಚ್ಚು ಹೆಚ್ಚು ಕೆಲಸಗಳನ್ನು ಮಹಿಳೆಯರೇ ಮಾಡುತ್ತಾರೆ. ಅದರಲ್ಲಿ ಕೆಲವು ಸಮಸ್ಯೆಗಳನ್ನು ಎದುರಿಸುತ್ತಾಳೆ. ಮನೆಯಲ್ಲಿ ಪ್ರತಿಯೊಂದು ಕೆಲಸ ಅಥವಾ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮನೆಯ ಗಂಡಸರನ್ನು ಯಾಕೆ ಕೇಳುತ್ತಾರೆ ಎಂದು ಪ್ರಶ್ನಿಸಿದರು. ಇದಕ್ಕೆ ಈ ಎಲ್ಲಾ ಕೆಲಸ ಮಾಡುವುದು ಅವಳೇ. ಅದರಲ್ಲಿ ಗಂಡಸರ ಪಾತ್ರ ಬೇಕು ಮತ್ತು ಅವರು ಸೋಮಾರಿಗಳಾಗುತ್ತಾರೆಂಬ ದೃಷ್ಟಿಯಿಂದ ಅವಳು ನಿಮ್ಮನ್ನು ಕೇಳುತ್ತಾಳೆ ಎಂದು ಹೇಳಲಾಯಿತು. ಈಗಿನ ಒಂದು ಪುರಾಣ ಕಥೆಗಳಲ್ಲಿ ಶ್ರೀ ಕೃಷ್ಣನನ್ನು ದೇವರೆಂದು ಆರಾಧ್ಯ ಮಾಡುತ್ತಾರೆ. ದೊಡ್ಡ ದೊಡ್ಡ ಭಗವದ್ಗೀತೆಗಳನ್ನು ಬರೆಯುತ್ತಾರೆ, ಓದುತ್ತಾರೆ. ಆದರೆ ಅವನಿಗೆ ಎಷ್ಟು ಜನ ಹೆಂಡತಿಯರು, ಎಷ್ಟು ಜನ ಮಹಿಳೆಯರಿಗೆ ಹಿಂಸೆ ಕೊಡುತ್ತಾನೆ. ಆದರೂ ನಮ್ಮ ಜನ ಈ ದಿನ ಆತನನ್ನು ದೇವರೆಂದು ಹೇಳುತ್ತಾರೆ. ಇಂತಹ ಪುರಾಣಗಳು ಮತ್ತು ಸಂಪ್ರದಾಯಗಳು ಇದ್ದರೂ ನಮ್ಮ ಕಾನೂನಿಂದ ಏನೂ ಮಾಡಲಾಗುವದಿಲ್ಲ. ಇದರಲ್ಲಿ ನಮ್ಮ ಮನೋಭಾವಗಳು ಬದಲಾವಣೆಯಾಗಬೇಕು.

ಅದರಂತೆ ಈಗಿನ ಒಂದು ಜಾಗತೀಕರಣದಲ್ಲಿ ಹೆಚ್ಚು ಮಹಿಳೆಗೆ ಅನ್ಯಾಯಗಳು ಆಗ್ತಾ ಇವೆ. ಈಗಾಗಲೇ ಡೆಲ್ಲಿಯ ಸಫಾಫೆಟ್ ಎಂಬ ಫ್ಯಾಕ್ಟರಿಯಲ್ಲಿ ಎಷ್ಟೋ ಜನ ಮಹಿಳೆಯರನ್ನು ಕೆಲಸದಿಂದ ತೆಗೆದಿದ್ದಾರೆ. ಅವರಿಗೆ ಅಲ್ಲಿ ಸಾಕಷ್ಟು ಹಿಂಸೆಗಳನ್ನು ಕೊಟ್ಟಿದ್ದಾರೆ ಅಲ್ಲದೇ ರಾತ್ರಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಹೀಗಾಗಿ ಅವಳಿಗೆ ಏನಾದರೂ ಹೆಚ್ಚು ಕಡಿಮೆ ಆದರೆ ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ? ಮತ್ತು ಅಲ್ಲಿ 500 ಜನ ದುಡಿಯುತ್ತಿದ್ದು 30 ಶೌಚಾಲಯಗಳಿದ್ದು ಒಬ್ಬರು ಹೋದರೆ 5 ನಿಮಿಷ ಸಮಯ ಕೊಡುತ್ತಾರೆ. ಅಲ್ಲಿ ಸುಪರ್‌ವೈಜರ್ ಪುರುಷರೇ. ಕೃಷಿ ಕೆಲಸಗಳಲ್ಲೂ ಕೂಡಾ ಮಹಿಳೆಯ ಮೇಲೆ ತುಂಬಾ ಪ್ರಭಾವ ಬೀರುತ್ತಾ ಇದೆ. ಈ ಜಾಗತೀಕರಣದಿಂದ ಮಲೇರಿಯಾ, ಟಿ.ಬಿ. ಯಂತಹ ಕಾಯಿಲೆಗಳು ಬರುತ್ತಾ ಇವೆ.

ಹೆಚ್ಚಾಗಿ ಪ್ರತ್ಯಕ್ಷವಾಗಿ/ ಪರೋಕ್ಷವಾಗಿ ಮಹಿಳೆಗೆ ಒಟ್ಟಾರೆಯಾಗಿ ಜಾಗತೀಕರಣದಿಂದಲೂ ಶೋಷಣೆಯಾ ಗುತ್ತಾ ಇದೆ. ಈ ರೀತಿಯಾಗಿ ಮಹಿಳೆ ಒಂದಲ್ಲಾ ಒಂದು ರೀತಿಯ ಶೋಷಣೆಯನ್ನು ಅನುಭವಿಸುತ್ತಿದ್ದಾಳೆ. ಇದನ್ನು ನಾವು ಹೋಗಲಾಡಿಸಬೇಕಾದರೆ ಇಲ್ಲಿರುವ ಪ್ರತಿಯೊಬ್ಬ ಮಹಿಳೆ/ಪುರುಷರು ಅರ್ಥ ಮಾಡಿಕೊಂಡು ನಡೆಯಬೇಕು. ಈ ಜನಾರೋಗ್ಯ ಆಂದೋಲನದಂತೆ ಈ ವಿಷಯಕ್ಕೂ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನಾಂದೋಲನದ ಮೂಲಕ ಪ್ರತಿಯೊಬ್ಬರಿಗೂ ಮಾಹಿತಿ ತಿಳಿಸುತ್ತಾ ಮನೋಭಾವಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಅಂದಾಗ ಮಾತ್ರ

ಮಹಿಳೆಗೆ ಆಗುವ ಹಿಂಸೆಗಳನ್ನು ಹೊಡೆದೋಡಿಸಲು ಸಾಧ್ಯ ಎಂದು ಗುಂಪಿನ ಒಮ್ಮತದ ತೀರ್ಮಾನವಾಯಿತು.

**ಗುಂಪಿನ ಠರಾವು:**

1. ವಿಧಾನ ಸಭೆಯಲ್ಲಿ ಮಹಿಳೆಯರ ಮೀಸಲಾತಿಗೆ ಒತ್ತಾಯಿಸುವುದು.
1. ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ಎಸಗಿದಂಥವರಿಗೆ ಚುನಾವಣೆಯಲ್ಲಿ ಅವಕಾಶ ನೀಡದಿರುವುದು.
2. ಮಗಳನ್ನು ಕೊಂದ ಜಗಜೀತ್ ಕೌಲ್ ಇವರನ್ನು ಗುರುದ್ವಾ ಪ್ರತಿಬಂಧಕ ಸಮಿತಿಯಿಂದ ವಜಾಗೊಳಿಸುವುದು.
3. ಜೋತಿಷ್ಯ ಶಾಸ್ತ್ರದ ಬಗ್ಗೆ ವಿಶ್ವವಿದ್ಯಾನಿಲಯದಿಂದ ಒಂದು ಅಧ್ಯಯನ ಮಾಡಬೇಕು, ಇದರಿಂದ ಬೀರುವ ಪರಿಣಾಮ ಮಹಿಳೆಯರ ಮೇಲೆ ಶೋಷಣೆಯಾಗುವಂತಿದ್ದರೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇದನ್ನು ವಿರೋಧ ಮಾಡಬೇಕು.
4. ಶಾಲಾ - ಕಾಲೇಜುಗಳ ಪಠ್ಯಪುಸ್ತಕದಲ್ಲಿ ಲಿಂಗ ತಾರತಮ್ಯ ಇಲ್ಲದಂತೆ ನೋಡಿಕೊಳ್ಳುವುದು.
5. ಸರಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಇದ್ದ ಮೀಸಲಾತಿ ಅವರಿಗೇ ಇರಬೇಕು. ಅವರ ಪರವಾಗಿ ಪುರುಷರಿಗೆ ಕೊಡಬಾರದು.

2. **ಸ್ತ್ರೀಬ್ರೂಣ ಹತ್ಯೆ:** ಈ ವಿಷಯದಲ್ಲಿ ವೇಳೆ ಕಡಿಮೆ ಇದ್ದ ಕಾರಣ ಸ್ತ್ರೀ ಬ್ರೂಣ ಹತ್ಯೆ ಹೆಚ್ಚು ಆಗ್ತಾ ಇದೆ. ಹೀಗಾಗಿ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಾ ಇದೆ. ಚಳುವಳಿಗಳಲ್ಲಿ ಭಾಗವಹಿಸಲು ಮಹಿಳೆಯರ ದಂಡು ಕಡಿಮೆಯಾಗುತ್ತಾ ಇದೆ. ಇದಕ್ಕೆಲ್ಲಾ ಕಾರಣ ಈಗಿನ ಸಮಾಜ, ಆಸ್ಪತ್ರೆಗಳು, ಸ್ಕ್ಯಾನಿಂಗ್ ಮಷೀನ್‌ಗಳು ಎಂದು ಗುಂಪಿನಲ್ಲಿ ಒಟ್ಟಾರೆಯಾಗಿ ಚರ್ಚೆಯಾಯಿತು.

ಈ ರೀತಿಯಾಗಿ ಸ್ಕ್ಯಾನಿಂಗ್ ಮಷೀನ್‌ಗಳನ್ನು ತೆಗೆದುಬಿಡಬೇಕು. ಇದರಿಂದಲೇ ಹೀಗೆ ಆಗ್ತಾ ಇದೆ ಎಂದು ಗುಂಪಿನಿಂದ ಬಂದ ಅಭಿಪ್ರಾಯವಾಗಿತ್ತು. ಸ್ಕ್ಯಾನಿಂಗ್ ಇರೋದು ಮಗು ಒಳಗಡೆ ಆರೋಗ್ಯವಾಗಿ ಇದೆಯೋ, ಇಲ್ಲವೋ ಅಂತ ತಿಳಿಯುವುದಕ್ಕೆ ಹೊರತು ಅದು ಲಿಂಗ ನಿರ್ಧಾರ ಮಾಡುವುದಕ್ಕಾಗಿ ಅಲ್ಲ ಎಂದು ಡಾಕ್ಟರರೇ ಹೇಳುತ್ತಾರಲ್ಲ ಎಂದು ಪ್ರಶ್ನಿಸಿದರು. ಡಾಕ್ಟರ್ ಹೇಳುವುದು ಒಂದು ರೀತಿಯಿಂದ ನಿಜವೇ. ಯಾಕೆಂದರೆ ಅವರ ಒಂದು ಕಾರ್ಯದಕ್ಷತೆ ಹಾಗೂ ಅಲ್ಲಿಗೆ ಹೋಗಿರುವ ಪಾಲಕರ ಅಭಿಪ್ರಾಯ, ಒತ್ತಾಯಗಳಿಗೆ ಅವರು ಹೇಳುತ್ತಾರೆ ಎಂದು ಗುಂಪಿನಿಂದ ಪ್ರತಿಕ್ರಿಯೆ ಬಂದಿತು.

ಇದಕ್ಕೆ ಪೂರಕವಾಗಿ ಗುಂಪಿನಿಂದ ಹಾಗಾದರೆ ಎಷ್ಟೋ ಜನ ಮಹಿಳೆಯರೇ ಗಂಡು ಮಗು ಬೇಕೆಂದು ಬಹಳ ಮಕ್ಕಳನ್ನು ಹೆರುತ್ತಾರೆ. ಒಂದು ವೇಳೆ ಗಂಡು ಮಗು ಆಗದಿದ್ದರೆ ಅವಳು ನಿರಾಸಕ್ತಳಾಗುತ್ತಾಳೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹೀಗೆ ಉತ್ತರಿಸಲಾಯಿತು. ಮುಖ್ಯವಾಗಿ ಈ ಲಿಂಗ ನಿರ್ಧಾರ ಶಕ್ತಿ ಯಾರ ಕೈಯಲ್ಲಿದೆ ಎಂಬುದು ಎಷ್ಟೋ ಜನ ಪುರುಷರಿಗೆ ಗೊತ್ತಿಲ್ಲ. XX ಕ್ರೋಮೋಸೋಮು ಅಂದರೆ ಹೆಣ್ಣು, XY ಕ್ರೋಮೋಸೋಮು ಅಂದರೆ ಗಂಡು. XY ಕ್ರೋಮೋಸೋಮು ಪುರುಷರ ಹತ್ತಿರವಿರುವುದರಿಂದ ಹೆಣ್ಣು ಮತ್ತು ಗಂಡು ಮಗು ಹುಟ್ಟಲು ಕಾರಣ ಪುರುಷರೇ. ಇದನ್ನು ಮೊದಲು ತಿಳಿದು ನಂತರ ಅವರವರ ಕುಟುಂಬದಲ್ಲಿ ಮಹಿಳೆಯರಿಗೆ ತಿಳಿಸಿ ಹೇಳಿದರೆ ಈ ಸ್ತ್ರೀ ಬ್ರೂಣ ಹತ್ಯೆ, ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟಲು ಸಾಧ್ಯ ಎಂದು ತಿಳಿಸಿದಾಗ, ಗುಂಪಿನಲ್ಲಿ ಇದರ ಬಗ್ಗೆ ಮೊದಲು ತಿಳುವಳಿಕೆ ಪುರುಷರಿಗೆ ನೀಡಬೇಕೆಂದು ಒಮ್ಮತದ ತೀರ್ಮಾನವಾಯಿತು.

ಈ ಕೆಳಗಿನ ಗುಂಪು ಚರ್ಚೆಯಲ್ಲಿ ಡಾ. ಸಿ.ಆರ್. ಚಂದ್ರಶೇಖರ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

**IV. ಸಮುದಾಯ ಮಾನಸಿಕ ರೋಗ ಮತ್ತು ಅಂಗವಿಕಲತೆಯ ಬಗ್ಗೆ:**

- ಮಾನಸಿಕ ಕಾಯಿಲೆಯನ್ನು ದೈಹಿಕ ಕಾಯಿಲೆಯಲ್ಲಿ ವ್ಯಕ್ತಪಡಿಸುತ್ತಾರೆ.
- ಮಾನಸಿಕ ಕಾಯಿಲೆಯಿಂದ ಹುಚ್ಚರಾಗುತ್ತಾರೆ. ಇದು ವಾಸ್ತವಿಕ ಸ್ಥಿತಿ. ಇಂಥವರನ್ನು ಆಸ್ಪತ್ರೆಗೆ ಸೇರಿಸಿದರು ಮರಳಿ ಕರೆದುಕೊಂಡು ಹೋಗುವುದಿಲ್ಲ.
- ಮಾನಸಿಕ ಕಾಯಿಲೆ ಮನುಷ್ಯನ ಸಾಮರ್ಥ್ಯ ಕುಗ್ಗಿಸುತ್ತದೆ.
- ಅಲ್ಕೋಹಾಲ್ ಅತಿಯಾದ ಸೇವನೆಯಿಂದ ಮಾನಸಿಕ ಕಾಯಿಲೆ ಹೆಚ್ಚಾಗುತ್ತದೆ.
- ಕುಟುಂಬದಲ್ಲಿ ಪ್ರೀತಿ-ವಿಶ್ವಾಸ ಇಲ್ಲದಾಗ ಈ ರೋಗ ಹೆಚ್ಚಾಗುತ್ತದೆ.
- ಮಾನಸಿಕ ಭ್ರಮೆಯಿಂದ ದೆವ್ವ ಭೂತ ಅಂತ ಹೇಳಿ ಅವರಿಗೆ ಹಿಂಸೆ ಕೊಡುತ್ತಾರೆ. ಅದಕ್ಕಿಂತ ಅವರ ಮನಸ್ಸಿನಲ್ಲಿ ಏನಿದೆ ಎಂದು ಅರ್ಥಮಾಡಿಕೊಂಡು ಸರಿಯಾದ ಔಷಧೋಪಚಾರ ಮಾಡಬೇಕು.
- ಮಾನಸಿಕ ಕಾಯಿಲೆ 100 ಕ್ಕೆ 3 ಭಾಗದಷ್ಟು ಮಾತ್ರ ಅನುವಂಶೀಯತೆಯಿಂದ ಬರಬಹುದು.
- ಆಹಾರದಲ್ಲಿ ವಿಟ್ಯಾಮಿನ್ ಕೊರತೆಯಿಂದ ಈ ರೋಗ ಬರುತ್ತದೆ.
- ಗರ್ಭಿಣಿ ಅಥವಾ ಹೆರಿಗೆಯಾದ ಮಹಿಳೆಯನ್ನು ಪ್ರೀತಿ - ವಿಶ್ವಾಸದಿಂದ ಕಾಣಬೇಕು. ಅದಲ್ಲದೇ ಮನೆಯವರ ಒತ್ತಡ, ಹೆಣ್ಣು ಮಗು ಬೇಡ ಎಂದು ಯಾವುದೇ ರೀತಿಯ ಮಾನಸಿಕ ಹಿಂಸೆಯಿಂದ ಅವಳು ಹುಚ್ಚಳಾಗುತ್ತಾಳೆ.

<u>ಅಂಗವಿಕಲರು:</u> ಅಂಗವಿಕಲತೆಯಲ್ಲಿ 6 ಪ್ರಕಾರಗಳಿವೆ.

1. ಚಲನವಲನದ ಅಂಗವಿಕಲತೆ.
2. ಕಿವಿ ಕೇಳದೇ ಇರುವುದು.
3. ಮಾತಿನ ತೊಂದರೆ.
4. ಬುದ್ಧಿಮಾಂದ್ಯತೆ.
5. ದೃಷ್ಟಿದೋಷ.
6. ಮಾನಸಿಕ ತೊಂದರೆಯಿಂದ ಅಂಗವಿಕಲತೆ.

- ಒಬ್ಬ ವ್ಯಕ್ತಿಗೆ ದೈಹಿಕವಾಗಿ ಎರಡು ರೀತಿಯ ದೋಷಗಳಿದ್ದರೆ ಅದು ಅಂಗವಿಕಲತೆ ಎನ್ನುತ್ತಾರೆ.
- ನಮ್ಮ ಭಾರತ ಜನಸಂಖ್ಯೆಯು 100 ಕೋಟಿ ಜನರಲ್ಲಿ 25 ಲಕ್ಷ ಜನ ಅಂಗವಿಕಲರಿದ್ದಾರೆ.
- ನಮಗೂ, ಅಂಗವಿಕಲರಿಗೂ ಇರುವ ವ್ಯತ್ಯಾಸವೇನು?
- ನಮಗೆ ಇರುವ ಅನೇಕ ಸಮಸ್ಯೆಯಂತೆ ಅದೂ ಒಂದು. ಅವರಿಗೆ ಸಮಸ್ಯೆ ಎಂಬುದು ಅವರಿಗೆ ತಿಳಿಸಿ ಹೇಳಬೇಕು.
- ಅಂಗವಿಕಲತೆಗೆ ಕಾರಣ: ರಕ್ತ ಸಂಬಂಧದಲ್ಲಿ ಮದುವೆಯಾದರೆ, ಗರ್ಭಧರಿಸಿ 3 ತಿಂಗಳಲ್ಲಿ ಸರಿಯಾದ ಚಿಕಿತ್ಸೆ ಪಡೆಯದೇ ಇದ್ದರೆ, ಗರ್ಭಿಣಿಯು ಸರಿಯಾದ ಪೌಷ್ಠಿಕ ಆಹಾರ ಸೇವಿಸದಿದ್ದರೆ ಅಂಗವಿಕಲತೆ ಬರುವ ಸಾಧ್ಯತೆ ಇರುತ್ತದೆ.
- ಅಂಗವಿಕಲರಿಗೆ 1995 ರಲ್ಲಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಜಾರಿಯಲ್ಲಿತು. ಅವರಲ್ಲಿ ಆತ್ಮವಿಶ್ವಾಸ ಬೆಳೆಸುವ ಕಾರ್ಯಕ್ರಮಗಳನ್ನು ಮಾಡಬೇಕು.
- ಅವರಲ್ಲಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ಕೊಡಬೇಕು.
- ಅಂಗವಿಕಲರ ಅಧಿನಿಯಮ ಎಂಬುವದು ಜನರಿಗೆ ಗೊತ್ತಾಗುವಂತೆ ತಿಳಿಸಬೇಕು.
- ಜಿಲ್ಲಾ ಮಟ್ಟದಲ್ಲಿ ಪುನರ್ವಸತಿ ಕಾರ್ಯಕ್ರಮ ಮಾಡಬೇಕು.

**ಮಾನಸಿಕ ರೋಗ ತಡೆಗಟ್ಟಲು ಶಿಫಾರಸ್ಸು:**

1. ಪ್ರತಿ ಜಿಲ್ಲೆಯಲ್ಲಿ ಮನೋತಜ್ಞರು ಇರುವಂತಾಗಬೇಕು.
2. ಎಲ್ಲಾ ಡಾಕ್ಟರುಗಳಿಗೆ ಮತ್ತು ಎ.ಎನ್.ಎಂ. ಗಳಿಗೆ ಈ ವಿಷಯದ ಬಗ್ಗೆ ತರಬೇತಿಯಾಗಬೇಕು.
3. ಶಾಲೆ ಮತ್ತು ಕಾಲೇಜುಗಳಲ್ಲಿ ಮನೋತಜ್ಞರು ಇರುವಂತೆ ನೋಡಿಕೊಳ್ಳಬೇಕು
4. ಮಹಿಳೆಯರ ಕಷ್ಟ-ಸುಖ ಹೇಳಿಕೊಳ್ಳುವ ಸಂಸ್ಥೆ ಸ್ಥಾಪನೆಯಾಗಬೇಕು. (ಸರಕಾರ/ಖಾಸಗಿ)
5. ಸಾಮಾಜಿಕ ಒತ್ತಡ ತಡೆಗಟ್ಟುವ ಚಟುವಟಿಕೆಗಳಾಗಬೇಕು.
6. ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಕುಡಿತ, ಹಿಂಸೆಗಳನ್ನು ಕಡಿಮೆಗೊಳಿಸುವುದು ಜೊತೆಗೆ ಜನರಲ್ಲಿ ಅರಿವು ಮೂಡಿಸುವುದು.
7. ಮಾನಸಿಕ ರೋಗ ದೈಹಿಕ ರೋಗದಷ್ಟು ಸಾಮಾನ್ಯವಲ್ಲವೆಂಬ ಅರಿವು ನೀಡಿ, ಸಾಮಾಜಿಕ ಕಳಂಕ ನಿರ್ಮೂಲನೆಯಾಗಬೇಕು.
8. ಸಾಮಾಜಿಕ ಸಂಬಂಧ ಸುಧಾರಣೆಗಳ ಆಚರಣೆ, ಅವಕಾಶ ಸಮುದಾಯದಲ್ಲಿ ಹೆಚ್ಚಿಸಿ ಪ್ರೋತ್ಸಾಹಿಸುವುದು.
9. ಪುನರ್ವಸತಿ ಸೌಲಭ್ಯ ಸಾಮರ್ಥ್ಯ ಹೆಚ್ಚಿಸಿ ಮತ್ತೆ ನಿರಂತರಾಗಿಸುವುದು.
10. ಶುದ್ಧವಾದ ನೀರು ಸರಕಾರ ಒದಗಿಸುವುದು.
11. ಗಿಡಮರಗಳನ್ನು ಬೆಳೆಸುವುದು.
12. ಶುದ್ಧ ನೀರನ್ನು ಕುಡಿಯುವಂತೆ ಜಾಗೃತಿಯನ್ನು ಜನರಲ್ಲಿ ಮೂಡಿಸಬೇಕು.
13. ಪಂಚಾಯತ್ ವ್ಯವಸ್ಥೆಯ ಸೌಲಭ್ಯಗಳ ಬಗ್ಗೆ ಜನರಿಗೆ ತಿಳಿಸಬೇಕು, ಸಭೆ, ಕಾರ್ಯಾಗಾರ ನಡೆಸಬೇಕು.
14. ಜನರ ಆರೋಗ್ಯ ಸುಧಾರಿಸಲು ಒಂದು ಕ್ಯಾಲರಿ ಆಹಾರ ಸಿಗುವಂತಾಗಬೇಕು. ಉದಾ: ವಸತಿ ಸೌಕರ್ಯ, ಅಂಗನವಾಡಿ ಕಾರ್ಯಕರ್ತರು, ಬಡಮಕ್ಕಳು, ಗರ್ಭಿಣಿಯರ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು, ನ್ಯಾಯಬೆಲೆ ಅಂಗಡಿ ಇತರೆ.

V. **ಪರಿಸರ, ನೀರು ಆರೋಗ್ಯ ಹಾಗೂ ಜಾಗತೀಕರಣ:** ಮಾನವನು ಜೀವಿಸಲು ಆಹಾರದಷ್ಟೇ ಮುಖ್ಯ ನೀರು. ನೀರಿನ ಮಲಿನತೆಯಿಂದಾಗಿ ಇಂದು ಅದು ಜನರ ಆರೋಗ್ಯ ಹಾಗೂ ಪರಿಸರದ ಮೇಲೆ ಹೇಗೆ ಪ್ರಭಾವ ಬೀರಿದೆ, ಅದನ್ನು ಉತ್ತಮಗೊಳಿಸಲು ಏನು ಮಾಡಬಹುದೆಂದು ಗುಂಪಿನಲ್ಲಿ ಚರ್ಚಿಸಲಾಯಿತು. ಶ್ರೀ ಎ. ಸುರೇಶ ಅವರ ನೇತೃತ್ವದಲ್ಲಿ 15 ಜನರ ಗುಂಪು ಚರ್ಚೆಯಲ್ಲಿ ಬಂದ ಅಂಶಗಳು ಈ ರೀತಿ ಇವೆ.

- ಬಳ್ಳಾರಿ ಜಿಲ್ಲೆಯಲ್ಲಿ ನೀರಿನಲ್ಲಿ ಫ್ಲೋರೋಸಿಸ್ ಅಂಶ ಹೆಚ್ಚಾಗಿ ಕೀಲು ನೋವು ಹೆಚ್ಚಾಗಿ ಕಂಡು ಬರುತ್ತಿದೆ.
- ಬಿಸಿಲು ಹೆಚ್ಚಾಗಿರುವುದರಿಂದ ಕುಷ್ಟ ಹಾಗೂ ಚರ್ಮರೋಗಗಳು ಕಾಣಿಸಿಕೊಳ್ಳುತ್ತಿವೆ.
- ಭತ್ತ ಹಾಗೂ ಹತ್ತಿಯನ್ನು ಹೆಚ್ಚಾಗಿ ಬೆಳೆದು ಕೀಟನಾಶಕಗಳನ್ನು ಹೆಚ್ಚಾಗಿ ಬಳಸುತ್ತಿರುವುದರಿಂದ ಅಕ್ಕಿಯ ಮಾರಾಟ ಕಡಿಮೆ ಆಗಿದೆ. ಬೆಳೆದ ಅಕ್ಕಿ ಕಳಿಸಿದ್ದು ವಾಪಸ್ ಬರುತ್ತಿದೆ.
- ಕೀಟನಾಶಕಗಳ ಬಳಕೆಯಿಂದ ಹಾವು ಹೆಚ್ಚಾಗಿ ಸಾವು ಹೆಚ್ಚಾಗಿದೆ.
- ಮೆದುಳು ಜ್ವರ ಉಲ್ಬಣಿಸುತ್ತಿದೆ.
- ಕೊಪ್ಪಳ - ಸೊಳ್ಳೆಗಳು ಜಾಸ್ತಿ ಇರುವುದರಿಂದ ಅನೇಕ ಕಾಯಿಲೆಗಳು ಬರುತ್ತಿವೆ. ಹರ್ನಿಯಾ ಹೆಚ್ಚಾಗಿದೆ.
- ಬಿಜಾಪುರ - 5 ನದಿಗಳಿದ್ದರೂ ನೀರಿನ ಕೊರತೆ. ನೀರಿನಿಂದ ಹಲವಾರು ರೋಗಗಳು ಬರುತ್ತಿವೆ. ಆಲಮಟ್ಟಿ ಆಣೆಕಟ್ಟಿನಿಂದಾಗಿ 800 ಕುಟುಂಬಗಳು ಅಂದರೆ 4 ಲಕ್ಷ ಜನರಿಗೆ ವಸತಿ ಸಮಸ್ಯೆ, ಉದ್ಯೋಗ ಸಮಸ್ಯೆ, ಸಾಮಾಜಿಕ ಪರಿಸರ ಹಾಳಾಗಿದೆ.

- ಮಂಡ್ಯ - 100 ಕ್ಕೆ 75 ಭಾಗ ಮಲೇರಿಯಾ ರೋಗ. ಪ್ರೇಕ್ಷಣೀಯ ಸ್ಥಳಗಳಿಗೆ ಯಾತ್ರಿಕರು ಬಂದು ಹೋಗುತ್ತಿರುವುದರಿಂದ ಗಲೀಜಾಗಿ ಪರಿಸರ ಹಾಳಾಗುತ್ತಿದೆ.
- ಶಿವಮೊಗ್ಗ - ಪೇಪರ್ ಕಾರ್ಖಾನೆಯಿಂದಾಗಿ ನೀರು ವಿಷಪೂರಿತವಾಗಿದೆ. ಕುಡಿಯಲು ಯೋಗ್ಯವಲ್ಲದಿದ್ದರೂ ಅದನ್ನೇ ಜನರು ಕುಡಿಯುತ್ತಾರೆ. ಮೀನುಗಳು ನೀರಲ್ಲಿ ವಾಸಿಸುತ್ತಿಲ್ಲ.
- ಕೋಲಾರ - ನೀರಿನಲ್ಲಿ ಫ್ಲೋರೈಡ ಅಂಶದಿಂದ ಹಲ್ಲಿನ ಮೇಲೆ ಸ್ಕೇಲ್ಸ್ ಉಂಟಾಗುತ್ತಿದೆ.
- ತುಮಕೂರು - ಬೋರ್‌ವೆಲ್ ನೀರು ಬಹಳ ಗಲೀಜಾಗಿ ಕಾಯಿಲೆಗಳು ಬರುತ್ತಿವೆ. ರಾಸಾಯನಿಕವನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ನೀರು ಮಲಿನವಾಗುವ ಜೊತೆಗೆ ಪರಿಸರ ಸಮತೋಲನೆ ಹಾಳಾಗುತ್ತಿದೆ. ಕಪ್ಪೆಗಳು ಕಡಿಮೆಯಾಗಿ ಹಾವುಗಳು ಹೆಚ್ಚಾಗುತ್ತಿವೆ.
- ಬೆಳಗಾವಿ - ಹಂದಿಗಳು ಹೆಚ್ಚಾಗಿ ಬೇರೆ ಬೇರೆ ರೋಗಗಳು. ಜೊತೆಗೆ ಕಾಲರಾ, ಮಲೇರಿಯಾ, ಕಾಮಾಲೆ, ಫೈಲೇರಿಯಾ ಇತ್ಯಾದಿ.
- ರಾಯಚೂರು - ಸೊಳ್ಳೆಗಳು ಹೆಚ್ಚಾಗಿರುವುದರಿಂದ ಕಾಲರಾ, ಮಲೇರಿಯಾ ಹರಡುತ್ತಿದೆ. ಭತ್ತದ ಮಿಲ್‌ಗಳು ಜಾಸ್ತಿ ಇರುವುದರಿಂದ ಅಸ್ತಮಾ, ಕಲ್ಮಶ ಪೂರಿತ ಕಫ, ನೀರಿನಲ್ಲಿ ಫ್ಲೋರೈಡ್ ಅಂಶದಿಂದ ಫ್ಲೋರೋಸಿಸ್, ಕುಳ್ಳತನ, ಗೂನುಬೆನ್ನಿನ ಸಮಸ್ಯೆ. ಕಾಡಿನ ನಾಶ - ಕನಿಷ್ಟ ಶೇ. 30 ರಷ್ಟು ಇರಬೇಕಾದ ಕಾಡಿನ ಪ್ರದೇಶ ಶೇ. 1 ರಷ್ಟಿದೆ. ನೀರಿನ ಸಂಪನ್ಮೂಲ ಸಾಕಷ್ಟಿದ್ದರೂ ಸದ್ಬಳಕೆ ಇಲ್ಲ.

ಇವಕ್ಕೆಲ್ಲ ಪರಿಹಾರ ಮುಖ್ಯವಾಗಿ ಜನರಲ್ಲಿ ಅಂತರ್ಜಲದ ಬಳಕೆ, ಕಾಪಾಡುವಿಕೆಯ ಬಗ್ಗೆ ಹೆಚ್ಚಿನ ಅರಿವು, ಕಸ, ತಿಪ್ಪೆಯ ಸಮರ್ಪಕ ನಿರ್ವಹಣೆ, ಪರಿಸರ ಸ್ವಚ್ಛತೆಯ ಬಗ್ಗೆ ಅರಿವಿನ ಅವಶ್ಯಕತೆ ಇದೆ ಎಂದು ಕಂಡು ಬಂತು.

ಈ ರೀತಿಯಾಗಿ 8 ಗುಂಪುಗಳಲ್ಲಿ ಚರ್ಚೆಯಾಗಿದ್ದನ್ನು ಪ್ರತಿಯೊಬ್ಬರೂ ಹಂಚಿಕೊಂಡು ಒಟ್ಟಾರೆ ಜನರ ಆರೋಗ್ಯದ ಬಗ್ಗೆ ಎಲ್ಲ ಜನರು ಜಾಗೃತರಾಗುವುದು ಒಳಿತು ಎಂದು ಕ್ರೋಢೀಕರಣಗೊಳಿಸಿದರು. ಜೊತೆಗೆ ಸರಕಾರದಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಸಜ್ಜಾಗಬೇಕೆಂದು ಸಲಹೆ ನೀಡಿದರು. ನಂತರ 4 ಜಿಲ್ಲೆಗಳಿಂದ ಕಲಾಜಾಥಾದಲ್ಲಿ ಬಂದಿರುವ ಸಮಸ್ಯೆ ಹಾಗೂ ಸಂವಾದದ ಬಗ್ಗೆ ಸಂಪೂರ್ಣವಾಗಿ ಹಂಚಿಕೊಳ್ಳಲು ತಿಳಿಸಿದರು. ಅದರಲ್ಲಿ

1. ಕೊಪ್ಪಳ - ಕೇವಲ ಒಂದು ಹಳ್ಳಿಯವರು ಮಾತ್ರ ಸಂಪೂರ್ಣವಾಗಿ ಹಂಚಿಕೊಂಡರು.
2. ಕೋಲಾರ. 3. ಬಿಜಾಪುರ 4. ಮಂಡ್ಯ 5. ದಾವಣಗೆರೆ 6. ಬೀದರ್ 7. ರಾಯಚೂರು ಹಂಚಿಕೊಂಡರು.

<u>ರಾಯಚೂರು ಜಿಲ್ಲೆ: ಸಂವಾದ ಮತ್ತು ಕಲಾಜಾಥಾದ ಸಂಪೂರ್ಣವಾದ ಮಾಹಿತಿ:</u> ರಾಯಚೂರು ಜಿಲ್ಲೆಯಲ್ಲಿ ಮೊದಲು ಜಿಲ್ಲಾ ಸಭೆ, ಕಾರ್ಯಾಗಾರ, ಕಲಾಜಾಥಾ ತರಬೇತಿ, ಸ್ವಾಗತ ಸಮಿತಿ ರಚನೆ, ಕಲಾಜಾಥಾ ಜವಾಬ್ದಾರಿ ಉದಾ: ತಂಡದ ತಯಾರಿ, ಊಟದ ವ್ಯವಸ್ಥೆ, ವಾಹನ ವ್ಯವಸ್ಥೆ, ಸ್ವಾಗತ ಸಮಿತಿ, ಗ್ರಾಮದಲ್ಲಿ ಸಂವಾದ, ವರದಿ ತಯಾರಿಸಿದ್ದು, ಜಿಲ್ಲಾ ಸಮಾವೇಶದ ತಯಾರಿ ಈ ರೀತಿಯಾಗಿ ದಿನಾಂಕ: 10-11-2000 ರಿಂದ 20-11-2000 ವರೆಗೆ ರಾಯಚೂರು, ದೇವದುರ್ಗ, ಮಾನ್ವಿ 3 ತಾಲೂಕುಗಳಲ್ಲಿ 11 ದಿನಗಳವರೆಗೆ ಸುಮಾರು 31 ಹಳ್ಳಿಗಳಲ್ಲಿ ಎನ್.ವೈ.ಕೆ., ಮಹಿಳಾ ಸಮಖ್ಯಾ ಕರ್ನಾಟಕ, ಬಿಜಿವಿಎಸ್, ಗ್ರಾಮ ಪಂಚಾಯ್ತಿ, ಮಹಿಳಾ ಸಂಘಗಳು, ಸಮೂಹ, ಸಾಕ್ಷರತಾ ಸಂಗ್ರಾಮ ಸಮಿತಿ ಮೊದಲಾದ ಸಂಸ್ಥೆಗಳು ಕೂಡಿಕೊಂಡು ಜನಾರೋಗ್ಯ ಕಲಾಜಾಥಾ, ಶ್ರಮದಾನ ಸಂವಾದಗಳ ಮೂಲಕ ಜಾಥಾವನ್ನು ಮುಕ್ತಾಯಗೊಳಿಸಲಾಯಿತು.

**ಸಂವಾದದಿಂದ 31 ಹಳ್ಳಿಯಿಂದ ಜಾಥಾದಲ್ಲಿ ಕ್ರೋಢೀಕೃತ ಮಾಹಿತಿ**

1. **ಯೋಜನಾ ಪ್ರದೇಶದ ಮೂಲ ಮಾಹಿತಿ:**
   ಒಟ್ಟು ಹಳ್ಳಿಗಳು - 31.
   ಭೌಗೋಳಿಕ ಅಂಶ - 3 ಸಾವಿರ ಎಕರೆ.
   ಜನಸಂಖ್ಯೆ - 60 ಸಾವಿರ.
   ಜಾತಿ ಜನಾಂಗ - ಲಿಂಗಾಯತ, ಕುರುಬರು, ನಾಯಕರು, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ
   ವರ್ಗ, ಲಂಬಾಣಿ, ಉಪ್ಪಾರರು, ಕಬ್ಬೇರು, ಕ್ರಿಸ್ತರು, ತೆಲುಗರು, ವಡ್ಡರು, ಮುಸ್ಲಿಂ ಹಲವಾರು ಜಾತಿಯವರು.
2. **ರಾಜಕೀಯ ಹಿನ್ನೆಲೆ:** ಕೆಲವು ಕಡೆ ಊರ ಗೌಡರು, ಮುಖಂಡರು, ಗ್ರಾಮ ಪಂಚಾಯ್ತಿ ಹೊರತುಪಡಿಸಿ ಬೇರೆ ರಾಜಕೀಯ ಸಂಸ್ಥೆಗಳು ಇಲ್ಲ.
3. **ಲಭ್ಯವಿರುವ ಮೂಲ ಸೌಲಭ್ಯಗಳು:** ಕೆರೆ, ಬಾವಿ, ನಳ, ಬೋರ್‌ವೆಲ್, ಹೊಂಡ, ಹೊರಿತಿ ನೀರು
4. **ನೀರಿನ ಲಭ್ಯತೆ:** 31 ಹಳ್ಳಿಯ 5-6 ಹಳ್ಳಿಗಳಲ್ಲಿ 1 ಕಿ.ಮೀ. ದೂರ ಹೋಗಿ ಕುಡಿಯುವ ನೀರು ತರಬೇಕು. ಸಿಹಿ ನೀರಿನ ಅನುಕೂಲ ಇಲ್ಲವೇ ಇಲ್ಲ.
5. **ನೈರ್ಮಲ್ಯ:** ಈ 31 ಹಳ್ಳಿಯಲ್ಲಿ ಸ್ವಚ್ಚತೆಯ ಬಗ್ಗೆ ಜಾಗೃತ ಮೂಡಿರುವುದರಿಂದ ಶೇ. 70 ರಷ್ಟು ಬೋರ್‌ವೆಲ್ ಸುತ್ತಮುತ್ತ ಸ್ವಚ್ಚತೆಯಿದೆ. ಇನ್ನುಳಿದ ಶೇ. 30 ರಷ್ಟು ಕಡೆಗೆ ಅರಿವು ಮೂಡಿಸಬೇಕಾಗಿದೆ. 22 ಹಳ್ಳಿಗಳಲ್ಲಿ ಶ್ರಮದಾನದ ಮೂಲಕ ಸ್ವಚ್ಚತೆಯನ್ನು ಮಾಡಿದೆ. ಜೊತೆಗೆ ಜನರಿಗೆ ಅರಿವು ಮೂಡಿಸಲಾಗಿದೆ.
6. **ರಸ್ತೆಗಳ ಪರಿಸ್ಥಿತಿ:** 31 ಹಳ್ಳಿಯಲ್ಲಿ ಶೇ. 60 ಕ್ಕೆ ಸರಿಯಾದ ರಸ್ತೆ ವ್ಯವಸ್ಥೆಯಿಲ್ಲ. ಜೊತೆಗೆ ಬಸ್ಸಿನ ವ್ಯವಸ್ಥೆಯೂ ಇಲ್ಲ.
7. **ಇಂಗು ಬಚ್ಚಲು:** 2 ಹಳ್ಳಿಯಲ್ಲಿ ಮಾತ್ರ 3-4 ಜನರ ಮನೆಯಲ್ಲಿ ಬಚ್ಚಲು ಗುಂಡಿಗಳಿವೆ. ಇಂಗು ಬಚ್ಚಲು ಬಗ್ಗೆ ಪರಿಕಲ್ಪನೆ ಮೂಡಿಸಬೇಕಾಗಿದೆ.
8. **ಗ್ರಾಮದಲ್ಲಿ ಮಲ ವಿಸರ್ಜನೆ ಮಾಡುವ ಸ್ಥಳಗಳು:** 31 ಹಳ್ಳಿಗಳ ಪೈಕಿ 2 ಹಳ್ಳಿಗಳಲ್ಲಿ ಕಾಲುವೆಯ ಅಕ್ಕಪಕ್ಕದಲ್ಲಿ ಶೌಚಾಲಯಕ್ಕೆ ಹೋಗುವ ರೂಢಿಯಿದೆ. ಉಳಿದ 29 ಹಳ್ಳಿಯಲ್ಲಿ ಬಸ್ಸಿನ ರಸ್ತೆ, ತಿಪ್ಪೆ ಮತ್ತು ಹೊಲಗಳಲ್ಲಿ ಶೌಚಾಲಕ್ಕೆ ಹೋಗುವ ಅಭ್ಯಾಸವಿದೆ.. ಈ ಎಲ್ಲ ಹಳ್ಳಿಗಳಲ್ಲಿ ಯಾರಿಗೂ ವೈಯಕ್ತಿಕ ಶೌಚಾಲಯವಿಲ್ಲ. 10 ಹಳ್ಳಿಗಳಲ್ಲಿ ಮಾತ್ರ ಸಾಮೂಹಿಕ ಶೌಚಾಲಯ ಇದೆ. ಇದ್ದರೂ ಸ್ವಚ್ಚತೆ ಮತ್ತು ಉಪಯೋಗದ ಜಾಗೃತಿ ಇಲ್ಲದ್ದರಿಂದ ಜನರು ಅದನ್ನೂ ಉಪಯೋಗಿಸಲ್ಲ.
9. **ವಸತಿ:** ಶೇ. 35 ರಷ್ಟು ಮಾಳಿಗೆ ಮನೆಗಳು ಶೇ. 5 ರಷ್ಟು ಸಿಮೆಂಟ್ ಮನೆಗಳು, ಹಂಚಿನ ಮನೆಗಳು ಇಲ್ಲವೇ ಇಲ್ಲ. ಶೆ. 60 ರಷ್ಟು ಗುಡಿಸಲುಗಳಿವೆ.
10. **ವಿದ್ಯುಚ್ಛಕ್ತಿ:** ಶೇ. 70 ರಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವಿದೆ. ಇನ್ನು ಶೇ. 30 ರಷ್ಟು ವಿದ್ಯುಚ್ಛಕ್ತಿ ಸೌಲಭ್ಯ ಇಲ್ಲವೇ ಇಲ್ಲ.
11. **ಬೀದಿ ದೀಪ:** ಹೆಚ್ಚಿನ ಹಳ್ಳಿಗಳಲ್ಲಿ ಬೀದಿದೀಪ ಇಲ್ಲವೇ ಇಲ್ಲ. ಶೇ 20 ರಷ್ಟು ಮಾತ್ರ ಬೀದಿದೀಪದ ವ್ಯವಸ್ಥೆ ಇದೆ.
12. **ನ್ಯಾಯಬೆಲೆ ಅಂಗಡಿ:** 31 ಹಳ್ಳಿಯಲ್ಲಿ ಕೇವಲ 14 ಹಳ್ಳಿಗಳಲ್ಲಿ ಮಾತ್ರ ನ್ಯಾಯಬೆಲೆ ಅಂಗಡಿಗಳಿವೆ. ಇದ್ದ ಅಂಗಡಿಗಳು ಗೌಡರ ಹಿಡಿತದಲ್ಲಿವೆ. ಅವರು ಕೊಟ್ಟಾಗ, ಕೊಟ್ಟಷ್ಟು ತೆಗೆದುಕೊಂಡು ಬರಬೇಕು. 3 ಹಳ್ಳಿ ಸೇರಿ ಒಂದು ನ್ಯಾಯಬೆಲೆ ಅಂಗಡಿ ಇದೆ. ಇಷ್ಟು ನ್ಯಾಯಬೆಲೆ ಅಂಗಡಿಗಳಲ್ಲಿ ಒಂದು ಅಂಗಡಿ ಸಹಿತ ಮಹಿಳೆ ಹೆಸರಿಗೆ ಪರವಾನಿಗೆ ಇಲ್ಲ. ಜೊತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗಂತೂ ಇಲ್ಲವೇ ಇಲ್ಲ.
13. **ವೃತ್ತಿ ಮತ್ತು ಕಸುಬು:** ಕೃಷಿ ಕೂಲಿ, ಬುಟ್ಟಿ ಹೆಣೆಯುವುದು, ಗಾರೆ ಕೆಲಸ ಮುಂತಾದವು ಮೂಲ ಕಸುಬುಗಳಾಗಿವೆ.

14. **ಶಿಕ್ಷಣದ ಸೌಲಭ್ಯಗಳು:** 1. ಪ್ರಾಥಮಿಕ ಶಾಲೆ - 31 ಹಳ್ಳಿಗಳಲ್ಲಿ ಇದೆ. 2. ಮಾಧ್ಯಮಿಕ ಶಾಲೆ - 6 ಹಳ್ಳಿಗಳಲ್ಲಿ ಇದೆ. 3. ಪ್ರೌಢಶಾಲೆ - 1 ಕಡೆಗೆ ಮಾತ್ರ ಇದೆ. 4. ಅಂಗನವಾಡಿ ಶಾಲೆ - 30 ಹಳ್ಳಿಗಳಲ್ಲಿ 1 ಹಳ್ಳಿಯಲ್ಲಿ ಇಲ್ಲ.
15. **ಪಂಚಾಯತ್ ರಾಜ್ ವ್ಯವಸ್ಥೆ:** 10 ಹಳ್ಳಿಯಲ್ಲಿ ಗ್ರಾಮ ಪಂಚಾಯ್ತಿಯಿದೆ. ಹೆಚ್ಚು ಪಂಚಾಯ್ತಿಯಲ್ಲಿ ಇರುವ ಸೌಲಭ್ಯಗಳ ಮಾಹಿತಿ ಜನರಿಗೆ ಇಲ್ಲ. ಮಾಹಿತಿ ಇದ್ದಲ್ಲಿ ಗ್ರಾಮ ಸಭೆಗಳ ಮೂಲಕ ಅಸಹಾಯಕ ಫಲಾನುಭವಿಗೆ ಸಹಾಯ ತಲುಪಲ್ಲ. ಶೇ. 15 ರಷ್ಟು ಹಳ್ಳಿಯಲ್ಲಿ ಪಂಚಾಯತ್ ಕಾರ್ಯಾಲಯ ತೆರೆಯುವುದೇ ಇಲ್ಲ.
16. **ಪಂಚಾಯ್ತಿಯಿಂದ ಸಮುದಾಯಕ್ಕೆ ಆದ ಪ್ರಯೋಜನ:** ಶೇ. 35 ರಷ್ಟು ಪಂಚಾಯ್ತಿಯಿಂದ ಪ್ರಮುಖರಿಗೆ ಪ್ರಯೋಜನವಾಗಿದೆ.
17. **ಪಿ.ಹೆಚ್.ಸಿ. ಕೇಂದ್ರಗಳು:** 31 ಹಳ್ಳಿಗಳಲ್ಲಿ ಕೇವಲ 8 ಹಳ್ಳಿಯಲ್ಲಿ ಮಾತ್ರ ಪ್ರಾದೇಶಿಕ ಆರೋಗ್ಯ ಕೇಂದ್ರ ಇದೆ. ಆದರೆ ಶೇ. 50 ರಷ್ಟು ಹಳ್ಳಿಯವರು 25 ರಿಂದ 35 ಕಿ.ಮೀ. ದೂರದವರೆಗೆ ನಡೆದುಕೊಂಡು ಹೋಗಿ ಆರೋಗ್ಯ ಪರೀಕ್ಷೆಯನ್ನು ಮಾಡಿಕೊಳ್ಳಬೇಕಾಗುತ್ತಿದೆ.
18. **ಪಿ.ಹೆಚ್.ಸಿ. ಯಲ್ಲಿ ಸಿಗುವ ಮೂಲ ಸೌಲಭ್ಯಗಳು:** ಹೆಚ್ಚಿನ ಆರೋಗ್ಯ ಕೇಂದ್ರಗಳಲ್ಲಿ ಸೌಲಭ್ಯಗಳು ಸಿಗುವುದು ಕನಸಿನ ಮಾತು. ಆದರೂ ಕೆಲವೊಂದು ಕಡೆಗೆ ಸಿಗುವಂತಹದು ನಿಜ. ಬಾಣಂತಿಯ ಔಷಧೋಪಚಾರ, ಪೋಲಿಯೋ, ಚುಚ್ಚುಮದ್ದು, ಕುಟುಂಬ ನಿಯಂತ್ರಣ ಯೋಜನೆ, ಸಣ್ಣಪುಟ್ಟ ಮಾತ್ರೆಗಳ ವ್ಯವಸ್ಥೆ ಇಲ್ಲ.
19. **ಖಾಸಗಿ ವೈದ್ಯಕೀಯ ಸೌಲಭ್ಯಗಳು:** ಸ್ಥಳೀಯ ಆರ್.ಪಿ. ವೈದ್ಯರು, ಆಯುರ್ವೇದಿಕ್ ವೈದ್ಯರು, ನಾಟಿ ವೈದ್ಯರು, ದಾಯಿಯರು.
20. **ಸಾಮಾಜಿಕ ಸಮಸ್ಯೆಗಳು:** ಜಾತೀಯತೆ, ಲಿಂಗಭೇದ, ಕುಡಿತ, ಬಾಲ್ಯ ವಿವಾಹ, ವರದಕ್ಷಿಣೆ, ಮಹಿಳೆ ಮೇಲೆ ಅತ್ಯಾಚಾರ ಮತ್ತು ದೈಹಿಕ ಹಿಂಸೆ, ಕೂಲಿಯಲ್ಲಿ ಅಸಮಾನತೆ, ಅನಕ್ಷರತೆ ಮೊದಲಾದವುಗಳು.
21. **ಸಮಸ್ಯೆಗಳನ್ನು ಬಗೆಹರಿಸಲು ಜನರ ಉಪಕ್ರಮಗಳು:** ಶೇ. 50 ರಷ್ಟು ಸಂಘಟನೆಗಳ ಮೂಲಕ ಸಮಸ್ಯೆಗಳ ಬದಲಾವಣೆ ಮಾಡಲು ಪ್ರಯತ್ನ. ಗ್ರಾಮ ಪಂಚಾಯ್ತಿ ಮೀಸಲಾತಿಯಿಂದ ಮಹಿಳೆಯರು ಬದಲಾಗಲು ಸಾಧ್ಯ.

**<u>ಕಲಾಜಾಥಾದಲ್ಲಿ ಕಂಡುಬಂದ ಗ್ರಾಮದ ಸಮಸ್ಯೆಗಳು:</u>**

1. ಶಾಲಾ ಮಕ್ಕಳಿಗೆ ಆರೋಗ್ಯದ ಬಗ್ಗೆ ತಿಳುವಳಿಕೆಯಿಲ್ಲ.
2. ಊರು ಸ್ವಚ್ಛತೆಯಿಂದ ಕೂಡಿಲ್ಲ.
3. ಅಂಗನವಾಡಿ ಇಲ್ಲ.
4. ಸರಿಯಾದ ಆಹಾರ ಸಿಗಲ್ಲ.
5. ಚರಂಡಿ ವ್ಯವಸ್ಥೆಗಳು ಇಲ್ಲ.
6. ರಸ್ತೆಯ ತುಂಬ ಬಚ್ಚಲು ನೀರು ಹರಿಯುತ್ತವೆ.
7. ರಸ್ತೆ ವ್ಯವಸ್ಥೆ ಸರಿಯಾಗಿಲ್ಲ. ಕೆಲವು ಕಡೆ ಬಸ್ಸು ಇಲ್ಲ, ಬಸ್ಸು ಇದ್ದರೂ ರಸ್ತೆಯಿಲ್ಲ.
8. ವೈಯಕ್ತಿಕ ಮತ್ತು ಸಾಮೂಹಿಕ ಶೌಚಾಲಯ ಇಲ್ಲ.
9. ಶಾಲೆಯಲ್ಲಿ ಶಿಕ್ಷಕರ ಕೊರತೆ, ಶಾಲೆಯ ಕಟ್ಟಡ ವ್ಯವಸ್ಥೆ ಇಲ್ಲ.
10. ಕೆಲವು ಕಡೆ ಪಿ.ಹೆಚ್.ಸಿ. ಉಪಕೇಂದ್ರ ಮತ್ತು ಪಿ.ಹೆಚ್.ಸಿ. ಇದ್ದರೂ ಸ್ಥಳೀಯವಾಗಿ ಎ.ಎನ್.ಎಂ. ವೈದ್ಯರು ಇರುವುದಿಲ್ಲ.
11. ಸಂಬಂಧಪಟ್ಟ ಮಾತ್ರೆಗಳು ಮತ್ತು ಔಷಧಿಗಳ ಪೂರೈಕೆ ಇಲ್ಲ.
12. ದವಾಖಾನೆ ಕಟ್ಟಡ ಇಲ್ಲ, ಇದ್ದರೂ ವ್ಯವಸ್ಥೆ ಇಲ್ಲ.
13. ಮಹಿಳಾ ವೈದ್ಯರು ಇಲ್ಲ.
14. ಶುಚಿಯಾದ ನೀರಿನ ವ್ಯವಸ್ಥೆ ಇಲ್ಲ.

15. ಬೀದಿ ದೀಪದ ವ್ಯವಸ್ಥೆ ಇಲ್ಲ.
16. ಹೆರಿಗೆ ಕೋಣೆ ಇಲ್ಲ.

**ಸಾಮಾನ್ಯ ಕಾಯಿಲೆಗಳು:** ಬಿಳಿಜ್ವರ, ವಾಂತಿಭೇದಿ, ಟೈಫೈಡ್, ತಲೆನೋವು, ಕಾಮಾಲೆ, ಗಂಟಲು ನೋವು, ಚರ್ಮರೋಗ, ಆನೆಕಾಲು ರೋಗ, ದಮ್ಮು, ಕಾಲರಾ, ಮಲೇರಿಯಾ, ಹೊಟ್ಟೆನೋವು, ಕೈಕಾಲು ನೋವು, ಕಣ್ಣುನೋವು, ಮೆದುಳು ಜ್ವರ, ಬಿಳಿಮುಟ್ಟು, ಕೆಂಪು ರಕ್ತಸ್ರಾವ.


ಈ ರೀತಿಯಾಗಿ 5 - 6 ಜಿಲ್ಲೆಯಿಂದ ಸಂವಾದ ಚರ್ಚೆಯ ವಿಷಯಗಳನ್ನು ಮಂಡಿಸಿದರು. ನಂತರ ಜನಾರೋಗ್ಯ ಕಲಾಜಾಥಾ ತಂಡ ಹಾಗೂ ಭಾಗವಹಿಸಿದ ಎಲ್ಲ ಸದಸ್ಯರು ಸೇರಿಕೊಂಡು ದಾವಣಗೆರೆ ನಗರದ ಮುಖ್ಯ ರಸ್ತೆಯಲ್ಲಿ ಪ್ರಭಾತ್‌ಫೇರಿ ಮಾಡಲಾಯಿತು. ಪ್ರಭಾತ್‌ಫೇರಿ ಘೋಷಣೆಗಳು, ಹಾಡುಗಳ ಮುಖಾಂತರ ಮಾಡಲಾಯಿತು.


1. ಯುದ್ಧ ಬೇಡ, ಶಾಂತಿ ಬೇಕು.
2. ಬಾಂಬ್ ಬೇಡ ರೊಟ್ಟಿ (ಊಟ) ಬೇಕು.
3. ಶಿಕ್ಷಣದ ಹಕ್ಕು ಮೂಲಭೂತ ಹಕ್ಕು.
4. ಎಲ್ಲರಿಗೂ ಕುಡಿಯಲು ನೀರು ಬೇಕೇ ಬೇಕು.
5. ಎಲ್ಲರಿಗೂ ಪೌಷ್ಠಿಕ ಆಹಾರ ಬೇಕೇ ಬೇಕು.
6. ಮೂಢನಂಬಿಕೆ ಅಳಿಯಲಿ, ವೈಜ್ಞಾನಿಕ ಚಿಂತನೆ ಬೆಳೆಯಲಿ.
7. ಅಂಗವಿಕಲರ ಹಕ್ಕುಗಳ ರಕ್ಷಣೆ ಅತೀ ಬೇಕು. ಆಗಲೇ ಬೇಕು.
8. ಎಲ್ಲರಿಗೂ ಪ್ರಾಥಮಿಕ ಆರೋಗ್ಯ ಬೇಕೇ ಬೇಕು.

ಪ್ರಭಾತ್‌ಫೇರಿ ನಂತರ ಊಟ ಮಾಡಿ ಪುನಃ ಸಭೆ ಸೇರಿ ರಾಜ್ಯ ಸಮಾವೇಶಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಾಯ ಮಾಡಿದ ದಾವಣಗೆರೆಯ ಇತರೇ ಸ್ವಯಂ ಸೇವಾ ಸಂಸ್ಥೆಯವರನ್ನು ಹಾಗೂ ನಗರದ ಪ್ರಮುಖರನ್ನು ಜನಾರೋಗ್ಯ ಕಲಾಜಾಥಾದ ಕೈಪಿಡಿಯನ್ನು ಕೊಡುವ ಮೂಲಕ ಸನ್ಮಾನಿಸಿ ವಂದನೆಗಳೊಂದಿಗೆ ಸಮಾವೇಶವನ್ನು ಸಾಯಂಕಾಲ 3-00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

# ರಾಷ್ಟ್ರೀಯ ಜನಾರೋಗ್ಯ ಸಮಾವೇಶದ
# ವರದಿ - ಕಲ್ಕತ್ತಾ

ದಿನಾಂಕ : 30-11-2000 ದಿಂದ 1-12-2000.




PEARL



# ರಾಷ್ಟ್ರೀಯ ಜನಾರೋಗ್ಯ ಸಮಾವೇಶದ ವರದಿ

ದಿನಾಂಕ : 30-11-2000 ರಿಂದ 1-12-2000.
ಸ್ಥಳ : ಸಾಲ್ಟ್ ಲೇಕ್ ಸ್ಟೇಡಿಯಂ ಕಲ್ಕತ್ತಾ.
ಭಾಗಾರ್ಥಿಗಳು : 18 ರಾಜ್ಯಗಳ 1500 ಪ್ರತಿನಿಧಿಗಳು,
ಕರ್ನಾಟಕದ 17 ಜಿಲ್ಲೆಯ 250 ಪ್ರತಿನಿಧಿಗಳು,
ಮಹಿಳಾ ಸಮಖ್ಯಾ ಕರ್ನಾಟಕದ 20 ಪ್ರತಿನಿಧಿಗಳು.
ರಾಯಚೂರು ಮಹಿಳಾ ಸಮಖ್ಯಾ ಘಟಕದ ಪ್ರತಿನಿಧಿಗಳು.
ಶ್ರೀಮತಿ ಲೀಲಾ ಕುಲ್ಕರ್ಣಿ.
ಶ್ರೀಮತಿ ಮಹಾದೇವಿ ಗುಡಿ.
ಶ್ರೀಮತಿ ರೇಣುಕಾ ಎಸ್.

ದಿನಾಂಕ 30-11-2000 ರಂದು ಬೆಳಗ್ಗೆ 9-00 ಗಂಟೆಗೆ ಪಶ್ಚಿಮ ಬಂಗಾಳ ರಾಜ್ಯದ ಪ್ರತಿನಿಧಿಗಳಿಂದ ದೀಪ ಬೆಳಗಿಸಿ ಬಂಗಾಳ ಹಾಡಿನ ಮೂಲಕ ಸಮಾವೇಶ ಪ್ರಾರಂಭಗೊಂಡಿತು. ರಾಷ್ಟ್ರೀಯ ಸಂಯೋಜನಾ ಸಮಿತಿಯ ಅಧ್ಯಕ್ಷರಾದ ಎನ್.ಹೆಚ್. ಆ್ಯಂತಿಯಾ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಜನಾರೋಗ್ಯ ಸಮಿತಿಯ ಕಾರ್ಯದರ್ಶಿಗಳಾದ ಶ್ರೀದೀಪ್ ಭಟ್ಟಾಚಾರ್ಯ ಅವರು ಬಂದಂತಹ ಪ್ರತಿನಿಧಿಗಳನ್ನು ಸ್ವಾಗತಿಸಿ ಎರಡು ದಿನದ ಕಾರ್ಯಕ್ರಮಗಳ ಹಾಗೂ ವಸತಿ ವ್ಯವಸ್ಥೆಯ ಬಗ್ಗೆ ಸ್ಥೂಲ ಪರಿಚಯ ಮಾಡಿಕೊಟ್ಟರು.

ಈ ಮೊದಲ ದಿನದ ಉದ್ಘಾಟನಾ ಸಮಾರಂಭಕ್ಕೆ ಹಾಗೂ ಪ್ಲಿನರೀ ಸೆಶನ್‌ಗಳಲ್ಲಿ ಈ ಕೆಳಕಂಡ ಮುಖ್ಯ ಅತಿಥಿಗಳು ಭಾಗವಹಿಸಿ ಜನಾರೋಗ್ಯ ಆಂದೋಲನೆಯ ಕುರಿತು ಮಾಹಿತಿ ನೀಡಿದರು.

1. ಪ್ರೊ. ಅಮಿಯಾ ಬಾಗಚಿ - ಅರ್ಥಶಾಸ್ತ್ರಜ್ಞರು.
2. ಶ್ರೀ ಹಾಲ್ಘನ್ ಮಾಲ್ಹರ್ - ಮಾಜಿ ಜನರಲ್ ಡೈರೆಕ್ಟರ್ ಡಬ್ಲ್ಯೂಹೆಚ್‌ಓ.
3. ಪಾರ್ಥೋ ಡಿ. - ಆರೋಗ್ಯ ಸಚಿವರು ಪಶ್ಚಿಮ ಬಂಗಾಳ.
4. ಜಿತೇಂದ್ರ ಚೌಧರಿ - ಮುಖ್ಯ ಮಂತ್ರಿಗಳು ತ್ರಿಪುರಾ.
5. ಮೇಧಾ ಪಾಟ್ಕರ್ - ನ್ಯಾಷನಲ್ ಅಲಿಯನ್ಸ್ ಆಫ್ ಪೀಪಲ್ ಮೂವ್‌ಮೆಂಟ್.
6. ಡಾ. ಮೀರಾ ಶಿವಾ - ವಾಲಂಟರಿ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾ.
7. ವಂದನಾ ಪ್ರಸಾದ್ - FORCES (ಫೋರಮ್ ಆಫ್ ಚೈಲ್ಡ್ ಕೇರ್ ಮತ್ತು ಕ್ರೆಷ್ ಸರ್ವೀಸಸ್)
8. ಎಸ್. ಸುಧಾ - AIDWA - ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ.
9. ಕೃಷ್ಣಕುಮಾರಿ - Joint Women action.
10. ಅಮರಜೀತ್ ಕೌರ್ - NFIWC (ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್).
11. ಸ್ವಾಮಿ ಸರ್ವಲೋಕಾನಂದ - ರಾಮಕೃಷ್ಣಾಶ್ರಮ.
12. ಅಮಿತಾವಾ ಗುಹಾ - FMRAI.
13. ಶ್ರೀಧರ - ಮೆಡಿಕೋ ಫ್ರೆಂಡ್ಸ್ ಅಸೋಸಿಯೇಷನ್.
14. ಅನಂತ ಫಡ್ಕೆ - CEHAT
15. ರವಿ ನಾರಾಯನ್ - Community Health cell.
16. K.K. ಕೃಷ್ಣಕುಮಾರ್ - ಬಿಜಿವಿಎಸ್.

<u>ಪ್ರೊ. ಅಮಿಯಾ ಬಾಗಚಿ</u>

**ಜಾಗತೀಕರಣ ಮತ್ತು ಜನರ ಆರೋಗ್ಯದ ಮೇಲೆ ಇದರ ಪರಿಣಾಮ : ಈ ವಿಷಯದ ಕುರಿತು** ಮಾತನಾಡುತ್ತಾ, ಪ್ರೊ. ಬಾಗ್ಚಿಯಾ ಅವರು ಇಂದು ಮಾನವರೆಲ್ಲ ಜಾಗತೀಕರಣಗೊಂಡಿದ್ದಾರೆ. ಮಾನವರು ವಲಸೆ ಹೋಗುವಂತೆ ಇಂದು ಜ್ಞಾನವೂ ಸಹ ವಲಸೆ ಹೋಗುತ್ತಿದೆ. ಜ್ಞಾನ ವಿಸ್ತರಣೆ ಜನರ ಆರೋಗ್ಯದ ಉಳಿವಿನ ಮೇಲೆ ಪರಿಣಾಮ ಬೀರಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. 19 ನೇ ಶತಮಾನದ ಕೊನೆಯ ಭಾಗದಿಂದೀಚಿನ ಪರಿಸ್ಥಿತಿಯಲ್ಲಿ ಬದಲಾವಣೆಯಾಗುತ್ತಾ ಬಂತು. ಯುರೋಪಿಯನ್ನರ ಸರಾಸರಿ ಆರೋಗ್ಯ 35-40 ವರ್ಷವಿದ್ದದ್ದು 10 ವರ್ಷಗಳಲ್ಲಿ ದ್ವಿಗುಣಗೊಂಡಿತು. ಬೇರೆ ದೇಶಗಳಂತೆ ನಮ್ಮ ರಾಷ್ಟ್ರದಲ್ಲೂ ಈ ದೀರ್ಘಾಯುಶ್ಯವನ್ನು ಪಡೆಯುವ ಸಾಧ್ಯತೆ ಇದೆ. ಆದರೆ ಅದಕ್ಕಾಗಿ ಸಾಮಾಜಿಕ ಹಾಗೂ ರಾಜಕೀಯ ಹೊಂದಾಣಿಕೆಯ ಅಗತ್ಯವಿದೆ.

ನಮ್ಮ ರಾಷ್ಟ್ರದ ಪರಿಸ್ಥಿತಿಯಲ್ಲಿ ಜಾಗತಿಕ ಜನಸಂಖ್ಯೆಯ ಶೇ. 70 ರಷ್ಟು ಶ್ರೀಮಂತ ಜನರಿಗಿಂತ ಶೇ. 30 ರಷ್ಟು ಬಡ ಜನರು ಇಂದು ಮಾರಣಾಂತಿಕ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಶ್ರೀಮಂತ ಹಾಗೂ ಬಡವರ ಉಳಿವಿನ ಅಂತರ ರಾಷ್ಟ್ರದಿಂದ ರಾಷ್ಟ್ರಕ್ಕೆ ಬದಲಾಗುತ್ತಾ ಹೋಗುತ್ತಿದೆ. ಅಂತೆಯೇ ಕಳೆದ 20 ವರ್ಷಗಳಲ್ಲಿ ನಮ್ಮ ದೇಶದ ಸರಾಸರಿ ಆದಾಯ ಕೂಡ ಕ್ಷೀಣಿಸುತ್ತಾ ಹೋಗುತ್ತಿದೆ. ವಿಶ್ವಬ್ಯಾಂಕಿನ ದಾಖಲೆಗಳ ಪ್ರಕಾರ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕಾಗಿ ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣವಾಗಬೇಕು. ಆದರೆ ಅದಕ್ಕಿರುವ ಅಡೆತಡೆಗಳು ಹಲವಾರು.

- **ಪ್ರಾಥಮಿಕ ಆರೋಗ್ಯ ಪಾಲನಾ ಕೇಂದ್ರಗಳ ಬೇಡಿಕೆ.**
- **ತತ್ವರಹಿತ ವೈದ್ಯಕೀಯ ಸೌಲಭ್ಯಗಳು ಹಾಗೂ ಕಂಪನಿಗಳ ಭಾಗವಹಿಸುವಿಕೆ.**
- ಫಲವತ್ತತೆಯ ವಿಧಾನದಲ್ಲಿ ತೀವ್ರತರ ಬದಲಾವಣೆ.
- ಅಪಾಯಕಾರಿ ಗರ್ಭನಿರೋಧಕಗಳನ್ನು ಮಾಹಿತಿಯೇ ಇಲ್ಲದ ಬಡ ಮಹಿಳೆಯರ ಮೇಲೆ ಪ್ರಯೋಗಿಸುವುದು ಇತ್ಯಾದಿ.

<u>ಹಾಲ್ಡನ್ ಮಾಲ್ಹರ್</u>

**"ಎಲ್ಲರಿಗೂ ಆರೋಗ್ಯ" ಒಂದು ಪ್ರತಿಜ್ಞೆ :** ಜಗತ್ತಿನ ಜನರೆಲ್ಲ ಆರೋಗ್ಯವಾಗಿರಬೇಕಾದರೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ತೃಪ್ತಿಕರ ಹಾಗೂ ಉತ್ಪಾದಕರ ಜೀವನವಿರಬೇಕು. ಅಭಿವೃದ್ಧಿ ಎಂಬುದು ಅವಕಾಶಗಳನ್ನು ವಿಸ್ತರಿಸುವ ಹಾಗೂ ರಚಿಸುವ ಕೊನೆಯ ಅಂಶವಾಗಬೇಕು. ಇಂದು ಸಾವಿರಾರು ಜನರು ಬಡತನ, ಅನಕ್ಷರತೆ ಹಾಗೂ ಅನಾರೋಗ್ಯಕರ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ. ಈ ಜನಾರೋಗ್ಯ ಸಮಾವೇಶವು ಜನರಲ್ಲಿ ಸಾಮಾಜಿಕ, ಬೌದ್ಧಿಕ ಹಾಗೂ ಮಾನಸಿಕ ಆರೋಗ್ಯದ ಅರಿವನ್ನು ಮೂಡಿಸುವ ಮುಖಾಂತರ ಸಶಕ್ತರನ್ನಾಗಿಸುವ ಒಂದು ಸಾಧನವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಆರೋಗ್ಯವು ಒಂದು ರಾಜನೀತಿ. ಅದರಲ್ಲಿ ತೊಡಗಿಸಿಕೊಂಡು ಮಾಡಬೇಕು. ನಾವು ಆರೋಗ್ಯದ ಬಗ್ಗೆ ಮಾತಾಡುವಾಗ 1, 2, 3 ನೇ ವಿಶ್ವದ ಬಗ್ಗೆ ಅಲ್ಲ ಆರೋಗ್ಯ ವಿಶ್ವದ ಬಗ್ಗೆ ಮಾತಾಡಬೇಕು. ಶ್ರೀಮಂತ ಬಡವರ ನಡುವಿನ ಅಂತರದಲ್ಲಿ ಪರಿವರ್ತನೆ ತರಲು ಅಸಮಾನತೆಯನ್ನು ಹೋಗಲಾಡಿಸಬೇಕು. ಇದಕ್ಕಾಗಿ ಹೊಸ ಹಾಗೂ ಬದ್ಧ ನೀತಿಗಳ ಅವಶ್ಯಕತೆ ಇದೆ. ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಆರೋಗ್ಯಕ್ಕೆ ಬಹಳ ಮುಖ್ಯವಾಗಿದೆ. ಇದು ಹೊಸ ನಾಯಕತ್ವದ ಕನಸಾಗಿದೆ. ಈ ಕನಸನ್ನು ನನಸಾಗಿಸುವವರು ಸಮುದಾಯ ಕಾರ್ಯಕರ್ತರು ಹಾಗೂ ಚಿಕ್ಕಪುಟ್ಟ ಹಳ್ಳಿಗಳಲ್ಲಿ ಕಾರ್ಯ ನಿರ್ವಹಿಸುವವರು.

"ಎಲ್ಲರಿಗೂ ಆರೋಗ್ಯ" ವೆಂಬುದು ಕ್ರಾಂತಿಕಾರಿ ಸಂದೇಶವಾಗಿದೆ. ಮನುಷ್ಯನಿಗೆ ಅಸಂಭವವಿರುವುದನ್ನು ಸಂಭವ ಮಾಡಿ ತೋರಿಸುವುದೇ ಇದರ ಸವಾಲಾಗಿದೆ.

**ಪಾರ್ಥೋಟಿ**

**ಆರೋಗ್ಯ ಸೇವೆಯ ವಿಕೇಂದ್ರೀಕರಣ:** ಅಧಿಕಾರ ಹಾಗೂ ತಾಂತ್ರಿಕತೆಯ ವಿಕಸ್ವಾಮ್ಯತೆಯಿಂದಾಗಿ ಕಡೆಗಾಣಿಸಲ್ಪಟ್ಟ ಜನತೆಯ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಾ, ಪಶ್ಚಿಮ ಬಂಗಾಳದಲ್ಲಿ ಉಂಟಾದ ಪ್ರವಾಹದಿಂದಾಗಿ 9 ಜಿಲ್ಲೆಯ ಸಾವಿರಾರು ಜನರು ಯಾವುದೇ ಸಹಾಯ ಸಿಗದೇ ವಂಚಿತರಾದರು. ಸ್ವಯಂ ಸೇವಾ ಸಂಸ್ಥೆಗಳ ಸಕ್ರಿಯ ಭಾಗವಹಿಸುವಿಕೆಯಿಂದಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಮಸೀದಿಗಳಲ್ಲಿ ಆಶ್ರಯ ನೀಡಲಾಯಿತು. ಜಾತೀಯತೆಯ ಅಸಮಾನತೆ ಎಲ್ಲೂ ಕುಡುಬರಲಿಲ್ಲ. ಲಕ್ಷಾನುಗಟ್ಟಲೆ ಎಕರೆಗಳಷ್ಟು ಜಮೀನು ಸಾವಿರಾರು ಜನರಿಗೆ ವಿತರಿಸಲಾಯಿತು. ಈ ಎಲ್ಲ ಆಗು - ಹೋಗುಗಳನ್ನು ಜನರ ಒಪ್ಪಿಗೆಯ ಮೇರೆಗೆ ಗ್ರಾಮ ಸಭೆಗಳ ಮೂಲಕ ಮಾಡಲು ಸಾಧ್ಯವಾಯಿತು.

ಜಿಲ್ಲಾ ಆರೋಗ್ಯ ಸಮಿತಿಗಳನ್ನು ರಚಿಸಿ ವೈದ್ಯರನ್ನು ನೇಮಕಾತಿಗೊಳಿಸುವುದು, ವರ್ಗಾವಣೆ ಮಾಡುವುದು ಹಾಗೂ ಇತರೆ ಆರೋಗ್ಯ ಪರಿಸ್ಥಿತಿಗಳ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಗಳ ಬಗ್ಗೆ ಅರಿವನ್ನು ಮೂಡಿಸಲಾಯಿತು. ಜನಸಾಮಾನ್ಯರು ಗ್ರಾಮದ ಪ್ರಧಾನರ ಕೆಲಸ ಕಾರ್ಯಗಳ ನಿಗಾ ವಹಿಸಿದರು. ಎರಡು ಪ್ರತ್ಯೇಕ ಪಂಚಾಯ್ತಿಗಳು, ಎರಡು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆರೋಗ್ಯ ಕೇಂದ್ರಗಳ, ದಾಯಿಯರ ಕೆಲಸದ, ಆರೋಗ್ಯ ಕಾರ್ಯಕರ್ತರ ಕೆಲಸದ ನಿರ್ವಹಣೆಯನ್ನು ಜಿಲ್ಲಾ ಪಂಚಾಯ್ತಿಯವರು ವಹಿಸಿಕೊಂಡಿದ್ದರು. ದಾಯಿಯರಿಗೆ ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಮಕ್ಕಳ ಜನನ ಹಾಗೂ ಆರೋಗ್ಯ ಪಾಲನೆಯ ಬಗ್ಗೆ ತರಬೇತಿಗಳನ್ನು ನೀಡುವ ಮೂಲಕ ಆರೋಗ್ಯಕ್ಕೆ ಪ್ರಥಮ ಆದ್ಯತೆ ಕೊಡುವಂತೆ ಅರಿವು ಮೂಡಿಸಲಾಯಿತು.

ಬಲವಾದ ಸಾಕ್ಷರತಾ ಚಳುವಳಿ ಹಾಗೂ ಪ್ರಾಥಮಿಕ ಶಿಕ್ಷಣ ಹೊಸ ತಿರುವನ್ನು ಪಡೆದವು. ಶೈಕ್ಷಣಿಕ ಯೋಜನೆಯನ್ನು ಮಾಡುವುದು ಗ್ರಾಮ ಶಿಕ್ಷಣ ಸಮಿತಿಯ ಜವಾಬ್ದಾರಿಯಾಯಿತು. ಪ್ರತಿಯೊಂದು ಬ್ಲಾಕ್‌ನಲ್ಲಿ ರಕ್ತದಾನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಆರೋಗ್ಯ ಇಲಾಖೆಯು ಒಳ್ಳೆಯ ಅಭಿಪ್ರಾಯವನ್ನು ಗಳಿಸಿತು. ಅದೇ ಸಮಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಸ್ವ ಸಹಾಯ ಗುಂಪುಗಳನ್ನು ರಚಿಸುವಂತೆ ಪ್ರೇರಣೆ ನೀಡಿದರು.

**ಸಾಮಾಜಿಕ ಆರೋಗ್ಯ ವಿಮೆ:** ಇದರಡಿಯಲ್ಲಿ ನಡೆಸಲಾದ ಆರೋಗ್ಯ ಮೇಳಗಳು ಬಹಳ ಉತ್ಸಾಹದಾಯಕವಾದ ಅನುಭವವಾಗಿದ್ದವು. ಅದೇ ಸಮಯದಲ್ಲಿ ಗಿಡ ಮೂಲಿಕೆ ಔಷಧಿ ಜನಪ್ರಿಯತೆಯನ್ನು ಗಳಿಸಿತು. ಸಾಮಾಜಿಕವಾಗಿ ಕಡೆಗಾಣಿಸಲ್ಪಟ್ಟ ವಲಯಗಳನ್ನು ಅನೌಪಚಾರಿಕ ವಲಯಗಳು ನೋಡಿಕೊಂಡವು. ಉದಾ: ಗ್ರಾಮೀಣ ಪ್ರದೇಶದಲ್ಲಿ ಎಂ.ಬಿ.ಬಿ.ಎಸ್. ವೈದ್ಯರ ಸ್ಥಳದಲ್ಲಿ ತರಬೇತಿ ಹೊಂದಿದ ಆರೋಗ್ಯ ಕಾರ್ಯಕರ್ತರ ಸೇವೆಯನ್ನು ಬಳಸಿಕೊಳ್ಳಲಾಯಿತು.

ತ್ರಿಪುರಾ ರಾಜ್ಯದ ಮುಖ್ಯಮಂತ್ರಿಗಳು ಮಾತನಾಡುತ್ತಾ, ಆರೋಗ್ಯ ಎಂಬುದು ಇಂದು ರಾಜಕೀಯವಾಗಿದೆ. ನಾವೆಲ್ಲರೂ ಸಂಘಟಿತರಾಗಿ ಕೆಲಸ ಮಾಡಿದಲ್ಲಿ ಆ ಚಿತ್ರಣವನ್ನು ಬದಲಾಯಿಸಬಹುದು. ಆರೋಗ್ಯದ ಹಕ್ಕು ಎಂಬುದು ಕೇವಲ ಘೋಷಣೆಯಲ್ಲ. ಅದು ಮಾನವರ ಮೂಲಭೂತ ಹಕ್ಕು ನಾವೆಲ್ಲರೂ ಒಗ್ಗಟ್ಟಾದರೆ ಆ ಗುರಿ ತಲುಪಲು ಸಾಧ್ಯವೆಂದು ಕರೆ ಕೊಟ್ಟರು.

**ಪ್ರೊ. ಆಂತಿಯಾ :** ಸಮಾವೇಶದಲ್ಲಿ ನೆರೆದಿದ್ದ ಸಭಿಕರನ್ನುದ್ದೇಶಿಸಿ ಗ್ರಾಮೀಣ ಪ್ರದೇಶದ ಸಹಸ್ರಾರು ಜನರ ಪ್ರತಿನಿಧಿಗಳೆಂದೂ ಅವರೇ ಭವಿಷ್ಯದ ಆಶಾಕಿರಣವೆಂದೂ ಉದ್ಧರಿಸಿದರು. ವೈದ್ಯಕೀಯ ವೃತ್ತಿ ಎಂಬುದು ಇರುವಂತಹ ಆರೋಗ್ಯ ವ್ಯವಸ್ಥೆಯ ಬೆಂಬಲ ರಚನೆ. ಅದೊಂದು ಮೋಹಕವಾದ ತಂತ್ರಜ್ಞಾನ. ಮಾನವರು ಭೂಮಿಯ ಮೇಲೆ ಬಂದಾಗಿನಿಂದ ಇದ್ದದ್ದು ಆಯುರ್ವೇದ ಹಾಗೂ ಹೋಮಿಯೋ ಪತಿ ಶಾಸ್ತ್ರಗಳು. ಆದರೆ ಈಗ ಆರೋಗ್ಯವೆಂಬುದು ವ್ಯಾಪಾರೀಕರಣಗೊಂಡಿದೆ. ಆರೋಗ್ಯವೆಂಬುದು ಖಾಸಗೀ

ಹಾಗೂ ಸ್ವಂತ ವಲಯಗಳ ಕಾರ್ಯವಾದಂತಾಗಿದೆ. ನಮಗಿಂದು ಪ್ರತಿನಿಧಿಗಳ ಪ್ರಜಾಪ್ರಭುತ್ವಕ್ಕಿಂತ ಪಂಚಾಯತ್‌ರಾಜ್‌ನಂತಹ ಭಾಗವಹಿಸುವಿಕೆಯ ಪ್ರಜಾಪ್ರಭುತ್ವದ ಅಗತ್ಯತೆ ಇದೆ.

ಜನಾರೋಗ್ಯ ಸಭೆಯು ಒಂದು ವಿಸ್ತಾರವಾದ ಚಳುವಳಿಯನ್ನು ಪ್ರತಿನಿಧಿಸುತ್ತದೆ. ನಮ್ಮ ಆರೋಗ್ಯ ಕ್ಷೀಣಿಸಿದಾಗ, ವೈದ್ಯಕೀಯ ಸೇವೆಯ ಅಗತ್ಯವಿದೆ. ಬುದ್ಧನ ಹೇಳಿಕೆಯಂತೆ "ಮರಣಕ್ಕೆ ಕಾರಣ ಹುಟ್ಟು, ಅನಾರೋಗ್ಯ ಅಥವಾ ಯಾವುದೇ ರೋಗವಲ್ಲ". 19 ರಾಜ್ಯಗಳ 275 ಜಿಲ್ಲೆಗಳಲ್ಲಿ ಜನಾರೋಗ್ಯ ಸಭೆ ನಡೆದಿರುವುದು ಒಂದು ಸಂತೋಷದ ವಿಷಯವಾಗಿದೆ.

ತಮ್ಮ ಮಾತಿನ ಕೊನೆಗೆ, ಶ್ರೀಮಂತರು ಮಾನಸಿಕ ಆರೋಗ್ಯದಿಂದ ನರಳುತ್ತಿದ್ದರೆ ಬಡವರು ದೈಹಿಕ ಆರೋಗ್ಯದಿಂದ ಬಳಲುತ್ತಿದ್ದಾರೆ. ಇದರ ನಿರ್ಮೂಲನೆಗೆ ಕೇರಳದಲ್ಲಿ ಶೇ. 90 ರಷ್ಟು ಗ್ರಾಮೀಣ ಆರೋಗ್ಯದ ನಿರ್ವಹಣೆಯನ್ನು ಮಹಿಳಾ ಕಾರ್ಯಕರ್ತರೇ ಮಾಡುತ್ತಿದ್ದಂತೆ ಎಲ್ಲ ಕಡೆಯೂ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. "ಉತ್ತಮ ಆರೋಗ್ಯ ರಕ್ಷಣೆ ಗಣನೀಯವಾಗಿ ಅಗ್ಗವಾದುದು. ಆದರೆ ಕೆಟ್ಟ ಆರೋಗ್ಯ ರಕ್ಷಣೆ ಗಣನೀಯವಾಗಿ ದುಬಾರಿಯಾದುದು" ಎಂದು ಸತ್ಯವನ್ನು ತಿಳಿಸಿದರು.

<u>ಮೇಧಾ ಪಾಟ್ಕರ್</u> : ಆರೋಗ್ಯವೆಂಬುದು ಮನಸ್ಸಿಗೆ ನಾಟುವ, ಚುಚ್ಚುವ ವಿಷಯ. ಹಲವಾರು ಬೇರೆ ಬೇರೆ ವಿಷಯಗಳು ಸೇರಿ ಆರೋಗ್ಯದ ವಿಷಯವಾಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಗ್ರಾಮೀಣ ಪ್ರದೇಶದ ಆರೋಗ್ಯದ ಸ್ಥಿತಿಗತಿಗಳು, ಮಹಿಳೆಯರ ಮೇಲಾಗುತ್ತಿರುವ ದುಷ್ಪರಿಣಾಮಗಳು ಇವೆಲ್ಲವುಗಳು ಒಟ್ಟು ಆರೋಗ್ಯಕ್ಕೆ ಸಂಬಂಧಿಸಿದ್ದೇ ಆಗಿವೆ. ಬೇರೆ ಬೇರೆ ಕ್ಷೇತ್ರಗಳಿಂದ ಬಂದಂತಹ ವ್ಯಕ್ತಿಗಳು ತಮ್ಮ ಸಂಘರ್ಷದಲ್ಲಿ ಮುಂದುವರಿಯುತ್ತಾರೆ. ಹಿಂದೆ ತಳ್ಳಲ್ಪಡುತ್ತಾರೆ. ಆದರೂ ಸಹ ಎಲ್ಲರೂ ಮುಂದುವರೆಯಲು ಪ್ರಯತ್ನ ಮಾಡುತ್ತಾರೆ.

ಆರೋಗ್ಯ ಕ್ಷೇತ್ರದಲ್ಲಾಗುತ್ತಿರುವ ದುಷ್ಪರಿಣಾಮಗಳು, ಇಲಾಖೆಯಲ್ಲಿರುವ ಲೋಪದೋಷಗಳು, ಜನರ ಭಾಗವಹಿಸುವಿಕೆ ಇತ್ಯಾದಿ ವಿಷಯಗಳನ್ನೆಲ್ಲ ಸುಧಾರಿಸಲು ಎಲ್ಲರೂ ಸೇರಿ ಮುನ್ನುಗ್ಗಬೇಕಾದ ಸಂದರ್ಭ ಇಂದು ಒದಗಿ ಬಂದಿದೆ.

ಬೇರೆಲ್ಲ ವಿಷಯಗಳನ್ನು ರಾಜಕೀಯದಡಿಯಲ್ಲಿ ಅಳವಡಿಸಿದರೂ ಆರೋಗ್ಯವನ್ನು ಮಾತ್ರ ಬೇರೆಯಾಗಿಯೇ ಪರಿಗಣಿಸಲಾಗುತ್ತಿದೆ. ಇವತ್ತಿನ ದಿನ ಶೇ. 80 ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅನ್ನ ಸುರಕ್ಷಾ ಸವಾಲ್ ಇದೆ. ಆದರೆ ಆರೋಗ್ಯದ್ದಿಲ್ಲ. ನರ್ಮದಾ ಆಂದೋಲನ, ಮಹಾರಾಷ್ಟ್ರದ ನಿಪ್ಪಾಣಿ ಸಮಸ್ಯೆ, ಬೀಡಿ ಕಾರ್ಮಿಕರ ಸಮಸ್ಯೆ ಎಲ್ಲವೂ ಆರೋಗ್ಯಕ್ಕೆ ಸಂಬಂಧಿಸಿದ್ದೇ. ಆರೋಗ್ಯದ ಪ್ರಶ್ನೆ ವ್ಯಕ್ತಿ ವಿಕಾಸದ ಪ್ರಶ್ನೆಯಾಗಿದೆ. ಜನರ ಕೈಯಲ್ಲಿರುವ ಅಧಿಕಾರವನ್ನು ಕಸಿದುಕೊಳ್ಳಲಾಗುತ್ತಿದೆ. ಅವರಡಿಯಲ್ಲಿರುವ ಜಮೀನನ್ನು ಕಿತ್ತುಕೊಳ್ಳಲಾಗುತ್ತಿದೆ. ಇರುವಂಥ ಜಮೀನನ್ನು ಪಾಲಿಗೆ ಕೊಡಲಾಗುತ್ತಿದೆ. ಇಷ್ಟೆಲ್ಲ ಆದ ಮೇಲೆ ಎಲ್ಲಿದೆ ಅನ್ನ ಸುರಕ್ಷೆ. ಇರುವಂಥ ಜಮೀನ್ನು ದೊಡ್ಡ ದೊಡ್ಡ ಫ್ಯಾಕ್ಟರಿ ಮಾಡಲು ಕೊಡುತ್ತಿದ್ದೇವೆ. ಇರುವ ಜಮೀನಿನ ತುಂಬ ಫ್ಯಾಕ್ಟರಿಗಳಾದರೆ ನಾವು ತಿನ್ನುವುದು ಏನನ್ನು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಮುಂಬೈಯಂತಹ ನಗರಗಳಲ್ಲಿ ಹಾಲಿನ ಹೊಳೆ ಹರಿಯುತ್ತಿದೆ. ಕಣಜದಲ್ಲಿ ಧಾನ್ಯ ತುಂಬಿದೆ. ಆದರೂ ಸಹ ವಿದೇಶದಿಂದ ಸಾಮಾನು ಸರಂಜಾಮು, ಗೊಬ್ಬರ ಪ್ರತಿಯೊಂದನ್ನೂ ಆಮದು ಮಾಡಿಕೊಳ್ಳಬೇಕಾಗಿದೆ. ನಾವು ಬೆಳೆಯುವ ಬೆಳೆಗೆ ನಾವು ಕೊಡುವ ಮಹತ್ವ ಇದು.

ಪುರುಷ ಹಾಗೂ ಸ್ತ್ರೀಯರಲ್ಲಿರುವ ವಿಷಮತೆ ದಲಿತ ಹಾಗೂ ಶ್ರೀಮಂತರಲ್ಲಿಯೂ ಇದೆ. ಹರಿಯುವ ನೀರನ್ನು ಬಾಟಲಿಗಳಲ್ಲಿ ತುಂಬಿಡುವ ಅವಶ್ಯಕತೆ ಇಲ್ಲ. ಆದರೆ ಇಂದು ಶುದ್ಧ ನೀರಿಗಾಗಿ

ಮರುಳಾಗಿದ್ದೇವೆ. ಯಾರಿಗೆ ಏನು ಲಭ್ಯವಾಗುತ್ತಿದೆ, ಏನು ಲಭ್ಯವಾಗುತ್ತಿಲ್ಲ ಯೋಚಿಸಿ ಮುನ್ನಡೆಯುವ ಸಮಯ ಬಂದಿದೆ. ಗಿಡಮೂಲಿಕೆ ಬೆಳೆಸಿ ಉಳಿಸಿ ಸಂಸ್ಥೆಯಾಗಿ ಏರ್ಪಟ್ಟ corporate ಅವರ ಕೈಯಲ್ಲಿ ಕೊಡದೆ, ಬರೀ ಅಲೋಪತಿಗೆ ಮರುಳಾಗದೇ ಗಿಡ ಮೂಲಿಕೆಗೆ ಪ್ರಾತಿನಿಧ್ಯ ಕೊಡಬೇಕು.

ಹೀಗೆ ಈಗಿನ ವ್ಯವಸಾಯದಲ್ಲಿರುವ ಆಗುತ್ತಿರುವ ನೀತಿ ನಿಯಮಗಳು, ಆರ್ಥಿಕ ವ್ಯವಸ್ಥೆಯಲ್ಲಾಗುತ್ತಿರುವ ನೀತಿ ನಿಯಮಗಳು ಎಲ್ಲವೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿವೆ.

**ಇದರ್ಕಾಗಿ ಈಗ ನಾವು ಮಾಡಬೇಕಾಗಿರುವ ಕೆಲಸಗಳು ಇಂತಿವೆ.**

- ಸಂವಿಧಾನವನ್ನು ರಕ್ಷಿಸುವ ಕೆಲಸ ಹೆಚ್ಚಾಗಬೇಕು.
- ಎಲ್ಲರಿಗೂ ಆರೋಗ್ಯ ಎಂಬ ಘೋಷಣೆಯ ಜೊತೆಗೆ ಎಲ್ಲರಿಗೂ ಅಭಿವೃದ್ಧಿ ಎಂಬ ಮಾತು ನನಸಾಗಬೇಕು.
- ಈ ಜೀವನವನ್ನು ಇದುವರೆಗೂ ಜೀವಂತವಾಗಿಟ್ಟುಕೊಂಡು ಬಂದಂತಹ ಆದಿವಾಸಿಗಳನ್ನು ಕೊಲ್ಲಲಾಗುತ್ತಿದೆ. ಅದನ್ನು ತಡೆಗಟ್ಟಬೇಕಾಗಿದೆ.
- ವಿಕಾಸ ಆಗಬೇಕಾಗಿದೆ ವಿನಾಶ ಅಲ್ಲ.
- ಆರೋಗ್ಯ/ಸ್ವಾಸ್ಥ್ಯ ಬೇಕಾಗಿದೆ, ಅನಾರೋಗ್ಯ/ಅಸ್ವಾಸ್ಥ್ಯ ಅಲ್ಲ.
- ನೀರು ಬೇಕಾಗಿದೆ ಪೆಪ್ಸಿ ಅಲ್ಲ.

ಇವೆಲ್ಲವನ್ನು ಪಡೆದಾಗ ಮಾತ್ರ ನಮ್ಮ ಆರೋಗ್ಯ ನಮ್ಮ ಕೈಯಲ್ಲಿರಲು ಸಾಧ್ಯ. ಅದರ್ಕಾಗಿ ನಾವೆಷ್ಟೇ ಹೋರಾಡಿದರೂ ಸಾಲದು. ಇದು ಪ್ರತಿಯೊಂದು ಗ್ರಾಮದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಿಂದ ಹುಟ್ಟಿ ಬಂದಾಗ ಮಾತ್ರ ನಮ್ಮ ಮೇಲೆ ಹಾಗೂ ನಮ್ಮ ದೇಶದ ಮೇಲೆ ಆಗುತ್ತಿರುವ ದುಷ್ಟಶಕ್ತಿಗಳ ಹಾಗೂ ದುಷ್ಪರಿಣಾಮಗಳನ್ನು ತಪ್ಪಿಸಲು ಸಾಧ್ಯ. ಇದರ್ಕಾಗಿ ನಮ್ಮ ಹೋರಾಟ ನಿರಂತರವಾಗಿರಬೇಕು. ಅಂದಾಗ ಮಾತ್ರ ನಮ್ಮ ಗುರಿಯನ್ನು ತಲುಪಲು ಸಾಧ್ಯ ಎಂದು ಭಾವೋದ್ವೇಗದಿಂದ ಎಲ್ಲರನ್ನು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಹುರಿದುಂಬಿಸಿದರು.

<u>ಡಾ. ಮೀರಾ ಶಿವಾ:</u> ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮವನ್ನು ಪ್ರಾಥಮಿಕ ಆರೋಗ್ಯದ ಅವನತಿ ಎಂದು ವಿವರಿಸಿದರು. ಆರೋಗ್ಯವೆಂಬುದು ವೈದ್ಯಕೀಯ ರಕ್ಷಣೆ ಎಂಬಂತಾಗಿದೆ. ವೈದ್ಯಕೀಯ ರಕ್ಷಣೆ ಎನ್ನುವುದು ಔಷಧೀಯ ಸಂಸ್ಥೆ ಎಂದಾಗಿದೆ. ಹಳ್ಳಿಗಳಲ್ಲಿ ಇಂದು ಅಲೋಪತಿ ಔಷಧಿ ಸಿಗದೇ ಇರುವಲ್ಲಿ ವರದಕ್ಷಿಣೆಯ ಪಿಡುಗಿನ ನಂತರ ಎರಡನೇ ಸಾಮಾಜಿಕ ಪಿಡುಗು ವೈದ್ಯಕೀಯ ರಕ್ಷಣೆ. ಆರೋಗ್ಯ ರಕ್ಷಣೆಯು ನಿಧಾನವಾಗಿ ಜನರಿಂದ ಪ್ರತ್ಯೇಕಿಸಲ್ಪಟ್ಟು ವಿಮುಖಗೊಳ್ಳುತ್ತಿದೆ. ಆರೋಗ್ಯವು ಇಂದು ಮಹಿಳೆಯರ ಆರೋಗ್ಯ ಹಾಗೂ ಬಾಲ ಕಾರ್ಮಿಕತೆಯಲ್ಲಿ ಪ್ರತಿಬಿಂಬಿಸುತ್ತಿದೆ.

<u>ವಂದನಾ ಪ್ರಸಾದ್ :</u> ಮಕ್ಕಳ ರಕ್ಷಣಾ ಸೇವೆಗಳ ಬಗ್ಗೆ ಮಾತನಾಡುತ್ತಾ, ಇಂದು ನಾವು ಮಕ್ಕಳ ರಕ್ಷಣೆ, ಆರೋಗ್ಯ, ಶಿಕ್ಷಣದ ಮಾತು ಬಂದರೆ ನಮ್ಮಲ್ಲಿ ಹಣವಿಲ್ಲವೆಂದು ಜಾರಿಕೊಳ್ಳುವ ಕಟುಸತ್ಯವನ್ನು ತಿಳಿಸಿದರು. ಕೆಲಸ ಮಾಡುವ ಮಹಿಳೆಯರ ವಿಕಾಸಕ್ಕಾಗಿ ಈ ಕಾರ್ಯಕ್ರಮದಲ್ಲಿ ಹಣ ತೊಡಗಿಸುವುದು ಬಹಳ ಮುಖ್ಯ. ಪ್ರತೀ ಮಗುವಿಗೂ ತನ್ನ ತಾಯಿಯ ಹಾಲು ಸಿಗಬೇಕು. ಇದಕ್ಕೆ ವಿವಿಧ ಸೌಕರ್ಯದ ಅವಶ್ಯಕತೆ ಇದೆ. ಹಾಗೆಯೇ ಪ್ರತೀ ಮಗುವಿಗೂ ಪ್ರಾಥಮಿಕ ಶಿಕ್ಷಣದ ಅಗತ್ಯವಿದೆ. "ಬಾಲ್ ಮಜದೂರಿ" ವಿರುದ್ಧ ಕಾರ್ಯಕ್ರಮಗಳಾಗಬೇಕೆಂದು ಕರೆ ಕೊಟ್ಟರು.

ಜನವಾದಿ ಮಹಿಳಾ ಸಂಘಟನೆಯ <u>ಎಸ್. ಸುಧಾ</u> ಅವರು ತಮ್ಮ ಸಂಘಟನೆಯಲ್ಲಿ ಬಡವರಲ್ಲಿ ಬಡ ಮಹಿಳೆಯರಿರುವುದಾಗಿಯೂ ಅವರ ನಿಕಟ ಸಂಪರ್ಕದಿಂದ ಕಂಡುಕೊಂಡ ಸತ್ಯವನ್ನು ಈ ರೀತಿ

COMH 342
07527

ಹೇಳಿದರು. "ಮಹಿಳೆಯೊಬ್ಬಳು ಯುದ್ಧ ರಂಗಕ್ಕೆ ಪ್ರವೇಶಿಸಿದರೆ ಫಲಿತಾಂಶ ತಿಳಿದದ್ದೇ - ಜಯ/ಯಶ" ಯಾವುದೇ ಸಂಘರ್ಷದಲ್ಲಿ ಮಹಿಳೆ ಇಳಿದರೆ ಅಲ್ಲಿ ಖಂಡಿತ ಸಕಾರಾತ್ಮಕ ಬದಲಾವಣೆ ಆಗಿಯೇ ಆಗುತ್ತದೆ. ಉದಾ: ಸರಾಯಿ ವಿರುದ್ಧದ ಹೋರಾಟ. ಗ್ರಾಮೀಣ ಮಹಿಳೆಯರ ಹೋರಾಟದ ಮನೋಭಾವನೆ, ಶಕ್ತಿಯನ್ನು ಎಂದಿಗೂ ಅಲ್ಲಗಳೆಯಲು ಸಾಧ್ಯವಿಲ್ಲ.

ಟ್ರೇಡ್ ಯುನಿಯನ್‌ನ ಮಹಿಳಾ ಪ್ರತಿನಿಧಿ <u>ಅಮರಜೀತ್ ಕೌರ್</u> ತಮ್ಮ ಮಾತಿನಲ್ಲಿ, ನೀತಿ ನಿಯಮಗಳನ್ನು ಯಾರಿಗಾಗಿ ಮಾಡಲಾಗುತ್ತಿದೆಯೋ ಅವರಿಗೆ ಅದರ ಅರಿವೇ ಇರುವುದಿಲ್ಲ. ಅವರನ್ನು ಕೇಳುವುದಿಲ್ಲ. ಎಲ್ಲಿಯವರೆಗೆ ಅಸಮಾನತೆ ಅಳಿಸುವುದಿಲ್ಲವೋ ಅಲ್ಲಿಯವರೆಗೆ ಜನರ ಸಹಕಾರ ಸಿಗಲಾರದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

<u>ಡಾ. ರವಿನಾರಾಯಣ್</u> : ವೈದ್ಯರು ಹಾಗೂ ದಾಯಿಗಳು ಕೇವಲ ತಮ್ಮ ವೃತ್ತಿಯನ್ನು ಮಾತ್ರ ನಂಬದೇ ಅವರ ಮೇಲೆ ಮಾತ್ರ ಅವಲಂಬಿತವಾಗದೇ ಜನರ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಾರೋ ಆಗ ಮಾತ್ರ "ಎಲ್ಲರಿಗೂ ಆರೋಗ್ಯ" ವೆಂಬ ಮಾತಿಗೆ ಯಶ ಸಿಗುತ್ತದೆ. ಇನ್ನು ಕೆಲವು ಕೈಗೊಳ್ಳಬೇಕಾದ ಕ್ರಮಗಳನ್ನು ಘೋಷಿಸಿದರು. ಅವುಗಳು -

1. ಅಗತ್ಯಕ್ಕೆ ತಕ್ಕಂತೆ/ಅವಶ್ಯಕತೆಗನುಗುಣವಾಗಿ ವೈದ್ಯರು ಹಾಗೂ ದಾಯಿಗಳನ್ನು ತಯಾರು ಮಾಡಬೇಕು.
2. ಹೆಚ್ಚಿನ ವೈದ್ಯಕೀಯ ವಿದ್ಯಾಲಯಗಳನ್ನು ತೆರೆಯಬಾರದು.
3. ಎಲ್ಲ ರೀತಿಯ ವೈದ್ಯ ಪದ್ಧತಿಯನ್ನು ಗೌರವಿಸಬೇಕು.
4. ನಮಗೆ ವಿಶೇಷ ತಜ್ಞರು ಹಾಗೂ ವೈದ್ಯರಿಗಿಂತ ಹೆಚ್ಚಾಗಿ ಆರೋಗ್ಯ ಕಾರ್ಯಕರ್ತರ ಮತ್ತು ದಾಯಿಯರ ಅವಶ್ಯಕತೆ ಇದೆ.
5. ವೈದ್ಯಕೀಯ ಶಿಕ್ಷಣವನ್ನು ಜಾತೀಯತೆಗೊಳಿಸುವದನ್ನು ನಿಲ್ಲಿಸಬೇಕು.
6. ಎಲ್ಲ ವೈದ್ಯರನ್ನು ಗ್ರಾಮಾಂತರ ಪ್ರದೇಶಕ್ಕೂ ವರ್ಗಾಯಿಸಬೇಕು.
7. ಬೇರೆ ಜನರ ಅಗತ್ಯತೆಗಳ ಬಗ್ಗೆ ಕಾಳಜೀ ಇರುವ ತಜ್ಞರ ಅವಶ್ಯಕತೆ ಇದೆ.

ನಂತರ ಬಿಜಿವಿಎಸ್ ನ <u>ಕೃಷ್ಣಕುಮಾರ್</u> ಅವರು ತಮ್ಮ ಮಾತಿನಲ್ಲಿ ಜನರ ಹತ್ತಿರ ಸಮಸ್ಯೆ ಮಾತ್ರ ಅಲ್ಲ ಸಮಾಧಾನ/ಪರಿಹಾರ ಕೂಡ ಇದೆ. ಜನರಲ್ಲಿ ಪ್ರಾರಂಭವಾದ ಸಂವಾದವನ್ನು ಬೆಳೆಸಬೇಕಾಗಿದೆ. ಆರೋಗ್ಯ, ನೀರು, ಶಿಕ್ಷಣ ಇತ್ಯಾದಿಗಳು ಬಡಜನರ ಅಜೆಂಡಾದಲಿಲ್ಲ. ಅವುಗಳನ್ನು ಎಳೆದು ತರಬೇಕಾಗಿದೆ. ಎಲ್ಲಿ ಸಂಘಟನೆ ಇದೆಯೋ ಅಲ್ಲಿ ಸಮಾಧಾನ/ಪರಿಹಾರ ಖಂಡಿತ ಇದೆ ಎಂದು ಸಂಘಟನಾ ಶಕ್ತಿಯ ಬಗ್ಗೆ ತಮಗಿರುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಇನ್ನು ಹಲವಾರು ವ್ಯಕ್ತಿಗಳು ಈ ರೀತಿಯ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನಂತರ ಕೆಲವು ಸಾಮಾನ್ಯ ಶಿಫಾರಸ್ಸುಗಳನ್ನು ಒಮ್ಮತದಿಂದ ಮಾಡಲಾಯಿತು.

1. ಎಎನ್‌ಎಂ ಅವರಿಗೆ ಕೊಡುವ ತರಬೇತಿಗಳು ಸ್ಥಳೀಯ ಭಾಷೆಯಲ್ಲಿರಬೇಕು.
2. ಎಎನ್‌ಎಂ ಅವರ ವಾಸಸ್ಥಾನ ಪಿಹೆಚ್‌ಸಿ ಗೆ ಹತ್ತಿರದಲ್ಲಿರಬೇಕು.
3. ಸರ್ಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ನಡುವೆ ಸಂಯೋಜನೆ ಬರಬೇಕು.
4. ಬೃಹತ್ ಪ್ರಮಾಣದ ಅರಿವಿನ ಪ್ರಚಾರಾಂದೋಲನವಾಗಬೇಕು.

ನಂತರ ನಡೆದ ಶಾಮಿಯಾನ ಸೆಶನ್‌ಗಳಲ್ಲಿ 20 ವಿಷಯಗಳ ಕುರಿತು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಚರ್ಚೆಯಾಗಿ ಕೆಲವು ಸಲಹೆ ಹಾಗೂ ಶಿಫಾರಸ್ಸುಗಳನ್ನು ಕೈಗೊಳ್ಳುವಂತೆ ನಿರ್ಧರಿಸಲಾಯಿತು. ಚರ್ಚಿಸಿದ ವಿಷಯಗಳು ಈ ರೀತಿ ಇವೆ.

1. ಹೆಣ್ಣು ಭ್ರೂಣಹತ್ಯೆ - ಮಧ್ಯಸ್ಥಿಕೆ ವಹಿಸಲು ಮಾರ್ಗೋಪಾಯಗಳು.
2. ಚಿಕ್ಕ ಮಕ್ಕಳಲ್ಲಿ ಅಪೌಷ್ಟಿಕತೆ -
3. ವೈದ್ಯ ವೃತ್ತಿಯ ಪರಿಷ್ಕರಣೆ ಹಾಗೂ ನಿಯಂತ್ರಣ.
4. ಸಮಯದಾಯ ಆರೋಗ್ಯ ಕಾರ್ಯಕರ್ತರ ಹಾಗೂ ಸಮುದಾಯ ಆಧಾರಿತ ಆರೋಗ್ಯ ವ್ಯವಸ್ಥೆಯ ನಿರ್ವಹಣೆ.
5. ಅನಾಹುತಗಳ ನಿರ್ವಹಣೆ (ನೈಸರ್ಗಿಕ ವಿಕೋಪದ ನಿರ್ವಹಣೆ)
6. ಬಾಲಕಾರ್ಮಿಕತೆಯ ನಿರ್ಮೂಲನೆ.
7. ಹಿಂಸೆ ಮತ್ತು ಮಹಿಳೆಯರ ಆರೋಗ್ಯ.
8. ದೇಶೀಯ ಔಷಧಿ ಹಾಗೂ ಸಾಂಪ್ರದಾಯಿಕ ವೈದ್ಯ ಪದ್ಧತಿಗಳು.
9. ತರ್ಕಬದ್ಧವಾದ ಔಷಧಿ ಹಾಗೂ ರೋಗ ಲಕ್ಷಣಗಳು.
10. ಕುಡಿಯುವ ನೀರು, ಸ್ವಚ್ಛತೆ, ಪರಿಸರ ಹಾಗೂ ಆರೋಗ್ಯ.
11. ಆದಿವಾಸಿಗಳ ಹಾಗೂ ಸ್ಥಳಾಂತರಗೊಂಡವರ ಆರೋಗ್ಯ.
12. ಜನಸಂಖ್ಯಾ ನಿಯಂತ್ರಣ ಹಾಗೂ ಗರ್ಭ ನಿರೋಧಕ ಸಾಧನಗಳ ಆಯ್ಕೆಯ ವಿಷಯ.
13. ಲೈಂಗಿಕತೆ ಮತ್ತು ಏಡ್ಸ್ ಹಾಗೂ ಜನಸಂಖ್ಯಾ ನಿಯಂತ್ರಣ.
14. ವೈದ್ಯಕೀಯ ಹಾಗೂ ಚುಚ್ಚುಮದ್ದಿನ ಸಂಶೋಧನೆ.
15. ಸಣ್ಣ ಸಾಲ ಹಾಗೂ ಗ್ರಾಮೀಣ ಉದ್ಯಮಶೀಲತೆ.
16. ಸಾಂಕ್ರಾಮಿಕ ರೋಗಗಳ ನಿಯಂತ್ರಣ.
17. ಮಾನಸಿಕ ಆರೋಗ್ಯ.
18. ಆರೋಗ್ಯ ರಕ್ಷಣೆಗಾಗಿ ಮಾನವ ಸಂಪನ್ಮೂಲಾಭಿವೃದ್ಧಿ.
19. ವಿಶ್ವ ವಾಣಿಜ್ಯ ಸಂಸ್ಥೆ ಹಾಗೂ ಆರೋಗ್ಯ ನಿರ್ವಹಣೆ.
20. ಜನಾರೋಗ್ಯ ಸನ್ನದು.

ಈ ಚರ್ಚೆಗಳಲ್ಲಿ ತೆಗೆದುಕೊಂಡ ಕೆಲವು ನಿರ್ಧಾರಗಳು ಹಾಗೂ ಶಿಫಾರಸ್ಸುಗಳು.

- ಮಹಿಳೆಯರು ವೈಯಕ್ತಿಕವಾಗಿ ತಮ್ಮ ಆರೋಗ್ಯದ ಕಡೆಗೆ ಗಮನ ಹರಿಸುವಂತೆ ನೋಡಿಕೊಳ್ಳುವದು. - ದೈಹಿಕ ಹಾಗೂ ಮಾನಸಿಕ.
- ಆರೋಗ್ಯ ಇಲಾಖೆಯಲ್ಲಿರುವ ವ್ಯವಸ್ಥೆಗಳು ಸರಿಯಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳುವದು. ವ್ಯವಸ್ಥೆ ಇಲ್ಲದಲ್ಲಿ ಪಂಚಾಯ್ತಿಯಿಂದ ವ್ಯವಸ್ಥೆ ಮಾಡುವಂತೆ ಪ್ರಯತ್ನಿಸುವುದು.
- ವೈದ್ಯಕೀಯ ಸಂಸ್ಥೆಗಳು ಖಾಸಗೀಕರಣಗೊಳ್ಳದಂತೆ, ಸರ್ಕಾರವೇ ನೋಡಿಕೊಳ್ಳುವಂತೆ ಒತ್ತಡ ತರುವುದು.
- ಪ್ರತಿಯೊಂದು ಪಿ.ಹೆಚ್.ಸಿ. ಗೆ ಒಬ್ಬ ಮಹಿಳಾ ವೈದ್ಯರು ಇರುವಂತೆ ನೋಡಿಕೊಳ್ಳುವುದು.
- ಪ್ರತಿ ಹಳ್ಳಿಗೂ ಒಬ್ಬ ಎಎನ್‌ಎಂ ಇರುವಂತೆ ನೋಡಿಕೊಳ್ಳುವುದು.
- ಸ್ತ್ರೀಭ್ರೂಣ ಹತ್ಯೆ ಮಾಡದಂತೆ ಕಾನೂನು ತರುವುದು.
- ನಾರೀ ಅದಾಲತ್‌ಗೆ ಹೆಚ್ಚು ಒತ್ತು ಕೊಟ್ಟು ಕಾನೂನು ಮಹಿಳಾ ಪರವಾಗಿ ಇರುವಂತೆ ಒತ್ತಾಯ ತರುವುದು.
- ಆಸ್ತಿ ಹಕ್ಕುಗಳಲ್ಲಿ ಲಿಂಗ ತಾರತಮ್ಯ ಇರದಂತೆ ಕಾನೂನಿನಲ್ಲಿ ಮಾರ್ಪಾಡು ತರಲು ಮತ್ತು ಕಾನೂನು ಒಪ್ಪುವಂತೆ ಮಾಡುವುದು.
- ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವ ವೈದ್ಯರು ಹಾಗೂ ದಾಯಿಗಳು ಕಾನೂನು ಬಾಹಿರವಾಗಿ ಖಾಸಗೀ ಆಸ್ಪತ್ರೆ ತೆಗೆಯದಂತೆ ಕಾನೂನು ಹೊರಡಿಸುವುದು.

- ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಹಾಗೂ ಮಹಿಳಾ ಸಂಘಟನೆಗಳೇ ಔಷಧೋಪಚಾರವನ್ನು ನಿರ್ವಹಿಸುವಂತಾಗಬೇಕು.
- ಪ್ರತೀ ಹಳ್ಳಿಯಲ್ಲೂ ಆರೋಗ್ಯ ಪಾಲನಾ ಕೇಂದ್ರಗಳು ಇರಬೇಕು. ಅವುಗಳನ್ನು ಸಮುದಾಯದವರು ನಿರ್ವಹಿಸುವಂತಾಗಬೇಕು.
- ಎಎನ್‌ಎಂ ಗಳಿಗೆ ಸ್ಥಳೀಯ ಭಾಷೆಯಲ್ಲಿ ತರಬೇತಿಗಳಾಗಬೇಕು.
- ಹಳ್ಳಿಗಳಿಗೆ ಸುಲಭವಾಗಿ ಹೋಗಿ ಬರುವಂತಹ ಕಡೆಗೆ ಅಂದರೆ ಪಿ.ಹೆಚ್‌.ಸಿ. ಗೆ ಹತ್ತಿರದಲ್ಲಿ ಎಎನ್‌ಎಂ ಅವರ ವಾಸಸ್ಥಾನವಿರಬೇಕು.
- ಶಾಲೆ-ಕಾಲೇಜುಗಳ, ಮದುವೆಯಾಗದ ಎಷ್ಟೋ ಮಕ್ಕಳು ಏಡ್ಸ್ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಈ ರೋಗದ ಬಗ್ಗೆ ಹಳ್ಳಿ ಹಳ್ಳಿಗಳಲ್ಲಿ ಚಿತ್ರದ ಮೂಲಕ ತಿಳಿಸಿ ಹೇಳಬೇಕು ಮತ್ತು ಮಹಿಳೆಯರನ್ನು ಜಾಗ್ರತ ಗೊಳಿಸಬೇಕು.
- ಗ್ರಾಮ ಮಟ್ಟದಲ್ಲಿ ಆರೋಗ್ಯದ ಬಗ್ಗೆ ಇರುವ ನೀತಿ ನಿಯಮಗಳಲ್ಲಿ ಬದಲಾವಣೆ ತರಬೇಕು.
- ಕಾಮಾಲೆ ಕಾಯಿಲೆಗಳ ಲಸಿಕೆ, ಹಾವು - ಚೇಳು ಕಡಿದಾಗ ಆಸ್ಪತ್ರೆಯ ವೇಳೆಯನ್ನು ಗಮನಿಸದೆ ಔಷಧಿಗಳನ್ನು ಎಲ್ಲ ಪಿ.ಹೆಚ್‌.ಸಿ. ಯಲ್ಲಿ ಉಚಿತವಾಗಿ ಕೊಡುವಂತಾಗಬೇಕು.
- ರಕ್ತ, ಮಲ ಹಾಗೂ ಮೂತ್ರ ತಪಾಸಣಾ ಸೌಲಭ್ಯಗಳು ಎಲ್ಲ ಪಿ.ಹೆಚ್‌.ಸಿ. ಯಲ್ಲಿ ಸಿಗುವಂತಾಗಬೇಕು.
- ಎಲ್ಲಾ ಶಾಲಾ ಮಕ್ಕಳಿಗೆ 3 ತಿಂಗಳಿಗೊಮ್ಮೆ ಕಡ್ಡಾಯವಾಗಿ ಉಚಿತ ತಪಾಸಣೆ ಏರ್ಪಡಿಸಿ ಸೂಕ್ತ ಔಷಧೋಪಚಾರ ನೀಡುವಂತಾಗಬೇಕು.
- ಪ್ರತಿ ಪಿ.ಹೆಚ್‌.ಸಿ. ಯಲ್ಲಿ ರಕ್ತದ ಬ್ಯಾಂಕ್ ಸ್ಥಾಪನೆಯಾಗಬೇಕು.

ಎರಡನೇ ದಿನದ ಕಾರ್ಯಕ್ರಮವನ್ನು ಬೆಳಗಿನ 9-00 ಗಂಟೆಗೆ ಶಾಮಿಯಾನಾ ಸೆಶನ್‌ನೊಂದಿಗೆ ಪ್ರಾರಂಭಿಸಲಾಯಿತು. ಇದರಲ್ಲಿ ಒಟ್ಟು 4 ವಿಷಯಗಳ ಬಗ್ಗೆ ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ಗುಂಪು ಚರ್ಚೆಯಾಗಿ ಕೆಲವೊಂದು ತೀರ್ಮಾನ ಹಾಗೂ ಶಿಫಾರಸ್ಸುಗಳನ್ನು ಮಾಡಲಾಯಿತು. ಚರ್ಚಾ ವಿಷಯಗಳು ಈ ರೀತಿ ಇವೆ.

1. ಜನರ ಧ್ವನಿ.
2. ನೀತಿ - ನಿಯಮಗಳ ತುರ್ತು ಬದಲಾವಣೆ ಹಾಗೂ ಖಾಸಗೀ ವಲಯಗಳ ನಿಯಂತ್ರಣ.
3. ಮೂಲಭೂತ ಆರೋಗ್ಯ ಹಾಗೂ ಅದಕ್ಕೆ ಸಂಬಂಧಿಸಿದ ಸೇವೆಗಳಿಗಾಗಿ ಸಮುದಾಯ ಆಧಾರಿತ ನೇತೃತ್ವ.
4. ಆರೋಗ್ಯ ಸೇವೆಗಳ ವಿಕೇಂದ್ರೀಕರಣ ಹಾಗೂ ಪಂಚಾಯ್ತಿಗಳ ಪಾತ್ರ.

<u>ಜನರ ಧ್ವನಿ:</u> ಈ ವಿಷಯದ ಕುರಿತು ಆದ ಗುಂಪು ಚರ್ಚೆಯಲ್ಲಿ ಪ್ರತೀ ರಾಜ್ಯದವರೂ ತಾವು ಇದುವರೆಗೂ ಆರೋಗ್ಯದ ವಿಷಯದಲ್ಲಿ ಮಾಡಿದ ಪ್ರಯತ್ನ, ಸಾಧನೆಗಳು, ಕಂಡು ಬಂದ ಸಮಸ್ಯೆಗಳು, ಪರಿಹಾರಕ್ಕಾಗಿ ಕೈಗೊಂಡ ಮಾರ್ಗೋಪಾಯಗಳು, ಅದಕ್ಕಾಗಿ ಜನರಿಂದ ಬಂದ ಅಭಿಪ್ರಾಯಗಳು, ಪರಿಹರಿಸಲು ಸಾಧ್ಯವಾಗದೇ ಉಳಿದಂತಹ ವಿಷಯಗಳು ಕುರಿತು ಹಂಚಿಕೆ ಹಾಗೂ ಚರ್ಚೆಗಳಾದವು. ಕೆಲವೊಂದು ಸಮಸ್ಯೆಗಳಿಗೆ ಪರಿಹಾರವನ್ನೂ ಸೂಚಿಸಲಾಯಿತು.

ಒರಿಸ್ಸಾ, ತಮಿಳುನಾಡು, ಕೇರಳ, ಕರ್ನಾಟಕ, ತ್ರಿಪುರಾ, ಪಶ್ಚಿಮ ಬಂಗಾಳ ಹಾಗೂ ಆಂಧ್ರಪ್ರದೇಶದವರ ಹಂಚಿಕೆಯಿಂದ ಬಂದಂತಹ ಮುಖ್ಯ ಅಂಶಗಳು -

- ಮೂಲ ರಚನಾ ವ್ಯವಸ್ಥೆಯಲ್ಲಿ ಕೊರತೆ.
- ಸಬ್‌ಸೆಂಟರ್‌ಗಳು ತೀರಾ ಕಡಿಮೆ ಇರುವುದು.

- ಕೆಲಸದ ವೇಳೆ ಬೆಳಗಿನ 8 ಗಂಟೆಗಿದ್ದರೂ ಸಿಬ್ಬಂದಿಗಳು ತಮಗೆ ಬೇಕಾದಾಗ ಬಂದು ಹೆಚ್ಚಿನ ಜವಾಬ್ದಾರಿ ವಹಿಸದೇ ಹೋಗುವುದು.
- ಪಿ.ಹೆಚ್.ಸಿ. ಯಲ್ಲಿ ಸೂಕ್ತವಾದ ಔಷಧಿಗಳನ್ನು ಕೊಡದೇ ಇರುವುದರಿಂದ ಹೊರಗಡೆ ಖರೀದಿಸಬೇಕಾಗುತ್ತದೆ.
- ಕೆಲವು ಕಡೆ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದರೂ ಶೌಚಾಲಯಗಳ ಸಂಖ್ಯೆ ಅತೀ ಕಡಿಮೆ ಇರುವುದು. ಉದಾ: ಆಂಧ್ರದ ಸರ್ಕಾರಿ ಆಸ್ಪತ್ರೆಯಲ್ಲಿ 5000 ರೋಗಿಗಳಿಗೆ 200 ಶೌಚಾಲಯಗಳು.
- ಪಿ.ಹೆಚ್.ಸಿ. ಇರಬೇಕಾದ ಕಡೆ ಖಾಸಗೀ ಆರೋಗ್ಯ ಕೇಂದ್ರಗಳ ಸ್ಥಾಪನೆ. ಇದಕ್ಕಾಗಿ ಆಂಧ್ರದಲ್ಲಿ ಕೆಲವು ಸ್ವಯಂ ಸೇವಕರಿಗೆ ತರಬೇತಿ ನೀಡಿ ಸಿದ್ಧಗೊಳಿಸಲಾಗಿದೆ. ಪ್ರತೀ 20 ಕುಟುಂಬಗಳಿಗೆ ಒಬ್ಬ ಸ್ವಯಂ ಸೇವಕರಂತೆ 1000 ಸ್ವಯಂ ಸೇವಕರನ್ನು ಸುರಕ್ಷಿತ ಹೆರಿಗೆ, ಲಸಿಕೆ ಹಾಕುವುದು ಮಾತ್ರವಲ್ಲದೇ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಲ್ಲಿಯೂ ತರಬೇತಿಗೊಳಿಸಲಾಗಿದೆ.
- ತೆರೆದ ಗಟಾರ ಇರುವುದರಿಂದ ಸಾಂಕ್ರಾಮಿಕ ರೋಗಗಳ ಹರಡುವಿಕೆ.
- ಪಿ.ಹೆಚ್.ಸಿ. ಗಳಲ್ಲಿ ವೈದ್ಯರ ಹಾಗೂ ದಾಯಿಗಳ ಕೊರತೆ ಇದ್ದಲ್ಲಿ ಸರಿಯಾದ ಕಾರ್ಯ ನಿರ್ವಹಣೆ ಇಲ್ಲದಿರುವುದು.
- ಕುಟುಂಬ ಕಲ್ಯಾಣ ವಿಧಾನಗಳಿಗೆ ಮಹಿಳೆಯರನ್ನೇ ಗುರಿಪಡಿಸುವದು.
- ಕುಡಿಯುವ ನೀರಿನ ಸಮಸ್ಯೆ.
- ರಸ್ತೆ ಸರಿಯಾಗಿಲ್ಲದಿರುವುದರಿಂದ ಬಸ್ಸಿನ ಅನಾನುಕೂಲತೆ. ಇದರಿಂದಾಗಿ ದೂರದಲ್ಲಿರುವ ಪಿ.ಹೆಚ್.ಸಿ. ಯಿಂದ ಆರೋಗ್ಯ ಸೇವೆ ಸಮಯಕ್ಕೆ ಸರಿಯಾಗಿ ಲಭ್ಯವಾಗದಿರುವುದು.
- ವೈಯಕ್ತಿಕ ಹಾಗೂ ಸಮುದಾಯ ಸ್ವಚ್ಛತೆ ಬಗ್ಗೆ ಹೆಚ್ಚಿನ ಜಾಗೃತಿ ಇಲ್ಲದಿರುವುದರಿಂದ ಸಾಂಕ್ರಾಮಿಕ ರೋಗಗಳ ಹರಡುವಿಕೆ.
- ಪಿ.ಹೆಚ್.ಸಿ. ಯಲ್ಲಿ ಕೆಲವು ವೈದ್ಯಕೀಯ ಪರೀಕ್ಷೆಗಳ ಹಾಗೂ ಕೆಲವು ರಸಾಯನಿಕ ವಸ್ತುಗಳು ಹಾಗೂ ಔಷಧಿಗಳ ಕೊರತೆ. ಉದಾ: ಎಕ್ಸ್ ರೇ ಯಂತ್ರ, ಕಫ ಪರೀಕ್ಷೆ, ಮಲ, ಮೂತ್ರ ಪರೀಕ್ಷೆಯ ವ್ಯವಸ್ಥೆ..
- ಅಭಿವೃದ್ಧಿಯ ಹೆಸರಿನಲ್ಲಿ ಭೂಮಿಯನ್ನು ಕಳೆದುಕೊಳ್ಳಲಾಗಿದೆ. ನೀರಿನ ಸಂಪನ್ಮೂಲ ಕಡಿಮೆಯಾಗಿದೆ.
- ಸರ್ವೇಯಿಂದ ಬಂದ ಪರಿಣಾಮ - ಮಾನಸಿಕ ಅಸ್ವಸ್ಥತೆ ಹೆಚ್ಚು.
- ಎಷ್ಟೋ ಸರ್ಕಾರಿ ಆಸ್ಪತ್ರೆಗಳು ಖಾಸಗೀಕರಣಗೊಳ್ಳುತ್ತಿವೆ. ಉದಾ: ಕೇರಳದಲ್ಲಿರುವ ಗ್ಯಾಸ್ಟ್ರೋ ಎಂಟ್ರೈಟಿಸ್ ವಿಭಾಗ ಸ್ವಯತ್ತ ಸಂಸ್ಥೆಯಾಗಿ ಮಾರ್ಪಾಡಾಗಿದೆ. ಆ ಸಂಸ್ಥೆ ರೋಗಿಗಳಿಂದ ಪಡೆಯುವ ಶುಲ್ಕ ಹಾಗೂ ದಾನಗಳಿಂದ ಉತ್ತಮವಾದ ಯಂತ್ರೋಪಕರಣಗಳನ್ನು ಖರೀದಿಸುತ್ತಾರೆ. ಅತೀ ಅಗತ್ಯವಿರುವ ಮೂಲಭೂತ ಅವಶ್ಯಕತೆಗಳಿಗೆ ಹಣ ಹಾಕುವ ಬದಲು ಆಸ್ಪತ್ರೆಯ ಆಧುನಿಕತೆಗೆ ಖರ್ಚು ಮಾಡಲಾಗುತ್ತಿದೆ. ಆದರೂ ಸಹ ಆರೋಗ್ಯದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪಂಚಾಯ್ತಿಗಳು ಸಫಲವಾಗಿವೆ.
- ಮಹಿಳೆಯರ ಮೇಲೆ ಪುರುಷರ ದಬ್ಬಾಳಿಕೆ.
- ಮಾನಸಿಕ ಹಾಗೂ ದೈಹಿಕ ಅನಾರೋಗ್ಯದ ಬಗ್ಗೆ ಸಿಬ್ಬಂದಿಗಳಿಗೆ ಜಾಗೃತಿ ಮೂಡಿಸುವ ಅವಶ್ಯಕತೆ.
- ರೋಗ ತಡೆಯ ಬಗ್ಗೆ ಜಾಗೃತಿ ಮೂಡಿಸುವ ಅವಶ್ಯಕತೆ.

ಇವೆಲ್ಲವನ್ನೂ ಸರಿಪಡಿಸಲು ಮುಖ್ಯವಾಗಿ ಜನರಲ್ಲಿ ತಮ್ಮ ಆರೋಗ್ಯ ತಮ್ಮ ಕೈಯಲ್ಲಿದೆ ಎಂಬ ಅರಿವು ಬರುವಂತೆ ಮಾಡುವುದು, ಆರೋಗ್ಯ ಅವರ ಮೂಲಭೂತ ಹಕ್ಕು ಎಂಬುದನ್ನು ಮನಗಾಣಿಸುವುದು. ಗ್ರಾಮ ಪಂಚಾಯ್ತಿ ಹಾಗೂ ಸಮಯದಾಯವನ್ನು ಆರೋಗ್ಯದ ಪ್ರತಿಯೊಂದು ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಬೇಕು ಎಂಬ ಅಭಿಪ್ರಾಯ ಎಲ್ಲರಿಂದ ಬಂತು.

ನಂತರದ ಕಾರ್ಯಕ್ರಮ ದೊಡ್ಡ ಗುಂಪಿನಲ್ಲಿ ಎರಡು ದಿನಗಳಲ್ಲಿ ಚರ್ಚಿಸಿ ತಯಾರಿಸಿದ ಜನಾರೋಗ್ಯ ಸನ್ನದನ್ನು ಓದಿ ಹೇಳುವ ಮುಖಾಂತರ ಪ್ರಾರಂಭವಾಯಿತು. ಸನ್ನದಿಗೆ ಪ್ರತಿಕ್ರಿಯಿಸುತ್ತಾ, ಅಂತರಾಷ್ಟ್ರ ಸಮಾವೇಶದ ಅನುಸರಣಾ ಕಾರ್ಯಕ್ರಮದ ಬಗ್ಗೆ ಎಲ್ಲರ ಅಭಿಪ್ರಾಯ, ಸಲಹೆಗಳನ್ನು ಕೇಳಲಾಯಿತು. ಕೆಲವರು ಈ ಕೆಳಗಿನಂತೆ ಸಲಹೆಗಳನ್ನು ಸೂಚಿಸಿದರು.

- ಹೆಚ್ಚಿನ ಜನರ ಪ್ರತಿಕ್ರಿಯೆ ಮುಂದಿನ ಕೆಲಸವನ್ನು ಈಗಿನಂತೆಯೇ ಸಂಘಟನೆ ಮುಖಾಂತರ ಮಾಡಿಕೊಂಡು ಹೋಗಬೇಕು. ಅದಕ್ಕಾಗಿ ಈಗಿರುವಂತೆ ಆಯಾ ಹಂತಗಳಲ್ಲಿ ಸಂಯೋಜಕರ ಸಹಕಾರ ಮುಂದುವರಿಯಬೇಕು.
- ಈ ಒಂದು ಚಳುವಳಿಯನ್ನು "ಜನಸ್ವಾಸ್ಥ್ಯ ಅಭ್ಯಾನ್" ಎಂದು ಹೆಸರಿಸಬಹುದು.
- ಈ ಒಂದು ಸನ್ನದನ್ನು ಪ್ರತಿಯೊಬ್ಬ ಜನತೆಗೂ ತಲುಪುವಂತಾಗಬೇಕು.
- ಒಂದು ಅಥವಾ ಎರಡು ಸಮಸ್ಯೆಗಳನ್ನು ಕೈಗೆತ್ತಿಕೊಂಡು ದೇಶದಾದ್ಯಂತ ವರ್ಷ ಪೂರ್ತಿ ಅಭಿಯಾನ ಕೈಗೊಳ್ಳಬೇಕು. ಉದಾಃ ಭ್ರೂಣಹತ್ಯೆ, ಜನಸಂಖ್ಯಾ ನೀತಿ ಇತ್ಯಾದಿ.
- ಈ ಒಂದು ಸನ್ನದು ಎಲ್ಲರನ್ನು ಸಮ್ಮಿಲನಗೊಳಿಸುವ ಶಕ್ತಿಯಾಗಬೇಕು.
- ರಾಜ್ಯ ಹಾಗೂ ಜಿಲ್ಲಾ ತಂಡಗಳು ಈ ಸನ್ನದನ್ನು ಜನರಿಗೆ ತಲುಪಿಸಿ ಅವರಿಂದ ಬರುವ ಬೇರೆ ಬೇರೆ ಸಲಹೆಗಳನ್ನು ತರುವಂತಾಗಬೇಕು.
- ಅಭಿಯಾನದಲ್ಲಿ ತೊಡಗಿರುವವರೆಲ್ಲರ ಸಂಪರ್ಕವಿಟ್ಟುಕೊಳ್ಳಲು ವೆಬ್‌ಸೈಟ್ ಹಾಗೂ ನೀವ್ಸ್ ಲೆಟರ್‌ಗಳ ಬಳಕೆಯಾಗಬೇಕು.
- ಜನರ ಧ್ವನಿಯನ್ನು ನೀತಿ - ನಿಯಮಗಳ ಸಂವಾದದವರೆಗೂ ತೆಗೆದುಕೊಂಡು ಹೋಗಬೇಕು.
- ಅಭಿಯಾನವನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಲು ಬೇರೆ ಬೇರೆ ಜ್ವಲಂತ ವಿಷಯಗಳನ್ನು ತಕ್ಷಣ ಗುರುತಿಸುವ ಅವಶ್ಯಕತೆ ಇದೆ.
- ಈಗಾಗಲೇ ಲಕ್ಷಾಂತರ ಜನರು ಈ ಒಂದು ಪ್ರಕ್ರಿಯೆಯಲ್ಲಿ ತೊಡಗಿದ್ದು ಈಗ ವೃತಿಪರ ವೈದ್ಯರ ಜೊತೆ ಸಂವಾದ ನಡೆಸಬೇಕಾಗಿದೆ.
- ಈ ಒಂದು ಅಭಿಯಾನದ ಪರಿಣಾಮವನ್ನು ಬೇರೆ ಬೇರೆ ಹಂತಗಳಲ್ಲಿ ನಿಗಾ ಇಟ್ಟು ನಿರ್ವಹಣೆ ಮಾಡಬೇಕು. - Health watch.
- ಭೇಟಿ ಕೊಟ್ಟ ಆರೋಗ್ಯ ಕಾರ್ಯಕರ್ತರು ಸಹಿ ಮಾಡಲು ಅನುಕೂಲವಾಗುವಂತೆ ಆರೋಗ್ಯ ಪುಸ್ತಕ ಹಾಗೂ ಕ್ಯಾಲೆಂಡರ್‌ಗಳನ್ನು ಇಡಬೇಕು.
- ಪ್ರತಿಯೊಂದು ಹಳ್ಳಿ ಹಾಗೂ ಪ್ರತಿಯೊಂದು ಓಣಿಯಲ್ಲಿ ಜನಸ್ವಾಸ್ಥ್ಯ ಅಥವಾ ಜನಾರೋಗ್ಯ ಸಮಿತಿಯನ್ನು ರಚಿಸಬೇಕು.
- "ಸ್ವಾಸ್ಥ್ಯ ಸಾಥಿ" ಆಗಬೇಕು (ಶಿಕ್ಷಣ, ಸೇವೆ, ಸಂವಾದ) - 1. ಜನರಿಗೆ ಶಿಕ್ಷಣ ಕೊಡಬೇಕು. 2. ಎಲ್ಲಿ ಸಾಧ್ಯವೋ ಅಲ್ಲಿ ಸೇವೆ ಕೊಡಬೇಕು. 3. ಜನರೊಂದಿಗೆ ಸಂವಾದ ಮಾಡಬೇಕು.

ಅನುಸರಣಾ ಅಂಶಗಳೊಂದಿಗೆ ಮುಕ್ತಾಯವಾದ ಸಮಾವೇಶ 3-00 ಗಂಟೆಗೆ ಕಲ್ಕತ್ತಾದ ವಿಶ್ವವಿದ್ಯಾಲಯ ದಿಂದ ನಗರದ ಪ್ರಮುಖ ಬೀದಿಗಳಾದ ಕಾಲೇಜ್ ಬೀದಿ, ಬೌಬಜಾರ್, ಸುಬೋಧ ಮಲ್ಲಿಕ್ ಸ್ಕೇರ್, ಎಸ್.ಎನ್. ಬ್ಯಾನರ್ಜಿ ರೋಡ್, ಚೌರಂಗೀ, ರಾಣಿ ರಶಮೋನಿ ರೋಡ್ ಮೂಲಕ ಹಾಯ್ದು, ಇಂದಿರಾ ಗಾಂಧಿ ಸರಣಿಯ ಹತ್ತಿರ ಕೊನೆಗೊಂಡಿತು. ಸುಮಾರು 10-15 ಸಾವಿರ ವಿವಿಧ ಕ್ಷೇತ್ರಗಳಿಂದ ಬಂದಂತಹ ಜನರ ಈ ರ್‍ಯಾಲಿ ಬಹಳಹುರುಪು ಹಾಗೂ ಉತ್ಸಾಹದಿಂದ ಘೋಷಣೆಗಳನ್ನು ಒಕ್ಕೊರಲಿನಿಂದ ಕೂಗುತ್ತಾ ಸಾಮಾನ್ಯ ಜನರ ವಿರುದ್ಧ ಇರುವ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಇರುವ ಅಭಿಪ್ರಾಯವನ್ನು ತಮ್ಮ ತಮ್ಮ ಭಾಷೆಯಲ್ಲಿ ವ್ಯಕ್ತಪಡಿಸಿದರು. ಭಾಷೆ ಬೇರೆಯಾದರೂ ಸಹ ಎಲ್ಲರ ಕೂಗೂ ಒಂದೇಆಗಿತ್ತು. ಕೊನೆಯಲ್ಲಿ ರ್‍ಯಾಲಿಯನ್ನುದ್ದೇಶಿಸಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾದ ಶ್ರೀ ಜ್ಯೋತಿಬಸು ಮಾತನಾಡಿ, ತಮ್ಮ ಸಹಕಾರ ಹಾಗೂ ಪ್ರೋತ್ಸಾಹವನ್ನು ನೀಡಿದರು. ನಂತರ ನಡೆದ ರಾಜ್ಯ ಸಮಾ ವೇಶದ ತಂಡದ ಸಮಾಲೋಚನೆಯೊಂದಿಗೆ ರಾಷ್ಟ್ರೀಯ ಸಮಾವೇಶ 9-00 ಗಂಟೆಗೆ ಕೊನೆಗೊಂಡಿತು.

# ಅಂತರಾಷ್ಟ್ರ ಜನಾರೋಗ್ಯ ಸಮಾವೇಶದ ವರದಿ - ಢಾಕಾ

ದಿನಾಂಕಃ 3-12-2000 ದಿಂದ 8-12-2000 ವರೆಗೆ.






ladesh



# ಅಂತರಾಷ್ಟ್ರ ಜನಾರೋಗ್ಯ ಸಮಾವೇಶದ ವರದಿ

ಕಲ್ಕತ್ತಾ ಸಮಾವೇಶ ಮುಗಿಸಿ ಜನಾರೋಗ್ಯ ತಂಡದ ಎಲ್ಲ ಸದಸ್ಯರಿಂದ ಹಾರ್ದಿಕವಾಗಿ ಬೀಳ್ಕೊಂಡು ಭಾರತದ 180 ಪ್ರತಿನಿಧಿಗಳನ್ನೊಳಗೊಂಡ ನಮ್ಮ ತಂಡ ಬಾಂಗ್ಲಾದೇಶದ ಸವರ ಗ್ರಾಮವನ್ನು ದಿನಾಂಕ 3-12-2000 ದಂದು ಬೆಳಗಿನ ಜಾವ 4-00 ಗಂಟೆಗೆ ಬಂದು ತಲುಪಿದೆವು. ಒಂದೆರಡು ಗಂಟೆಗಳ ವಿಶ್ರಾಂತಿಯ ನಂತರ ಮುಂದಿನ ಕಾರ್ಯಕ್ರಮದ ರೂಪರೇಷೆಗಳನ್ನು ತಿಳಿಯಲು 9-30 ಕ್ಕೆ ಎಲ್ಲರೂ ಸೇರಿದೆವು. ಮೊದಲ ದಿನದ ಕಾರ್ಯಕ್ರಮ ಅನೌಪಚಾರಿಕವಾಗಿದ್ದರಿಂದ ಶ್ರೀ ರವಿ ನಾರಾಯಣ ಅವರಿಂದ ಒಂದು ದಿನದ ಕಾರ್ಯಕ್ರಮದ ಪರಿಚಯವನ್ನು ಮಾಡಿಕೊಳ್ಳಲಾಯಿತು. ನಂತರ ಸಭೆ ನಡೆಯುವ ಸ್ಥಳವಾದ ಗೋನೋಸ್ವಾಸ್ಥ ಕೇಂದ್ರಕ್ಕೆ ಹೋಗಿ ನೋಂದಣಿ ಮಾಡಿಕೊಳ್ಳಲಾಯಿತು. ಸವರ ಗ್ರಾಮದ ಕೂಲಿಕಾರ ಮಹಿಳೆಯರೊಂದಿಗೆ ನಮ್ಮ ತಂಡ ಸಂಭಾಷಣೆ ನಡೆಸಿ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

- ➢ ಇಲ್ಲಿಯ ಮಹಿಳೆಯರ ಸ್ಥಿತಿಗತಿ ಭಾರತ ದೇಶದ ಗ್ರಾಮೀಣ ಮಹಿಳೆಯರಿಗೆ ಹೋಲಿಸಿದರೆ ಭಿನ್ನವಾಗಿಲ್ಲ. ಉದಾ: ಮಾಡುವ ಕೆಲಸ ಹಾಗೂ ಸಮಯ ಒಂದೇ ಆದರೂ ಪುರುಷರಿಗೂ ಹಾಗೂ ಮಹಿಳೆಯರಿಗೂ ಕೂಲಿಯಲ್ಲಿ ಅಸಮಾನತೆ. ಹೆಂಗಸರಿಗೆ - 70 ರೂ. ಗಂಡಸರಿಗೆ 120 ರೂ. ದಿನಕ್ಕೆ.
- ➢ ಇಲ್ಲಿಯೂ ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ ಜಾರಿಯಲ್ಲಿದೆ. 8 ವರ್ಷದವರಿದ್ದಾಗಲೇ ಮದುವೆ ಮಾಡುವರು.
- ➢ ತಾವು ಗಳಿಸಿದ ಹಣವನ್ನು ಗಂಡನ ಕೈಯಲ್ಲಿ ಕೊಟ್ಟು ನಿರ್ಧಾರ ಶಕ್ತಿ ತಮ್ಮಲ್ಲಿಟ್ಟುಕೊಂಡಿಲ್ಲ.
- ➢ ಬುರ್ಕಾ ಪದ್ಧತಿ ಜಾರಿಯಲ್ಲಿದ್ದರೂ ಸಹ ಕೆಲಸಕ್ಕೆ ಹೋಗುವ ಸಮಯದಲ್ಲಿ ಹಾಕುವುದಿಲ್ಲ. ಇದರಿಂದ ಭಾರತದಂತೆ ಇಲ್ಲಿಯೂ ಸಹ ಚಲನಶೀಲತೆಗೆ ಇರುವ ಅಡೆತಡೆಯನ್ನು ತಿಳಿಯಬಹುದು.
- ➢ ಇಲ್ಲಿಯೂ ಸಾಕ್ಷರತೆ ಎಂದರೆ ಕೇವಲ ಸಹಿ ಮಾಡುವ ಮಟ್ಟಿಗೆ ಮಾತ್ರ ಸೀಮಿತವಾಗಿದೆ. ಅದೂ ಸಹ 20 ಜನರಲ್ಲಿ 2 ಜನ ಸಹಿ ಮಾಡುವರು.
- ➢ ಭಾರತೀಯ ಗ್ರಾಮೀಣ ಮಹಿಳೆಯರಂತೆ ಇಲ್ಲಿಯ ಮಹಿಳೆಯರೂ ಗಂಡನ ಹಾಗೂ ಕೌಟುಂಬಿಕ ಹಿಂಸೆಗೆ ಒಳಪಟ್ಟಿದ್ದಾರೆ.

ಸಾಯಂಕಾಲ 5-00 ಗಂಟೆಗೆ ಗೊನೋ ಸ್ವಾಸ್ಥ ಕೇಂದ್ರದಿಂದ ಜ್ಯೋತಿರ್ ಸ್ಮಿಲೆಸೌಡ್ ಎಂಬ ರಾಷ್ಟ್ರೀಯ ಸ್ಮಾರಕ (1971 ರ ಯುದ್ಧದಲ್ಲಿ ಮಡಿದ ವೀರ ಯೋಧರ ನೆನಪಿಗಾಗಿ ಕಟ್ಟಿದ ಸ್ಮಾರಕ) ಕ್ಕೆ ಅಂದಾಜು 92 ರಾಷ್ಟ್ರಗಳ 1000 ಪ್ರತಿನಿಧಿಗಳನ್ನೊಳಗೊಂಡ ಪ್ರಭಾತ್‌ಫೇರಿಯ ಮೂಲಕ ಬಹಳ ಹುರುಪು, ಉತ್ಸಾಹದಿಂದ ಹೋಗಲಾಯಿತು. ಆ ಸಮಯದಲ್ಲಿ ಈ ಕೆಳಕಂಡ ಘೋಷಣೆಗಳನ್ನು ಒಕ್ಕೊರಲಿನಿಂದ ಕೂಗಿ ಸಾಮಾನ್ಯ ಜನರ ವಿರುದ್ಧ ಇರುವ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಇರುವ ಅಭಿಪ್ರಾಯವನ್ನು ತಮ್ಮ ತಮ್ಮ ಭಾಷೆಯಲ್ಲಿ ವ್ಯಕ್ತಪಡಿಸಿದರೂ ಸಹ

- People"s not profits.
- down with drug multination.
- "Health is a human rights."
- "Anti people globalisation" down down.
- "Privatisation, liberalisation" down down.
- "Food for all" we demand, "Safe drinking water" - we demand.
- "Health for all we" - demand.

ಎಲ್ಲರ ಕೂಗು ಒಂದೇ ಆಗಿತ್ತು (ಭಾಷೆ: ಕನ್ನಡ, ಇಂಗ್ಲೀಷ್, ಹಿಂದಿ, ಬೆಂಗಾಲಿ, ಅರೆಬಿಕ್, ಸ್ಪಾನಿಷ್ ಇತರೆ)

ಪ್ರಪಂಚದ ಐತಿಹಾಸಿಕ ಪ್ರಭಾತ್ ಫೇರಿಯಲ್ಲಿ ನಮ್ಮೊಂದಿಗೆ ಹಲವಾರು ಪತ್ರಕರ್ತರು ನಮ್ಮೊಳಗಿನ ಹಲವಾರು ಜನರೊಂದಿಗೆ ಸಂದರ್ಶನ ನಡೆಸಿ ಅವರ ಅಭಿಪ್ರಾಯಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಯಿತು.

- ಹದಗೆಡುತ್ತಿರುವ ಆರೋಗ್ಯ ಹಾಗೂ ಅದರಿಂದಾಗಿ ಸಾಮಾಜಿಕ ಹಾಗೂ ಲಿಂಗ ಅಸಮಾನತೆಗಳನ್ನು ಹೊಡೆದೋಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವ ಪ್ರತಿನಿಧಿಗಳ ಸಂಘದ ಸಂಕೇತ ಈ ಪ್ರಭಾತ್ ಫೇರಿಯಾಗಿತ್ತು. - ಡಾ. ಮೀರಾ ಶಿವಾ, ಆಲ್ ಇಂಡಿಯಾ ಡ್ರಗ್ ಆ್ಯಕ್ಷನ್ ನೆಟ್‌ವರ್ಕ್.
- ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ನೀತಿ-ನಿಯಮಗಳಲ್ಲಿ ಸೂಕ್ತ ಬದಲಾವಣೆ ತರುವ ಬೇಡಿಕೆ ಜನಾರೋಗ್ಯ ಸಭೆ - 2000 ದ ಮುಖ್ಯ ಉದ್ದೇಶವಾಗಿತ್ತು.
- ಆರೋಗ್ಯವೆಂಬುದು ಮಾನವರ ಮೂಲಭೂತ ಹಕ್ಕು ಎಂಬುದನ್ನು ವಿಶ್ವದ ಎಲ್ಲ ಜನತೆ ಒಟ್ಟಾಗಿ ಸೇರಿ ಪ್ರತಿಪಾದಿಸುವ ಅನಿವಾರ್ಯತೆ ಬಂದಿದೆ. ಸಮಾನತೆಯ ಹೋರಾಟ ಕೇವಲ ಜೈವಿಕ ಸಮಾನತೆಗಾಗಿ ಮಾತ್ರ ಅಲ್ಲ, ಸಮಾನ ಅವಕಾಶ ಹಾಗೂ ಸಮಾನ ಆಯ್ಕೆಗಾಗಿ - ಡಾ. ಗಾಸಮ ಇಸಾ, ಹೆಲ್ತ್ ಯುನಿಟ್ ಆಫ್ ದಿ ಅರಬ್ ರಿಸೋರ್ಸ್ ಕಲೆಕ್ಟಿವ್.
- ಸಾರ್ವತ್ರಿಕ ಆರೋಗ್ಯದ ಸಮಸ್ಯೆ ಇತರೆ ಎಲ್ಲ ಸಮಸ್ಯೆಗಳ ಮೂಲ ಬೇರಾಗಿದೆ. ಇದನ್ನು ಕಿತ್ತೊಗೆಯಲು ಜನತೆ ಹೇಗೆ ಸಂಘಟಿತರಾಗಿದ್ದಾರೆಂಬುದು ಕಂಡು ಬರುತ್ತದೆ. - ಇರಿಸ್ ಫಿಕ್ಸರ್ Jawoyn Assn of Australiya.
- ಪ್ರಾಥಮಿಕ ಆರೋಗ್ಯ ಜನರ ಮೂಲಭೂತ ಹಕ್ಕು ಎಂಬುದರಲ್ಲಿ ನಂಬಿಕೆ ಇದೆ. ಆದರೆ ಏನೂ ಮಾಡದ ಸರ್ಕಾರಕ್ಕಿಂತ ಈ ವಿಷಯದಲ್ಲಿ ಆಸಕ್ತಿ ಹಾಗೂ ಗುಂಪುಗಳ ಅನುಭವದಿಂದ ಕಲಿಯಲು ಇದೊಂದು ಒಳ್ಳೆ ಅವಕಾಶ. - ಮೊಹ್ಮದ್ ಮಸ್ರಿ Social progress in Lebenon.
- ಈ 5 ದಿನಗಳ ಸಮಾವೇಶದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಅಸಮಾನತೆ, ಬಡತನ, ಪರಿಸರ ಹಾಗೂ ಮಾನವರ ಉಳಿವು, ಆರೋಗ್ಯದ ವ್ಯವಸ್ಥೆಯಲ್ಲಿರುವ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲಾಗುವುದು. ಅಲ್ಮ ಆಟದ ಘೋಷಣೆಯಾದ "ಎಲ್ಲರಿಗೂ ಆರೋಗ್ಯ" ಎಂಬುದನ್ನು ಕಾರ್ಯಗತಗೊಳಿಸಲು ರೂಪರೇಷೆಗಳನ್ನು ಜನರ ಭಾಗವಹಿಸುವಿಕೆಯೊಂದಿಗಿನ ಬೇಡಿಕೆಯನ್ನು ರೂಪಿಸುವುದು. - W.H.O. ದ ಹಿಂದಿನ ಡೈರೆಕ್ಟರ್ ಜನರಲ್ ಆದ ಹಾಲ್ಪನ್ ಮೆಲ್ಹಾರ್.
- ಈ ಒಂದು ಸಂಘರ್ಷವನ್ನು ಇಲ್ಲಿಗೇ ಕೊನೆಗೊಳಿಸದೇ ಅತೀ ಹಿಂದುಳಿದ ಗ್ರಾಮೀಣ ಭಾಗಕ್ಕೂ ತಲುಪುವಂತಹ ನಿರಂತರವಾದ ಹೋರಾಟವಾಗಬೇಕು. ಈ ಒಂದು ಸಮಾವೇಶ ಪ್ರಪಂಚದ ಎಲ್ಲ ಭಾಗಗಳಿಂದ ಬಂದ ಜನ ಪ್ರತಿನಿಧಿಗಳ ಒಂದೇ ಚಿಂತನೆಯ ಕೂಗಾಗಿತ್ತು ಹಾಗೂ ಮುಂದಿನ ಹೆಜ್ಜೆಗೆ ಪ್ರೇರಣೆಯಾಗಿತ್ತು.
- ಚಿಕ್ಕ ಚಿಕ್ಕ ಮಕ್ಕಳನ್ನು ಕರೆದುಕೊಂಡು ಸ್ವಂತ ಹಣವನ್ನು ಖರ್ಚು ಮಾಡಿಕೊಂಡು ದೂರ ದೂರ ದೇಶಗಳಿಂದ ಬಂದು ಸಮಾವೇಶದಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ನೋಡಿದಾಗ ಈ ಒಂದು ಜಟಿಲವಾದ ಸಮಸ್ಯೆಯ ನಿರ್ಮೂಲನೆಗೆ ಅವರಿಗಿರುವ ಬದ್ಧತೆಯನ್ನು ಎತ್ತಿ ತೋರಿಸುತ್ತದೆ.
- ಈ ಒಂದು ಪ್ರಭಾತ್‌ಫೇರಿ ಆರೋಗ್ಯದ ಜಾಗತೀಕರಣವಲ್ಲ, ಮಾನವೀಯ ಜಾಗತೀಕರಣವನ್ನು ಪ್ರತಿಪಾದಿಸುತ್ತದೆ.
- ಇಂದಿನ ಜಟಿಲವಾಗುತ್ತಿರುವ ಆರೋಗ್ಯದ ಸಮಸ್ಯೆಗಳನ್ನು ಬಗೆಹರಿಸಲು ಆರೋಗ್ಯದ ಬಗ್ಗೆ ಕಳಕಳಿ ಇರುವ, ಹೋರಾಟಕ್ಕಿಳಿದಿರುವ ಜನರ ಸಮೂಹವನ್ನು ನೋಡಿ ಸಂತೋಷವಾಗುತ್ತಿದೆ.

ಗ್ರಾಮೀಣ ಜನತೆಯೊಂದಿಗೆ ಅವರ ಮೂಲಭೂತ ಸಮಸ್ಯೆಗಳೊಂದಿಗೆ ಸ್ಪಂದಿಸುತ್ತಿರುವ ನಾವು ಈ ಜನಾರೋಗ್ಯ ಕಾರ್ಯಕ್ರಮದಲ್ಲಿ ಪ್ರತೀ ಹಳ್ಳಿಯಲ್ಲೂ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಮಸ್ಯೆಗಳೇ ಹೆಚ್ಚಾಗಿವೆ. ಜಾಗತೀಕರಣದ ಪರಿಣಾಮವನ್ನು ಚರ್ಚಿಸುವ ವೇದಿಕೆ ಇದುವರೆಗೆ ಸಿಕ್ಕಿರಲಿಲ್ಲ. ಆದರೂ ಸೂಕ್ಷ್ಮವಾಗಿ ಗಮನಿಸಿದಾಗ, ವ್ಯವಸಾಯದಲ್ಲಿ ಆಗುತ್ತಿರುವ ಬದಲಾವಣೆಗೆ ಹೊಂದಿಕೊಳ್ಳುತ್ತಿರುವುದು ಉದಾ: ಒಳ್ಳೆ ಸರ್ಕಾರಿ ಗೊಬ್ಬರ ತಂದು ಹಾಕುವುದು ಒಂದು ಪ್ರತಿಷ್ಠೆಯ ಅಂಶ. ಅದರಿಂದಾಗುವ ಬದಲಾವಣೆಯೂ ಅರಿವಿಗೆ ಬಾರದಿರುವುದು ಈ ಅಂಶಗಳ ಬಗ್ಗೆ ಅನುಸರಣಾ ಕಾರ್ಯಕ್ರಮದಲ್ಲಿ ಚರ್ಚಿಸಿ ಒಂದು ಕ್ರಿಯಾತ್ಮಕವಾದ ಹೋರಾಟದಲ್ಲಿ ತೊಡಗಬಹುದೆನ್ನುವ ವಿಶ್ವಾಸ ಸಿಕ್ಕಿದೆ. ಬೇರೆ ಬೇರೆ ರಾಷ್ಟ್ರಗಳೊಂದಿಗೆ ಭಾಗವಹಿಸಿದ ಈ ಪ್ರಭಾತ್ ಫೇರಿ ನಮ್ಮ ನಮ್ಮ ರಾಷ್ಟ್ರಾಭಿಮಾನ ಹಾಗೂ ಬೇರೆ ರಾಷ್ಟ್ರಗಳೊಂದಿಗೆ ಇರುವ ಸ್ನೇಹ ಬಾಂಧವ್ಯವನ್ನು ಹಂಚಿಕೊಳ್ಳುವ ಅವಕಾಶ ಒದಗಿಸಿಕೊಟ್ಟಿತು.

## 2 ನೇ ದಿನದ ವರದಿ

### *ಆರೋಗ್ಯ ಜೀವನ ಮತ್ತು ಆರೋಗ್ಯಕರ ಜೀವನ*

ವಿಶ್ವದ ಐತಿಹಾಸಿಕ ಆರೋಗ್ಯ ಸಮಾವೇಶ ಬೆಳಗಿನ 9 ಗಂಟೆಗೆ ವಿವಿಧ ದೇಶದ ಹಾಡುಗಳೊಂದಿಗೆ ಉದ್ಘಾಟಿಸಲಾಯಿತು. 5 ದಿನಗಳ ಕೂಲಂಕಷ ಕಾರ್ಯಕ್ರಮದ ವಿವರಣೆ ಹಾಗೂ ಇತರೆ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಿದ ನಂತರ ಸಮಾವೇಶದ ಮುಂದಿನ ಕಾರ್ಯಕ್ರಮ ಪ್ರಾರಂಭವಾಯಿತು.

ನಂತರ Mr. ಖಾಸಿಮ್ ಚೌಧರಿ Co-ordinator of P.H.A. ಅವರು ಮಾತನಾಡುತ್ತಾ, ಎಲ್ಲರಿಗೂ ಆರೋಗ್ಯ ಎನ್ನುವ ಅಂಶ ಅಂತರಾಷ್ಟ್ರೀಯ ಮಟ್ಟದ ಅಭಿವೃದ್ಧಿಯಲ್ಲಿ ಎಲ್ಲರ ಚರ್ಚಾ ವಿಷಯವಾಗಬೇಕು. ವಿಶ್ವದ ಆರೋಗ್ಯವನ್ನು ಹಾಳು ಮಾಡುತ್ತಿರುವ ಜಾಗತೀಕರಣವನ್ನು ವಿರೋಧಿಸುತ್ತಿರುವ, ಜನಾಧಾರಿತ ಆರೋಗ್ಯ ಸೇವೆಯನ್ನು ದೊರಕಿಸುವ ನಿಟ್ಟಿನಲ್ಲಿ ಸಾಮೂಹಿಕ ಚಳುವಳಿಯನ್ನು ರೂಪಿಸುವ ಅಗತ್ಯವಿದೆ ಎಂದು ಈ ಕಾರ್ಯಕ್ರಮದ ಉದ್ದೇಶವನ್ನು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಮೊಜಾಂಬಿಕ ದೇಶದ ಪ್ರಧಾನ ಮಂತ್ರಿಗಳಾದ ಡಾ. ಫ್ಯಾಸ್ಕಲ್ ಮುಕುಂಬಿಯವರು ತಮ್ಮ ದೇಶದ ಬಗ್ಗೆ ಮಾತನಾಡುತ್ತಾ, ಶೇ.70ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಂತಹ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸುವ ಹೊಣೆಗಾರಿಕೆಯನ್ನು ಸರ್ಕಾರ ಹೊಂದಿದೆ. ಈ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಸಮಯದಾಯ ಸಕ್ರಿಯವಾಗಿ ಭಾಗವಹಿಸಿ ಯಾವ ರೀತಿಯ ಸೇವೆ ಬೇಕೆಂಬ ಯೋಜನೆಯನ್ನು ನಿರ್ದೇಶಿಸುವ ಪಾತ್ರ ಸಮುದಾಯದ್ದಾಗಬೇಕಾಗಿದೆ ಎಂದರು.

ನಂತರ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಅಥಿಯಾ ಅವರು ಆಸೆ ತನ್ನ ಮಿತಿಯನ್ನು ಮೀರಿ ಅಪಾಯದ ಗಂಟೆ ಬಡಿದಾಗ ನಾವು ಸೇರಿದ್ದೇವೆ. ಹೊಸ ಅಲೆಗಳಾದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ಈ ಅಂಶಗಳು ಎಲ್ಲರಿಗೂ ಆರೋಗ್ಯ ಎಂಬ ಮೂಲ ಉದ್ದೇಶವನ್ನೇ ಇಲ್ಲವಾಗಿಸಿದೆ. ಈ ನಿಟ್ಟಿನಲ್ಲಿ ನಾವು ಸೂಕ್ತಕ್ರಮ ಕೈಗೊಳ್ಳದಿದ್ದಲ್ಲಿ ಪರಿಸರದ ವ್ಯವಸ್ಥೆಯೇ ಅಸ್ತವ್ಯಸ್ತವಾಗುತ್ತದೆ. ಅನಾರೋಗ್ಯವನ್ನು ವ್ಯಾಪಾರೀಕರಣಗೊಳಿಸಿದ ಕೆಲವೇ ಜನರಿಂದ ಹಿಂದೂಡಲ್ಪಟ್ಟ ನಾವು ಈ ಜನಾರೋಗ್ಯ ಸಮಾವೇಶದಿಂದ ಈ ಪರಿಸ್ಥಿತಿಯ ಸುಧಾರಣೆಗೆ ಹೊಸ ಯೋಚನೆ ಹಾಗೂ ಹೊಸ ಚಿಂತನೆಗಳನ್ನು ಹುಟ್ಟುಹಾಕಬಹುದಾಗಿದೆ.

ಕೇರಳ ರಾಜ್ಯದ 4 ನೇ ಬಾರಿ ವಿಧಾನ ಸಭೆಗೆ ಆಯ್ಕೆ ಆಗಿ ಬಂದಿರುವಂತಹ ಗೋವಿಂದ ಪಿಳ್ಳೆಯವರು ಮಾತನಾಡುತ್ತಾ, ಕೇರಳ ರಾಜ್ಯ ಆರ್ಥಿಕವಾಗಿ ತೀರಾ ಬಡ ರಾಜ್ಯ. ಆದರೆ ಸಾಮಾಜಿಕ ಅಭಿವೃದ್ಧಿಯ ಸೂಚ್ಯಂಕಗಳಾದ ಶಿಕ್ಷಣ ಹಾಗೂ ಆರೋಗ್ಯದಲ್ಲಿ ಬಹಳ ಶ್ರೀಮಂತ ರಾಜ್ಯ. ಇದು ಕೇವಲ ಸರ್ಕಾರದ

ನೀತಿಯಿಂದ ಸಾಧಿಸಿದ್ದಲ್ಲ. ಜನರನ್ನು ಸಂಘಟಿಸಿ, ಸಕ್ರಿಯ ಭಾಗವಹಿಸುವಿಕೆಗೆ ಅವರಾಶ ಮಾಡಿಕೊಟ್ಟಿದ್ದಕ್ಕೆ ಕೇರಳವನ್ನು ಮಾದರಿ ರಾಜ್ಯವೆಂದು ಎಲ್ಲರೂ ಪರಿಗಣಿಸುವಂತಾಗಿದೆ. ಜಾಗತೀಕರಣದ ಪ್ರಭಾವದಿಂದಾಗಿ ಆರೋಗ್ಯ ಸೇವೆಯಲ್ಲಿ ಇದುವರೆಗೂ ಇದ್ದ ಸಬ್ಸಿಡಿಯಲ್ಲಿ ಕಡಿತಗೊಳಿಸಿ ಮುಂದಿನ ದುರಂತ ದಿನಗಳನ್ನು ಎದುರು ನೋಡಬೇಕಾಗಿದೆ.

ಒರಿಸ್ಸಾ ರಾಜ್ಯದ ಆರೋಗ್ಯ ಸಚಿವರಾದ ಶ್ರೀ ಪ್ರಸಾದ್ ಮಿಶ್ರಾ ಮಾತನಾಡುತ್ತಾ, ನಮ್ಮ ಭಾರತದಂತಹ ದೇಶಗಳು ದೀರ್ಘ ಕಾಲದಿಂದಲೂ ಆಯುರ್ವೇದ ಶಾಸ್ತ್ರದ ಪರಂಪರೆಯನ್ನು ಹೊಂದಿತ್ತು. ಈ ಪರಂಪರೆಯನ್ನು ಉಳಿಸಿ ಬೆಳೆಸುವಂತಾಗಬೇಕು. ಇದು ಬಡ ಜನರಿಗೂ ತಲುಪುವಂತಾಗಬೇಕು.

ನೋಬೆಲ್ ಪಾರಿತೋಷಕ ವಿಜೇತ ಸ್ಯಾನ್ ಫ್ರಾಂಟೈರ್ಸ್‌ನ ಜೇಮ್ಸ್ ಆರ್‌ಬಿನ್ಸ್ಕಿ ಮಾತನಾಡುತ್ತಾ, ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಅಗತ್ಯದ ಕುರಿತಂತೆ ಜಾಗತೀಕ ಚಳುವಳಿಯ ಅನಿವಾರ್ಯತೆ ಇದೆ. ಆದರೆ ಚಳುವಳಿಯ ಬಗ್ಗೆ ಸ್ಪಷ್ಟ ದೂರದೃಷ್ಟಿ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಧ್ವನಿ ಇರಬೇಕು. ಈ ನಿಟ್ಟಿನಲ್ಲಿ ನಮ್ಮ ಕಾರ್ಯ ಕ್ಷಮತೆಯನ್ನು ದಾನ ಮಾಡುತ್ತಿದ್ದೇವೆಂದುಕೊಳ್ಳದೇ ಬದಲಾವಣೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರೊಂದಿಗೆ ಗ್ರಾಮೀಣ ಮಟ್ಟದಲ್ಲಿ ನೇರವಾಗಿ ಜನರೊಂದಿಗೆ ನಿಕಟ ಸಂಪರ್ಕ ಹೊಂದಿ ಅವರ ಅನುಭವದಿಂದ ಬಂದಂತಹ ಕೆಲವು ಕೇಸ್‌ಸ್ಟಡಿಗಳನ್ನು ಹಂಚಿಕೊಳ್ಳಲಾಯಿತು.

ಇದರಲ್ಲಿ ಮುಖ್ಯವಾಗಿ ತಾಂಜಾನಿಯಾ ದೇಶದ ಕೇಸ್‌ಸ್ಟಡಿ - ಒಬ್ಬ ಗರ್ಭಿಣಿ ಮಹಿಳೆ ತೀರ ಬಡತನದ ಪರಿಸರದಿಂದ ಬಂದವಳು. ಆಸ್ಪತ್ರೆಗೆ ಹೋದಾಗ ಹಣವಿಲ್ಲದ ಕಾರಣದಿಂದ ಅವಳಿಗೆ ಔಷಧೋಪಚಾರ ಲಭ್ಯವಾಗದೇ ಮರಣ ಹೊಂದಿದ ಮಗುವಿಗೆ ಜನ್ಮ ಕೊಟ್ಟ ಉದಾಹರಣೆ.

ಬಾಂಗ್ಲಾದೇಶದ ಕೇಸ್‌ಸ್ಟಡಿ - 15 ವರ್ಷದ ಲಿಪಿ ಒಬ್ಬ ಸಾಮಾನ್ಯ ಬಡ ವಿದ್ಯಾರ್ಥಿನಿ. ಅವಳೆಂದೂ ತಾನು ವೇಶ್ಯೆಯಾಗುವ ಕನಸು ಕಂಡವಳಲ್ಲ. ಆಗಬಹುದೆಂದು ನಿರೀಕ್ಷಿಸಿರಲೂ ಇಲ್ಲ. ಆದರೆ ಅವಳ ತಾಯಿಯ ದುರಾಸೆಯ ಫಲವು ಅವಳನ್ನು ವೇಶ್ಯೆಯಾಗುವಂತೆ ಮಾಡಿತು. ಲಿಪಿಯ ಗೆಳತಿ ನರ್ಗಿಸ್ ಸೆಕ್ಸ್ ವರ್ಕರ್ ಆಗಿದ್ದಳು. ಆಕಸ್ಮಾತ್ ಗರ್ಭಿಣಿಯಾದಳು. ಅವಳಲ್ಲಿ ಹಣವಿಲ್ಲದ ಕಾರಣದಿಂದ ವೈದ್ಯರು ಚಿಕಿತ್ಸೆ ನೀಡಲಿಲ್ಲ. ಮುಂದಿನ ಕೆಲವೇ ಕ್ಷಣಗಳಲ್ಲಿ ನರ್ಗಿಸ್ ದುರ್ಮರಣಕ್ಕೀಡಾಗಿದ್ದಳು. ಲಿಪಿಯ ತಾಯಿಯ ವ್ಯಾಪಾರ ಅಷ್ಟೇನೂ ಇಲ್ಲದಾಗ ಅವಳು ಲಿಪಿಯನ್ನು ವೇಶ್ಯೆಯಾಗುವಂತೆ ಪ್ರೋತ್ಸಾಹಿಸಿ ಬಲವಂತ ಮಾಡಿದಳು. ರಮ್‌ಜಾನ್ ಹಬ್ಬಕ್ಕೆ ಹೊಸ ಸೀರೆಯ ಉಡುಗೊರೆ ಲಿಪಿಗೆ ಸಿಕ್ಕಿತು. ಇದು ಅವಳ ವೇಶ್ಯಾ ಜೀವನದ ಆರಂಭದ ಕಾಣಿಕೆ. ಇದರಿಂದ ಕುಪಿತಗೊಂಡ ಲಿಪಿ ತಾಯಿಗೆ ವಿಷವನ್ನು ಕೊಟ್ಟಾಗ ಅವಳ ಅಕ್ಕ ತಾಯಿಯನ್ನು ಬದುಕುಳಿಸಿ ಲಿಪಿಯಿಂದ ವೇಶ್ಯೆಯಾಗುವ ಭಾಷೆ ಪಡೆದಳು. ಈಗ ಲಿಪಿ ಒಬ್ಬ ಶ್ರೀಮಂತ ವೇಶ್ಯೆಯರಲ್ಲಿ ಒಬ್ಬಳು. ಅವಳ ತಾಯಿ ಈಗ ಪೋಲೀಸರ ಬಂಧಿ.

ಮಧ್ಯಾಹ್ನ ಊಟದ ನಂತರ 18 ವಿಷಯಗಳ ಕುರಿತು ಕನಕರೆಂಟ್ ಸೆಶನ್ಸ್ ಇದ್ದು ಪ್ರತೀ ಗುಂಪಿನಲ್ಲೂ ಒಂದು ವಿಷಯದ ಕುರಿತು ಬೇರೆ ಬೇರೆ ದೇಶದವರಿಂದ ವಿಷಯ ಮಂಡನೆ, ಚರ್ಚೆ ಹಾಗೂ ಸಲಹೆಗಳಿರುತ್ತಿದ್ದವು. ಕರ್ನಾಟಕದ ತಂಡ ಈ ಕೆಳಗಿನ ವಿಷಯಗಳ ಗುಂಪು ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿತ್ತು.

- ಜನಾರೋಗ್ಯಕ್ಕಾಗಿ ಜನರ ಸನ್ನದು.
- ಮಾನಸಿಕ ಆರೋಗ್ಯ.
- ಸಮುದಾಯ ನಿಯಂತ್ರಣಕ್ಕೆ ಹೋರಾಟ.
- ಆರೋಗ್ಯಕರ ವೃದ್ಧಾಪ್ಯ.
- ಮಹಿಳೆ ಮತ್ತು HIV, AIDS.

- ಆರೋಗ್ಯದ ಹಕ್ಕುಗಳು.
- ಆರೋಗ್ಯಕರ ಬಾಲ್ಯ.
- ಕಡೆಗಣಿಸಲ್ಪಟ್ಟ ಗುಂಪಿನ ಜನರ ಆರೋಗ್ಯ.

**ಆರೋಗ್ಯದ ಹಕ್ಕುಗಳು:**

ಈ ಗುಂಪು ಚರ್ಚೆಯಲ್ಲಿ ಮುಖ್ಯವಾಗಿ ಜನರ ಆರೋಗ್ಯದ ಹಕ್ಕುಗಳು, ರೋಗಿಯ ಹಕ್ಕುಗಳು, ಆರೈಕೆ/ಪೋಷಣೆಯ ವಿಷಯ, ಮಾನವೀಯ ಹಕ್ಕುಗಳು, ಹಕ್ಕುಗಳ ತತ್ವ, ಮೌಲ್ಯಗಳ ಬಗ್ಗೆ ಚರ್ಚಿಸಲಾಯಿತು. ಜೀವನದ ಹಕ್ಕು, ಆರೋಗ್ಯ ಹಕ್ಕು, ಗೌರವ ಘನತೆ ಪೂರ್ಣ ಜೀವನ ನಡೆಸುವ ಹಕ್ಕು, ಏಕಾಂತದ ಹಕ್ಕು, ಮಕ್ಕಳನ್ನು ಪಡೆಯುವ ನಿರ್ಧಾರದ ಹಕ್ಕು ಇವೆಲ್ಲವೂ ಮಾನವರ ಮೂಲಭೂತ ಹಕ್ಕುಗಳು. ಆದರೆ ಜನರಲ್ಲಿರುವ ಅನಕ್ಷರತೆ ಹಾಗೂ ಅಜ್ಞಾನದಿಂದಾಗಿ ಭಾರತದಲ್ಲಿ ಈ ಹಕ್ಕುಗಳ ಅನುಷ್ಠಾನವಾಗಿಲ್ಲವೆಂಬುದು ಆಫ್ರಿಕಾ ಪ್ರತಿನಿಧಿಯೊಬ್ಬರ ಅಭಿಪ್ರಾಯವಾಗಿತ್ತು.

ಆರೋಗ್ಯದ ಹಕ್ಕುಗಳ ಪರಿಕಲ್ಪನೆಯ ಬಗ್ಗೆ ವಿವರಿಸುತ್ತಾ, ಪ್ರತಿಯೊಬ್ಬ ರೋಗಿಯೂ ಆರೋಗ್ಯ ಪಾಲನಾ ಸೇವೆಯ ಉಪಯೋಗ ಪಡೆಯುವ ಹಕ್ಕಿದೆ. ಕರ್ತವ್ಯ ಪಾಲಕರು ವ್ಯಕ್ತಿಯಾಗಿರಬಹುದು ಅಥವಾ ಸಂಸ್ಥೆಯಾಗಿರಬಹುದು. ಮುಖ್ಯವಾಗಿ ಸಮಸ್ಯೆಯನ್ನು ಗುರುತಿಸಿ ಅದಕ್ಕೆ ಕಾರಣಗಳನ್ನು ಹುಡುಕಿ ಪರಿಹಾರ ಯಾರಿಂದ, ಹೇಗೆ ಸಾಧ್ಯ ಎಂಬುವನ್ನು ಯೋಚಿಸಬೇಕೆಂದು ತಿಳಿಸಿದರು.

ಭಾರತದ ACASH ಸಂಸ್ಥೆಯ ಅರುಣ್ ಬಾಲ್ ಕಣ್ಣಮ್ಮ ರಾಮನ್ ಅವರು ರೋಗಿಯ ಹಕ್ಕುಗಳ ಬಗ್ಗೆ, ಅವುಗಳನ್ನು ಪಾಲಿಸಲು ಅವರಿಗಿರಬೇಕಾದ ಅರಿವು ಹಾಗೂ ಜವಾಬ್ದಾರಿಗಳ ಬಗ್ಗೆ, ಅವುಗಳು ಉಲ್ಲಂಘನೆಯಾದ ಸಂದರ್ಭವನ್ನು ಎದುರಿಸುವ ಬಗ್ಗೆ ವಿವರಿಸಿದರು. ರೋಗಿಯ ಹಕ್ಕು ಈ ಕೆಳಗಿನ ಅಂಶಗಳನ್ನು ಪ್ರತಿಪಾದಿಸುವಂತಿರಬೇಕು.

- ರೋಗಿಗೆ ತನ್ನ ರೋಗಕ್ಕೆ ಸರಿಯಾದ ಚಿಕಿತ್ಸೆ ಸಿಕ್ಕಲ್ಲಿ ತನ್ನ ಹಕ್ಕಿನ ಬಗ್ಗೆ ಧ್ವನಿ ಎತ್ತುವ ಸಂದರ್ಭವೇ ಬರುವುದಿಲ್ಲ.
- ರೋಗಿ ಬಯಸುವುದು ತನ್ನ ರೋಗಕ್ಕೆ ಸಮಂಜಸವಾದ ವೆಚ್ಚದಲ್ಲಿ ಶೀಘ್ರ ಚಿಕಿತ್ಸೆ ಹಾಗೂ ಉಪಶಮನ.
- ರೋಗಿಗಳು ಆರೋಗ್ಯದ ಗ್ರಾಹಕರು - ತನ್ನ ಅನಾರೋಗ್ಯದ ಮಾಹಿತಿ ತನಗೆ ಒದಗುವಂತಿರಬೇಕೆಂದು ಬಯಸುವವರು.
- ಈ ಹಕ್ಕು ಉಪಶಮನವನ್ನು ಒದಗಿಸುವಂತಿರಬೇಕು.
- ಈ ಹಕ್ಕು ಮಾಹಿತಿ ಪಡೆಯಲು ಮುಕ್ತವಿರಬೇಕು - ಉದಾ: ರೋಗಿಯ ಪರೀಕ್ಷೆ ಏತಕ್ಕಾಗಿ, ಯಾವ ರೀತಿಯದು, ಯಾವ ರೀತಿಯ ಚಿಕಿತ್ಸೆ ಯಾವ ರೋಗಕ್ಕೆ, ಪರ್ಯಾಯ ಚಿಕಿತ್ಸೆಗಳೇನಾದರೂ ಇದ್ದರೆ ಇತ್ಯಾದಿ.
- ಆರೈಕೆಯ ಗುಣಮಟ್ಟದ ಮಾಹಿತಿ ರೋಗಿಗೆ ಇರಬೇಕು.

**ಇವುಗಳಿಗೆ ವ್ಯತಿರಿಕ್ತವಾಗಿ ಆರೈಕೆಯ ವಿಷಯದಲ್ಲಿ ಬಹಳಷ್ಟು ಉಲ್ಲಂಘನೆಯಾಗುತ್ತಿದೆ. ಉದಾ:**

- ಒಳ್ಳೆಯ ಆರೈಕೆಗೆ ಯಾವುದೇ ಕಾಯ್ದೆ, ಕಾನೂನುಗಳಿಲ್ಲ, ನಿಯಂತ್ರಣವಿಲ್ಲ.
- ಆರೋಗ್ಯ ಒದಗಿಸುವವರು ತಾವು ಪಡೆದ ತರಬೇತಿಯನ್ನು ಪರಿಣಾಮಕಾರಿಯಾಗಿ ಅಳವಡಿಸುವುದಿಲ್ಲ.
- ಬಹಳಷ್ಟು ಅಲೋಪತಿ ವೈದ್ಯರು ಇತರೆ ಔಷಧಿಗಳ ಬಳಕೆ ಮಾಡುತ್ತಾರೆ.

- ಆರೋಗ್ಯ ಒದಗಿಸಬೇಕಾದವರು ವಿದ್ಯಾಭ್ಯಾಸ ಹಾಗೂ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂಬ ಪರಿಕಲ್ಪನೆ ಇಲ್ಲ.
- ಆರೋಗ್ಯ ಒದಗಿಸುವುದು ವೈದ್ಯರ ಕೈಯಲ್ಲಿರದೇ ಈಗ ವೈದ್ಯಕೀಯ ಪ್ರತಿನಿಧಿಗಳ ಕೈಯಲ್ಲಿದೆ. (Redical Representation).
- ನಗರ ಪ್ರದೇಶಗಳನ್ನು ಹೊರತುಪಡಿಸಿ ಗ್ರಾಮೀಣಾ ಪ್ರದೇಶದಲ್ಲಿ ಅರ್ಹತೆಯುಳ್ಳ ದಾಯಿಗಳಿಲ್ಲ.

**ಈ ಉಲ್ಲಂಘನೆಗೆ ಮುಖ್ಯ ಕಾರಣಗಳನ್ನು ಚರ್ಚಿಸಲಾಯಿತು.**

- ರೋಗಿಗಳಿಗೆ ತಮ್ಮದೇ ಆದ ಹಕ್ಕಿದೆ. ತಾವೂ ವೈದ್ಯರನ್ನು ಪ್ರಶ್ನಿಸಬಹುದೆಂಬ ಅರಿವಿಲ್ಲದೇ ಇರುವುದು.
- ಕೆಲವೊಮ್ಮೆ ವೈದ್ಯರಿಂದಾಗುವ ಅನಾಹುತಗಳಿಗೆ ಪರಿಹಾರ ಗೊತ್ತಿಲ್ಲದೇ ಇರುವುದು.
- ನರ್ಸಿಂಗ್ ಹೋಂ ಮತ್ತು ಆಸ್ಪತ್ರೆಯ ಗುಣಮಟ್ಟ ಹೇಗಿರಬೇಕೆಂಬುದರ ಬಗ್ಗೆ ಮಾಹಿತಿ ಇಲ್ಲದಿರುವುದು.

**ಆರೋಗ್ಯಕ್ಕಾಗಿ ಇರುವ ಹಕ್ಕುಗಳು ಈ ಕೆಳಕಂಡ ಅಂಶಗಳನ್ನು ಹೊಂದಿರಬೇಕು.**

- ತತ್ವ (ತತ್ವ - ಆರೋಗ್ಯದ ಹಕ್ಕು ಎನ್ನುವುದು ಮಾನವರ ಮೂಲಭೂತ ಹಕ್ಕಿನ ಒಂದಂಶ)
- ಮೌಲ್ಯ
- ಜ್ಞಾನ ಮತ್ತು ಸಂಪರ್ಕ.

## 3 ನೇ ದಿನದ ವರದಿ

### *ಅಸಮಾನತೆ, ಬಡತನ ಹಾಗೂ ಆರೋಗ್ಯ*

ಎರಡನೇ ದಿನದ ಕಾರ್ಯಕ್ರಮ ಪ್ಯಾಲೆಸ್ಟೈನ್ ಹಾಗೂ ಯುರೋಪ್ ದೇಶದವರ ಹಾಡು ಹಾಗೂ ಐಕ್ಯತೆಗೆ ಸಂಬಂಧಿಸಿದ ಘೋಷಣೆಗಳ ಮುಖಾಂತರ ಪ್ರಾರಂಭವಾಯಿತು.

ಪಶ್ಚಿಮ ಬಂಗಾಳದ ಆರೋಗ್ಯ ಸಚಿವರಾದ ಪಾರ್ಥಾ ಡಿ. ಹಾಗೂ ನಿಕರಾಗುವಾ ದೇಶದ ಮರಿಯಾ ಹ್ಯಾಮಲಿನ್ ಜುನಿಗಾ ಅವರ ನೇತೃತ್ವದಲ್ಲಿ ವಿಶ್ವದಾದ್ಯಂತ ಜನರ ಆರೋಗ್ಯದ ಮೇಲೆ ಬಡತನ, ಅಸಮಾನತೆಗಳು ಹೇಗೆ ಪ್ರಭಾವ ಬೀರುತ್ತಿವೆ ಎಂಬುದನ್ನು ಆಫ್ರಿಕಾ, ಏಷಿಯಾ, ಯುರೋಪ್, ಲ್ಯಾಟಿನ್, ಅಮೇರಿಕಾ, ಮಿಡ್ಲ್ ಈಸ್ಟ್ ಹಾಗೂ ಪ್ಯಾಸಿಫಿಕ್ ದೇಶಗಳ ಕೇಸ್‌ಸ್ಟಡಿಗಳ ಮುಖಾಂತರ ತಿಳಿದುಕೊಳ್ಳಲಾಯಿತು.

**ನೇಪಾಳದ ಕೇಸ್‌ಸ್ಟಡಿ** - ಕಿತ್ತು ತಿನ್ನುವ ಬಡತನವಿರುವ ಮಹಿಳೆಯೊಬ್ಬಳು ಗರ್ಭಿಣಿ. ಅವಳ ಗಂಡ ಊರ ಗೌಡನಲ್ಲಿ ಜೀತಕ್ಕಿದ್ದಾನೆ. ಅವನ ತಂದೆ ಹಾಗೂ ಅಜ್ಜ ಕೂಡ ಜೀತದಾಳುಗಳು. ಅವನು ಆರಾಮ ಇಲ್ಲದೇ ದುಡಿಯಲೂ ಆಗದೇ ಮಲಗಿದ್ದಾನೆ. ಅವಳ ದುಡಿಮೆಯಿಂದಲೇ ಸಂಸಾರ ನೌಕೆ ಸಾಗಬೇಕು. ವೈದ್ಯಕೀಯ ಪರೀಕ್ಷೆಯ ನಂತರ ವೈದ್ಯರು ಅವಳಿಗೆ ಅಶಕ್ತತನವಾಗಿದೆ. ಒಳ್ಳೆಯ ಆಹಾರ ತೆಗೆದುಕೊಂಡು ವಿಶ್ರಾಂತಿ ಪಡೆಯಲು ಹೇಳಿದ್ದಾರೆ. ಇಲ್ಲದಿದ್ದಲ್ಲಿ ಅಶಕ್ತತನದಲ್ಲಿಯೇ ಪ್ರಸವಿಸಿದರೆ ತಾಯಿ ಮಗುವಿನ ಪ್ರಾಣಕ್ಕೆ ಅಪಾಯ. ದುಡಿದರೆ ಮಾತ್ರ ಊಟ ಕಾಣುವ ಜೀವಕ್ಕೆ ವಿಶ್ರಾಂತಿ ಎಲ್ಲಿ? ಬಡತನದ ಬೇಗೆ ತಾಯಿ ಮಗುವಿನ ಪ್ರಾಣ ತೆಗೆದುಕೊಂಡಿತು.

**ಕ್ಯೂಬಾದ ಕೇಸ್‌ಸ್ಟಡಿ** - ಶತಮಾನಗಳಿಂದ ಸಂಯುಕ್ತ ರಾಷ್ಟ್ರದವರಿಂದ ಅನುಭವಿಸಿದ ದಬ್ಬಾಳಿಕೆ, ಸಾಮ್ರಾಜ್ಯ ನಡವಳಿಕೆ, ಆಕ್ರಮಕಾರಿ ದಾಳಿ ಇವೆಲ್ಲವುಗಳನ್ನು ಮೆಟ್ಟಿ ನಿಂತು ಇಂದು ಸ್ವತಂತ್ರವಾದ ಪುಟ್ಟ

ಕ್ಯೂಬಾ ದೇಶ ಈ ಬದಲಾವಣೆಗೆ ಕಾರಣ ಜನಬಲ ಎಂಬುದನ್ನು ಚರಿತ್ರೆ ಕಲಿಸಿಕೊಟ್ಟಿದೆ ಎಂದು ಹೇಳಿದರು. ಲ್ಯಾಟಿನ್ ಅಮೇರಿಕಾದಲ್ಲೇ ಈ ಪುಟ್ಟ ದೇಶ ಯಾವ ದೇಶವೂ ಸಾಧಿಸದ ಪ್ರಗತಿಯನ್ನು ಪ್ರಾಥಮಿಕ ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿದೆ. ಈ ಸ್ಥಾನದಲ್ಲಿ ಇಂದು ನಿಂತು 93 ರಾಷ್ಟ್ರಗಳ 1500 ಜನಪ್ರತಿನಿಧಿಗಳ ಬೆಂಬಲ ಪಡೆಯಲು ನ್ಯಾಯಯುತವಾದ ಕ್ರಾಂತಿ, ಜನರಲ್ಲಿರುವ ಪ್ರತಿರೋಧವನ್ನು ತಡೆಯುವ ಶಕ್ತಿ, ಫೀಡೆಲ್ ಕ್ಯಾಸ್ಟ್ರೋನ ನಾಯಕತ್ವ ಇವೇ ಕಾರಣವಾಗಿವೆ ಎಂದು ಹಂಚಿಕೊಂಡರು. ಈ ಹಿಂದಿನ  ಮೂರು ದಶಕಗಳಲ್ಲಿ ಸಂಯುಕ್ತ ರಾಷ್ಟ್ರಗಳ ದಾಳಿಯಿಂದಾಗಿ ಅಂದಾಜು 67 ಬಿಲಿಯನ್ ಡಾಲರ್‌ನಷ್ಟು ಹಣವನ್ನು ಕ್ಯೂಬಾ ದೇಶ ಕಳೆದುಕೊಂಡಿದೆ ಮತ್ತು ಈ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಸಂಯುಕ್ತರಾಷ್ಟ್ರಗಳ ದಾಳಿಯ ಸಮಯದಲ್ಲಿ ಆರ್ಥಿಕ ದಿಗ್ಬಂಧನ ಹೆಚ್ಚಾಯ್ತು, ಲಕ್ಷಾಂತರ ಜನರು ಅನಕ್ಷರಸ್ಥರಾದರು, ಮಕ್ಕಳಿಗೆ ವಿದ್ಯಾಭ್ಯಾಸದ ಮುಕ್ತ ಅವಕಾಶವಿಲ್ಲವಾಯಿತು, ನಿರುದ್ಯೋಗ ತಾಂಡವವಾಡ ಲಾರಂಭಿಸಿತು, ಆರೋಗ್ಯದ ಮೇಲೆ ಭೀಕರ ಪರಿಣಾಮ ಬೀರಿತು, ಮಲೇರಿಯಾ, ಕಾಲರಾ, ಟಿ.ಬಿ., ಕರಳುಬೇನೆಗಳು ಹರಡಿಕೊಂಡವು, ಶಿಶು ಮರಣ ಸಂಖ್ಯೆ ಏರುತ್ತಾ ಹೋಯಿತು. ಸರಾಸರಿ ಆಯಸ್ಸು 65 ಕ್ಕಿತ್ತು. ಇವೆಲ್ಲವನ್ನೂ ಮೆಟ್ಟಿ ನಿಂತು ನಿರಂತರ ಪ್ರತಿರೋಧವನ್ನು ಎದುರಿಸಿ ಇಂದು ಸ್ವತಂತ್ರವಾಗಿದೆ. ಎಲ್ಲರಿಗೂ ಆರೋಗ್ಯ ಎಂಬ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಕ್ಯೂಬಾ ದೇಶ ಕೈಗೊಂಡ ಹೆಜ್ಜೆಗಳನ್ನು ಬೇರೆ ಯಾವುದೇ ದೇಶ ಕೈಗೊಂಡಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ಡೈರೆಕ್ಟರ್ ಜನರಲ್ ಆದ ಹಾಲ್ಡಲ್ ಮಾಲ್ಹರ್ ಪ್ರತಿಕ್ರಿಯಿಸಿದರು. ಪ್ರಾಥಮಿಕ ಆರೋಗ್ಯಕ್ಕಿರುವ ಪ್ರತಿಯೊಂದು ತತ್ವವನ್ನು ಅಳವಡಿಸಿದ ಒಂದೇ ದೇಶವೆಂದರೆ ಕ್ಯೂಬಾ ಎಂದು ಹೊಗಳಿದರು. ಉದಾ: ಮಲೇರಿಯಾ ಕಾಯಿಲೆ ಉಲ್ಬಣಿಸಿದ 24 ಗಂಟೆಗಳಲ್ಲಿ ಎಲ್ಲರನ್ನೂ ಸಂಘಟಿಸಿ ಹತೋಟಿಗೆ ತಂದರು.

ಅರ್ಥಶಾಸ್ತ್ರಜ್ಞರಾದ ಡೇವಿಡ್ ವುಡ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಕ್ಯೂಬಾ ದೇಶವು ಕೇವಲ ತನ್ನ ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಮಾತ್ರ ಒತ್ತು ಕೊಡದೇ ಜನರ ಕಲ್ಯಾಣಕ್ಕೆ ಆದ್ಯತೆ ಕೊಟ್ಟ ದೇಶವೆಂದು ವರ್ಣಿಸಿದರು. ಜೊತೆಗೆ ಆರೋಗ್ಯವೆಂದರೆ ಕೇವಲ ದೈಹಿಕ ಸದೃಢತೆ ಅಲ್ಲ, ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಸದೃಢತೆಯೂ ಹೌದು ಎಂದು ತಿಳಿಸಿದರು.

ಇರಾಕ್ ದೇಶದ ಒಬ್ಬ ಪ್ರತಿನಿಧಿ ಪ್ರತಿಕ್ರಿಯಿಸುತ್ತಾ, 1991 ರ ಗಲ್ಫ್ ಯುದ್ಧದ ಪರಿಣಾಮವಾಗಿ ಸಂಯುಕ್ತ ರಾಷ್ಟ್ರಗಳ ದಾಳಿ, ಆಕ್ರಮಣದಿಂದಾಗಿ ಜನರ ಆರೋಗ್ಯದ ಹಾಗೂ ಆರೋಗ್ಯ ಪಾಲನಾ ರಚನೆಯ ಮೇಲೆ ಭಯಂಕರ ಪರಿಣಾಮ ಬೀರಿರುವುದನ್ನು ವಿವರಿಸಿದರು. ಇದರಲ್ಲಿ ಮರಣ ಹೊಂದಿದ 1/2 ಮಿಲಿಯನ್ ಪ್ರಜೆಗಳಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು ಮತ್ತು ಮಕ್ಕಳು 1998-99 ರಲ್ಲಿ ಶಿಶು ಮರಣ ಪ್ರಮಾಣ 660 ಕ್ಕೇರಿತ್ತು. ಈ ಅವಧಿಯಲ್ಲಿ ಮಹಿಳೆಯರು ಅನೇಕ ದುರಂತಕ್ಕೆ ಬಲಿಯಾಗಬೇಕಾಯಿತು. ದವಸಧಾನ್ಯ ಹಾಗೂ ವೈದ್ಯಕೀಯ ಸೌಲಭ್ಯಗಳ ಕೊರತೆ ಉಂಟಾಯಿತು, ಆಸ್ಪತ್ರೆಗಳು ನಿಷ್ಕ್ರಿಯವಾದವು, ನಿರುದ್ಯೋಗ ಶೇ. 60 ಕ್ಕೇರಿತು. 1998 ರಲ್ಲಿ ಸಾರ್ವಜನಿಕ ಆರೋಗ್ಯ ಸೇವೆ ಖಾಸಗೀಕರಣಗೊಂಡಿತು, ಮಹಿಳೆಯರು ತಮ್ಮ ವೃತ್ತಿಯನ್ನು ತೊರೆದು ಬಲವಂತವಾಗಿ ಮನೆ ಸೇರಬೇಕಾಯಿತು. ಸಂಯುಕ್ತ ರಾಷ್ಟ್ರಗಳು  ಪ್ರಬಲವಾಗಿ ಹೇರಿರುವ ಒತ್ತಡಗಳನ್ನು ಸಡಿಲಿಸುವುದು, ಪ್ರಜಾ ಪ್ರಭುತ್ವವನ್ನು ಜಾರಿಗೆ ತರುವುದು ಮತ್ತು ಹೆಚ್ಚು ಹೆಚ್ಚು ಜನರ ಭಾಗವಹಿಸುವಿಕೆಯ ಮುಖಾಂತರ ಇವೆಲ್ಲ ದುರಂತಗಳಿಗೆ ಇರಾಕ್ 1991 ರ ಯುದ್ಧದ ನಂತರ  ಇತಿಶ್ರೀ ಹಾಡಿತು.

1971 ರಲ್ಲಿ ಸ್ವತಂತ್ರ ಹೊಂದಿದ ಬಾಂಗ್ಲಾದೇಶದ ಘಟನೆಯನ್ನು ಉದಾಹರಿಸುತ್ತಾ, ಜನ ಸಂಪನ್ಮೂಲ ಸಚಿವರು ಈ ಎಲ್ಲಾ ಬದಲಾವಣೆಗಳು ಜನರ ಬಲದಿಂದ ಮಾತ್ರ ಸಾಧ್ಯವಾಯಿತೆಂದು ಚರಿತ್ರೆಯು ತಮಗೆ ಕಲಿಸಿದ ಪಾಠವಾಗಿದೆ ಎಂದರು. ವಿಶ್ವದಾದ್ಯಂತ ಲಕ್ಷಾಂತರ ಜನರು ಮೂಲಭೂತ ಆರೋಗ್ಯ

ಪಾಲನೆಯಿಂದ ವಂಚಿತ ರಾಗಿದ್ದು ನೋಡಿದರೆ 1978 ರ ಆಲ್ಮಾಅಟಾ ಘೋಷಣೆಯಾದ "ಎಲ್ಲರಿಗೂ ಆರೋಗ್ಯ" ಎಂಬುದು ಕೇವಲ ಮರೀಚಿಕೆಯಾಗಿದೆ ಎಂದರು.

ನಂತರ ಉಗಾಂಡಾದ 9 ವರ್ಷದ ಬಾಲಕಿ ಹೆಚ್.ಐ.ವಿ. + ನಿಂದ ನರಳುತ್ತಿದ್ದು, ಅವಳ ತಾಯಿಯ ಮರಣದ ನಂತರ ಅಜ್ಜ-ಅಜ್ಜಿಯರೊಂದಿಗಿದ್ದು, ಅವಳ ರೋಗಕ್ಕೆ ಸ್ವಯಂ ಸೇವಾ ಸಂಸ್ಥೆಯ ನೆರವು ಪಡೆದದ್ದನ್ನು ಎನ್.ಜಿ.ಓ., ಟಿ.ವಿ. ಮುಖಾಂತರ ನೆರವು ಕೇಳಿದಾಗ, ಅಮೇರಿಕಾದ ವಿದ್ಯಾರ್ಥಿಗಳೂ ಸೇರಿದಂತೆ ಅನೇಕ ಜನರು ಅದಕ್ಕೆ ಪ್ರತಿಕ್ರಿಯಿಸಿ ಸಹಾಯ ಮಾಡಿದ್ದು, ಅವಳು ಚಿಕಿತ್ಸೆ ಪಡೆಯುತ್ತಿದ್ದು, ಅವಳ ಆರೋಗ್ಯ ಸುಧಾರಿಸುತ್ತಿದ್ದ ಬಗ್ಗೆ ಹಂಚಿಕೊಂಡರು.

ಅದೇ ರೀತಿ ಅಸಮಾನತೆ ಹಾಗೂ ಬಡತನ ಜನರ ಆರೋಗ್ಯದ ಮೇಲೆ ಹೇಗೆ ಪ್ರಭಾವ ಬೀರುತ್ತಿವೆ ಎಂದು ದಕ್ಷಿಣ ಆಫ್ರಿಕಾದ ಪ್ರತಿನಿಧಿಯೊಬ್ಬರು 80 ರ ದಶಕದಿಂದೀಚೆಗೆ ಹೆಚ್.ಐ.ವಿ. ಯಿಂದ 40 ಮಿಲಿಯನ್ ಜನರು ಬಳಲುತ್ತಿರುವುದನ್ನು ವಿವರಿಸಿದರು. ಇದರಲ್ಲಿ ಕೇವಲ ಶೇ. 20 ರಷ್ಟು ಜನರು ಮಾತ್ರ ಖಾಸಗೀ ವಿಮೆ ಹೊಂದಿದ್ದು, ಔಷಧೋಪಚಾರ ಪಡೆಯಬಲ್ಲವರಾಗಿದ್ದಾರೆ. ಉಳಿದವರ ಪಾಡೇನು ಎಂಬ ಪ್ರಶ್ನೆಯನ್ನಿಟ್ಟರು.

ಮಧ್ಯಾಹ್ನದ ಊಟದ ನಂತರ ನಡೆದ 18 ಕನಕರೆಂಟ್ ಸೆಶನ್‌ಗಳಲ್ಲಿ ಕರ್ನಾಟಕ ತಂಡ 9 ಗುಂಪು ಚರ್ಚೆಯಲ್ಲಿ ಭಾಗವಹಿಸಿತ್ತು. ಅವು ಈ ಕೆಳಗಿನಂತಿವೆ.

- ಆರೋಗ್ಯಕ್ಕಾಗಿ ಜನರ ಸನ್ನದು.
- ಆರೋಗ್ಯ ಸೇವಾ ಯೋಜನೆಯಲ್ಲಿ ಜನರ ಭಾಗವಹಿಸುವಿಕೆ.
- ಮಹಿಳೆಯ ಮೇಲೆ ಹಿಂಸಾಚಾರ.
- ಮಹಿಳೆಯರ ಮತ್ತು ಮಕ್ಕಳ ಆರೋಗ್ಯಕ್ಕೆ ಸಾಮಾಜಿಕ ಸಜ್ಜು.
- ಜಾಗತೀಕರಣ
- ಸಮುದಾಯ ಅಭಿವೃದ್ಧಿ ಮತ್ತು ಜನಾರೋಗ್ಯ.
- ಬಡತನ ಹಾಗೂ ಕಳಪೆ ಆರೋಗ್ಯ.
- HIV/STD/AIDS.

**ಮಹಿಳೆಯರ ಮತ್ತು ಮಕ್ಕಳ ಆರೋಗ್ಯಕ್ಕೆ ಸಾಮಾಜಿಕ ಸಂಘಟನೆ:** ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಪಾಲನೆಯಲ್ಲಿ ಸಮಾಜವನ್ನು ಸಂಘಟಿಸುವಲ್ಲಿ ಈ ಕೆಳಕಂಡ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ.

- ಮಾಹಿತಿ
- ಜನ ಸಮುದಾಯಕ್ಕೆ ತಲುಪಿಸುವುದು.
- ಪ್ರಭಾವ ಬೀರುವಿಕೆ.
- ಸಂಪರ್ಕ.
- ಬೆಂಬಲ.
- ಸಮಾಲೋಚನೆ.
- ಸಂಘಟನೆ.
- ಸ್ವಜವಾಬ್ದಾರಿ.
- ಪ್ರಚಾರ.
- ವರದಿ.

- ಸಂಯೋಜನೆ.
- ವಿವಿಧ ಸಂಘಟನೆಗಳೊಂದಿಗೆ ಜಾಲ ಬೆಳೆಸುವುದು.
- ಸಮುದಾಯದ ಭಾಗವಹಿಸುವಿಕೆ.
- ಪಾಲುದಾರಿಕೆ.
- ಮಾಧ್ಯಮಗಳು.
- ಜಾಗೃತಿ/ಅರಿವು.
- ನಿರ್ವಹಣೆ

ಬೇರೆ ಬೇರೆ ದೇಶಗಳಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ಅದರಲ್ಲೂ ಮುಖ್ಯವಾಗಿ ತಾಯಿ ಹಾಲೂಡಿಸುವ ಬಗ್ಗೆ ನಡೆಸಿದ ಪ್ರಚಾರ, ಕಾರ್ಯಕ್ರಮಗಳು ಉಪಯೋಗಿಸಿದ ಮಾಧ್ಯಮಗಳ ಬಗ್ಗೆ ಬೇರೆ ಬೇರೆ ದೇಶದವರು ಹಂಚಿಕೊಂಡರು ಭಾರತದ ಚೇತನಾ ಸಂಸ್ಥೆಯವರು ಇದರ ಕುರಿತು ನಡೆಸಿದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪ್ರಭಾತ್ ಫೇರಿ, ಬೀದಿನಾಟಕಗಳು, ತಾಯಂದಿರ ಸಭೆಗಳು, ಅತ್ತೆಯಂದಿರ ಸಭೆಗಳು, ಗಂಡಂದಿರೊಂದಿಗಿನ ಸಭೆಗಳು ಸಮುದಾಯವನ್ನು ಆಕರ್ಷಿಸುವಂತಿದ್ದವೆಂದು ಹಂಚಿಕೊಂಡರು.

ಬ್ರೆಜಿಲ್ ದೇಶದ ಒಂದು ಸ್ವಯಂ ಸೇವಾ ಸಂಸ್ಥೆಯವರು ಇದರ ಕುರಿತು ಬಟ್ಟೆಯಿಂದ ತಯಾರಿಸಿದ ಗೊಂಬೆಯೊಂದು ತಾಯಿಯ ಗರ್ಭದಿಂದ ಹೊರ ಬರುತ್ತಿದ್ದಂತೆ ತಾಯಿಯ ಹಾಲು ಕುಡಿಸುವ ಗೊಂಬೆಯನ್ನು ತಯಾರಿಸಿ ತರಬೇತಿಯಲ್ಲಿ ಬಳಸಿದ್ದು ಬಹಳ ಪರಿಣಾಮಕಾರಿಯಾಗಿತ್ತಲ್ಲದೇ ಕೆಲವು ಮಹಿಳೆಯರಿಗೆ ಇದು ಆದಾಯ ತರುವ ಚಟುವಟಿಕೆ ಆಗಿದೆ ಎಂದು ವಿವರಿಸಿದರು.

ಅದೇ ರೀತಿ ಭಾರತದ ಮಹಿಳಾ ಸಮಖ್ಯಾ ಸಂಸ್ಥೆ ಮಹಿಳಾ ಸಂಘಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಸಮಿತಿಯನ್ನು ರಚಿಸಿ 2 - 3 ಮಹಿಳೆಯರು ಸದಸ್ಯರಾಗಿದ್ದು, ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಅವರು ಪಡೆದು ತಮ್ಮ ಸಂಘದ ಇತರರಿಗೆ ತಿಳಿಸುವುದು, ಆರೋಗ್ಯ ಪಾಲನಾ ಕೇಂದ್ರಗಳಲ್ಲಿರುವ ವ್ಯವಸ್ಥೆಯ ಬಗ್ಗೆ ನಿರ್ವಹಣೆ ಹಾಗೂ ಸಮಯದಾಯದಲ್ಲಿ ಆರೋಗ್ಯ ಸೇವಕಿಯರಾಗಿ ಅವರು ಪಾತ್ರ ವಹಿಸುತ್ತಿರುವ ಕುರಿತು ಹಂಚಿಕೊಂಡರು.

ಎಲ್ಲ ಭಾಗಾರ್ಥಿಗಳ ಅನುಭವ ಹಂಚಿಕೆಯ ನಂತರ ಈ ಕೆಳಗಿನ ಕೆಲವು ಸಲಹೆ ಹಾಗೂ ಕ್ರಿಯಾಯೋಜನೆಗಳನ್ನು ರೂಪಿಸಲಾಯಿತು.

- ಅಲ್ಲಿ ಪಡೆದಂತಹ ಕೆಲವು ಸಾಮಗ್ರಿಗಳನ್ನು ನಮ್ಮ ನಮ್ಮ ಪ್ರದೇಶದಲ್ಲಿ ಪ್ರಚಾರ ಮಾಡುವಾಗ ಬಳಸಬಹುದು.
- ಹೆಚ್ಚು ಹೆಚ್ಚು ತರಬೇತಿ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು.
- ವಿವಿಧ ಮಾಧ್ಯಮಗಳನ್ನು ಬಳಸುವುದು. ಉದಾಃ ಜಾನಪದ ಗೀತೆ, ಬೀದಿ ನಾಟಕ, ರೋಲ್ ಪ್ಲೇ, ನಾಟಕ ಇತ್ಯಾದಿ.
- ಅನುಭವಗಳನ್ನು ಹಂಚಿಕೊಳ್ಳುವುದು.
- ಬೇರೆ ಬೇರೆ ಸಮುದಾಯ ಮಾತ್ರವಲ್ಲದೇ ರಾಷ್ಟ್ರಗಳೊಂದಿಗೆ ಸಂಪರ್ಕ ಜಾಲ ಬೆಳೆಸುವುದು.

## 4 ನೇ ದಿನದ ವರದಿ

### *ಆರೋಗ್ಯ ವ್ಯವಸ್ಥೆ ಹಾಗೂ ನಮ್ಮ ಆರೋಗ್ಯಕ್ಕೆ ಅವಶ್ಯವಿರುವ ಬದಲಾವಣೆಗಳೇನು?*

3 ನೇ ದಿನದ ಕಾರ್ಯಕ್ರಮವನ್ನು ಬೆಳಿಗ್ಗೆ 8-30 ಗಂಟೆಗೆ ಜಪಾನ್ ದೇಶದವರು ಮಾಡಿದ ಜಾಗತೀಕರಣದ ಮೇಲಿನ ನಾಟಕ ಹಾಗೂ ನೈಜೀರಿಯಾದವರ ಹಾಡು ಹಾಗೂ ಐಕ್ಯತೆಗೆ ಸಂಬಂಧಿಸಿದ ಘೋಷಣೆಗಳೊಂದಿಗೆ ಪ್ರಾರಂಭಿಸಲಾಯಿತು. ಬೇರೆ ಬೇರೆ ದೇಶದ ಕೇಸ್‌ಸ್ಟಡಿಗಳನ್ನು ಹಂಚಿಕೊಳ್ಳುವುದರೊಂದಿಗೆ ಇಂದಿನ ಸೆಶನ್ ಪ್ರಾರಂಭಿಸಲಾಯಿತು. ಭಾರತದ ತಮಿಳುನಾಡಿನ ಆರೋಗ್ಯ ಕಾರ್ಯಕರ್ತೆಯೊಬ್ಬರು (ಸಾಂಪ್ರದಾಯಿಕ ದಾಯಿ) ತಮ್ಮ ಕಾರ್ಯ ತತ್ಪರತೆ ಹಾಗೂ ಮೇಲ್ಜಾತಿಯ ಮಹಿಳೆಯರಿಗೆ ಪ್ರಸವದ ಸಮಯದಲ್ಲಿ ಮಾಡಿದ ಚಾಣಾಕ್ಷತನ ದಿಂದ ಜಾತಿಯ ದೌರ್ಜನ್ಯವನ್ನು ಹೋಗಲಾಡಿಸಿದ್ದನ್ನು ವಿವರಿಸಿದರು.

ಜೋರ್ಡಾನ್ ರಾಷ್ಟ್ರದವರು ತಮ್ಮ ಅನುಭವ ಹಂಚಿಕೆಯ ಜೊತೆಗೆ ಈಗ ಆರೋಗ್ಯ ಸೇವೆಗಳನ್ನು ಹಣಕ್ಕಾಗಿ ಖಾಸಗೀ ವಲಯಗಳಿಗೆ ಮಾರಾಟ ಮಾಡಲಾಗುತ್ತಿದೆ. ಅಲ್ಲದೇ ಆರೋಗ್ಯ ವ್ಯವಸ್ಥೆಯು ಖಾಸಗೀ ಹಾಗೂ ಸಾರ್ವಜನಿಕ ವಲಯಗಳ ಮಧ್ಯ ಸಿಕ್ಕು ಮಿಶ್ರವಾಗಿ ಹೋಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ರಾಷ್ಟ್ರೀಯ ಸಂಪತ್ತಾಗಿರುವ ಜನರ ಆರೋಗ್ಯವು ಖಾಸಗೀಕರಣದಿಂದ ವೈದ್ಯಕೀಯ ಅವ್ಯವಹಾರಕ್ಕೆ ಎಡೆಕೊಟ್ಟಂತಾಗಿದೆ. ಸರ್ಕಾರವು ಜನರನ್ನು ಹಿಂಸಿಸುತ್ತಿದೆ. ಕುಟುಂಬ ಕಲ್ಯಾಣ ವಿಧಾನವನ್ನು ಮಹಿಳೆಯರ ಮೇಲೇ ಕೇಂದ್ರೀಕೃತ ಮಾಡಲಾಗಿದೆ. ಅತ್ಯಾಚಾರಕ್ಕೊಳಗಾದ ಮಹಿಳೆಯರನ್ನು ಕೇಳುವವರೇ ಇಲ್ಲ. ಬ್ಯಾಂಕ್ ಹಾಗೂ ಇತರೆ ಹಣಕಾಸಿನ ಸಂಸ್ಥೆಗಳು ಜನರನ್ನು ನುಣ್ಣಗಾಗಿಸುತ್ತಿವೆ. ಆರೋಗ್ಯ ವ್ಯವಸ್ಥೆಯಲ್ಲಾಗುತ್ತಿರುವ ಈ ಎಲ್ಲ ಬದಲಾವಣೆಗಳ ಜೊತೆಗೆ ಶ್ರೀ ಬಾಲಸುಬ್ರಮಣ್ಯಂ ಅವರು ಜಾಗತಿಕ ಮಟ್ಟದಲ್ಲಿ ಆರೋಗ್ಯ ವ್ಯವಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದರು.

- ವಿಶ್ವ ಆರೋಗ್ಯ ಸಂಸ್ಥೆಯು ತನ್ನ ನಾಯಕತ್ವವನ್ನು ಕಳೆದುಕೊಂಡಿದೆ. ಅದರ ಸ್ಥಾನವನ್ನು ಈಗ ವಿಶ್ವ ಬ್ಯಾಂಕ್ ಹಾಗೂ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ವಹಿಸಿಕೊಂಡಿವೆ.
- ಜಾಗತಿಕ ಮಟ್ಟದಲ್ಲಿ ಆರೋಗ್ಯ ವ್ಯವಸ್ಥೆಯನ್ನು ಆರೋಗ್ಯ ಮಂತ್ರಾಲಯದಿಂದ ಆರ್ಥಿಕ ಯೋಜನಾ ಶಾಸ್ತ್ರಜ್ಞರಿಗೆ ವಹಿಸಲಾಗಿದೆ.
- ಅದೇ ವಲಯ ಮಟ್ಟದಲ್ಲಿ ಖಾಸಗೀ ವಲಯಗಳು ವಹಿಸಿಕೊಂಡಿವೆ.

ಈಗ ವಿಶ್ವ ವ್ಯಾಪಾರೀ ಸಂಸ್ಥೆಯಿಂದ ವಲಯ ಮಟ್ಟಕ್ಕೆ ಬದಲಾಗಬೇಕಾಗಿದೆ. ಅಂದರೆ ಖಾಸಗೀ ವಲಯಗಳು ಸಾರ್ವಜನಿಕರಿಂದ ನಿಯಂತ್ರಿಸಲ್ಪಡುವಂತಾಗಬೇಕು. ಇದೇ ನಮಗೆ ಈಗ ಬೇಕಾಗಿರುವ ಮುಖ್ಯ ಬದಲಾವಣೆ ಎಂದು ತಿಳಿಸಿದರು.

ಇದರ ನಂತರ 93 ರಾಷ್ಟ್ರಗಳಿಂದ ಬಂದಂತಹ 1800 ಪ್ರತಿನಿಧಿಗಳನ್ನು ಎದುರಿಸಲು ಸನ್ನದ್ಧರಾಗಿ ಬಂದಂತಹ ವಿಶ್ವಬ್ಯಾಂಕಿನ ಹಿರಿಯ ಅಧಿಕಾರಿ ಶ್ರೀ ರಿಚರ್ಡ್ ಲೀ ಸ್ಟೋಲ್ಲಿನ್ ಅವರು ತಮ್ಮ ಬ್ಯಾಂಕ್, ಜನರಿಗಾಗಿ ಮಾಡಿದ ಸೇವೆ, ಅದರ ಉದ್ದೇಶ ಹಾಗೂ ಸಾಧನೆಗಳ ಕುರಿತು ಸುಮಾರು 1/2 ಗಂಟೆ ವಿವರಿಸಿದರು.

<u>ವಿಶ್ವಬ್ಯಾಂಕಿನ ಉದ್ದೇಶಃ</u>

- ಆರೋಗ್ಯವೆಂಬುದು ಪ್ರತಿಯೊಬ್ಬ ಮಾನವನ ಪ್ರಾಥಮಿಕ ಅವಶ್ಯಕತೆ ಪ್ರತಿಯೊಬ್ಬ ಬಡವರಿಗೂ ಸಹಾಯ ಮಾಡುವುದೇ ತಮ್ಮ ಉದ್ದೇಶ.
- ಜನರ ಆರೋಗ್ಯ ಕ್ಷೀಣಿಸಿದರೆ ಅವರಿಗಿರುವಂತಹ ಅವಕಾಶಗಳನ್ನು ಪಡೆಯಲು ಸಾಧ್ಯವಿಲ್ಲ. ಅಲ್ಲದೇ ಅದು ಜನರ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆಯನ್ನು ಇಲ್ಲವಾಗಿಸುತ್ತದೆ.

- ಕ್ಷೀಣಿಸುತ್ತಿರುವ ಆರೋಗ್ಯ ಮಾಪಕಗಳು, ನೀರು, ಸ್ವಚ್ಛತೆ ಹಾಗೂ ಆರೋಗ್ಯದ ಅಸಮರ್ಪಕ ಲಭ್ಯತೆ, ಕೀಳು ದರ್ಜೆಯ ಆರೋಗ್ಯ ಸೇವೆಗಳು, ಅಸಮಾನತೆ, ಆರೋಗ್ಯಕ್ಕೆ ಅಸಮರ್ಪಕ, ಕಡಿಮೆ ಆರ್ಥಿಕ ಸೌಲಭ್ಯ, ಆರೋಗ್ಯದ ವಿಷಯದಲ್ಲಿ ಜನರಿಗಿರಬೇಕಾದ ಹೆಚ್ಚಿನ ಅರಿವು, ಭ್ರಷ್ಟ ಹಾಗೂ ಕಡೆಗಾಣಿಸಲ್ಪಟ್ಟ ನಿರ್ವಹಣೆಯ ಬಗ್ಗೆ ಕಾಳಜೀ ಇರುವುದಾಗಿ ವ್ಯಕ್ತಪಡಿಸಿದರು.

ಒಂದೇ ರಾಷ್ಟ್ರದ ಶ್ರೀಮಂತ ಮಕ್ಕಳು ಅದೇ ರಾಷ್ಟ್ರದ ಬಡ ಮಕ್ಕಳಿಗಿಂತ 10 ಪಟ್ಟು ಆರೋಗ್ಯ ಸೌಲಭ್ಯ ಪಡೆದಿರುತ್ತಾರೆ. ಉದಾ: ಲಸಿಕೆ ಹಾಕಿಸಿಕೊಂಡಿರುವುದು, ಶ್ರೀಮಂತ ಮಹಿಳೆಯರಿಗಿಂತ ಬಡ ಮಹಿಳೆಯರು ಪ್ರಸವದ ಸಮಯದಲ್ಲಿ ಹೆಚ್ಚು ಸಾವನ್ನಪ್ಪುತ್ತಾರೆ. ಅಮೇರಿಕಾದ ಪ್ರಜೆಗಳಲ್ಲಿ 43 ಮಿಲಿಯನ್ ಅಮೇರಿಕನ್ನರಿಗೆ ಆರೋಗ್ಯದ ವಿಮೆ ಇಲ್ಲದಿರುವುದು. ಅಮೇರಿಕಾದ ಅಧಿಕಾರಿಯಾದ ತಮಗೇ ವಿಚಿತ್ರ ವಿಷಯವಾಗಿತ್ತು. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ತೀರಾ ಬಡವರ್ಗದ, ಮಹಿಳೆಯರ ಹಾಗೂ ಗಿರಿಜನರ ಆರೋಗ್ಯ ಸುಧಾರಣೆಗೆ ಏನು ಮಾಡಲು ಸಾಧ್ಯ ಎಂಬುದು ವಿಶ್ವಬ್ಯಾಂಕ್‌ನ ಮುಖ್ಯ ಕಾಳಜೀ ಆಗಿದೆ.

**ವಿಶ್ವಬ್ಯಾಂಕ್ (W.B.) ಸಾಧನೆ:**

- 50 ಮಿಲಿಯನ್ ಭಾರತೀಯರಿಗೆ ಚುಚ್ಚುಮದ್ದು ಹಗೂ ಲಸಿಕೆಗೆ ಧನ ಸಹಾಯ.
- ಭಾರತ ಹಾಗೂ ಬಾಂಗ್ಲಾದೇಶಗಳೊಳಗೊಂಡಂತೆ 14 ರಾಷ್ಟ್ರಗಳಿಗೆ ಟಿ.ಬಿ. ನಿಯಂತ್ರಣಕ್ಕೆ ಸಹಾಯ.
- ಭಾರತವನ್ನೊಳಗೊಂಡು 20 ರಾಷ್ಟ್ರಗಳಗೆ ಹೆಚ್.ಐ.ವಿ. ನಿಯಂತ್ರಣಕ್ಕೆ ಸಹಾಯ.
- ಬಾಂಗ್ಲಾದೇಶವನ್ನೊಳಗೊಂಡು ಇತರೆ ರಾಷ್ಟ್ರಗಳಿಗೆ ಅಪೌಷ್ಟಿಕತೆಯ ನಿರ್ಮೂಲನೆಗೆ ಸಹಾಯ.
- ಭಾರತದಲ್ಲಿ ಕುಷ್ಟರೋಗ ನಿಯಂತ್ರಣ.
- ಆಫ್ರಿಕಾ, ಮಲೇಷಿಯಾಗಳಲ್ಲಿ ಮಲೇರಿಯಾ ನಿಯಂತ್ರಣ.
- ಭಾರತಕ್ಕೆ ಪೋಲಿಯೋ ಲಸಿಕೆಗೆ 50 ಮಿಲಿಯನ್ ಡಾಲರ್ ಸಹಾಯ.
- ಭಾರತ, ಜಪಾನ್‌ಗಳಿಗೆ ನೀರು ಸರಬರಾಜು.
- ಭಾರತದಲ್ಲಿ ಅಂಧತ್ವ ನಿಯಂತ್ರಣ ಕಾರ್ಯಕ್ರಮ.

ವಿಶ್ವಬ್ಯಾಂಕಿನ ಉದ್ದೇಶ ಹಾಗೂ ಸಾಧನೆಗಳನ್ನು ವಿವರಿಸಿದ ಅಧಿಕಾರಿಗಳಿಗೆ ವಿಶ್ವಬ್ಯಾಂಕ್‌ನಿಂದ ಸಹಾಯಕ್ಕಿಂತ ಹೆಚ್ಚಾಗಿ ಸಾಕಷ್ಟು ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದ ರಾಷ್ಟ್ರಗಳ ಪ್ರತಿನಿಧಿಗಳಿಂದ ಪ್ರಶ್ನೆಗಳ ಹಾಗೂ ದುಶ್ಪರಿಣಾಮದ ವಿವರಣೆಯ ಸುರಿಮಳೆಯೊಂದಿಗೆ ವಿಶ್ವಬ್ಯಾಂಕಿಗೆ ಬಹಿಷ್ಕಾರದ ಘೋಷಣೆಗಳು ಕೇಳಿ ಬಂದವು.

ಜನಪರವಲ್ಲದ ವಿಶ್ವಬ್ಯಾಂಕ್ ನೀತಿ ಮೂರನೇ ವಿಶ್ವದ ಆರ್ಥಿಕತೆಯನ್ನು ಧ್ವಂಸಗೊಳಿಸುವ, ಸಾಮಾಜಿಕ ಆರೋಗ್ಯ ವ್ಯವಸ್ಥೆಯನ್ನು ವಿನಾಶಗೊಳಿಸುವ ತನ್ಮೂಲಕ ಬಡ ಜನತೆಯ ಜೀವನವನ್ನೇ ಧ್ವಂಸಗೊಳಿಸುವುದೇ ವಿಶ್ವ ಬ್ಯಾಂಕಿನ ನೀತಿಯಾಗಿದೆ ಎಂಬುದು ಎಲ್ಲ ಪ್ರತಿನಿಧಿಗಳ ಒಮ್ಮತದ ಕೂಗಾಗಿತ್ತು.

ಫಿಲಿಪೈನ್ಸ್ ದೇಶದ ಪ್ರತಿನಿಧಿಯೊಬ್ಬರು ವಿಶ್ವ ಬ್ಯಾಂಕಿನಿಂದ ಸಹಾಯಕ್ಕಿಂತ ಹೆಚ್ಚಾಗಿ ಜನವಿರೋಧಿ ಚಟುವಟಿಕೆಗಳೇ ಹೆಚ್ಚಾಗಿದ್ದನ್ನು ವಿವರಿಸುತ್ತಾ, ವಿಶ್ವಬ್ಯಾಂಕಿನ ಹಣರಾಶಿನ ನೆರವಿನಲ್ಲಿ ಶೇ. 3 ರಷ್ಟು ಕಡಿಮೆ ಹಣ ಆರೋಗ್ಯಕ್ಕೆ ವ್ಯಯವಾಗುತ್ತಿದೆ. ವಿಶ್ವಬ್ಯಾಂಕ್ ಮಾನವರ ಹಾಗೂ ಮಾನವೀಯ ಸೇವೆಗಳ ಮಧ್ಯ ಇರುವ ಗೋಡೆಯಂತಿದೆ. ವಿಶ್ವಬ್ಯಾಂಕಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಭಾಗವಹಿಸುವಿಕೆ ಕೇವಲ ರಾಜಕೀಯ ಆಯ್ಕೆಯಾಗಿದೆ. "ಕಳಪೆ ಔಷಧಿಗಿಂತ ಔಷಧಿ ರಹಿತ ಜೀವನವೇ ಉತ್ತಮ." ಈ ಎಲ್ಲ ಕಾರಣಗಳಿಂದ ವಿಶ್ವಬ್ಯಾಂಕನ್ನು ನಿರ್ಮೂಲನೆಗೊಳಿಸಬೇಕೆಂದು ಘಂಟಾಘೋಷವಾಗಿ ಸಾರಿದರು.

ಸಾಲದ ಕಪಿಮುಷ್ಟಿಯಲ್ಲಿ ಬಿದ್ದಿರುವ ಆಫ್ರಿಕಾವನ್ನು ಉದಾಹರಿಸುತ್ತಾ, ವಿಶ್ವ ಬ್ಯಾಂಕಿನ ಜಾಗತಿಕ ಆರ್ಥಿಕ ವ್ಯವಸ್ಥೆಯ ಬಗ್ಗೆ ದೂರುತ್ತಾ ಜಿಂಬಾಬ್ವೆಯ ಪ್ರತಿನಿಧಿಯೊಬ್ಬರು "ನಮಗೆ ನಿಮ್ಮ ದಾನಕ್ಕಿಂತ ನ್ಯಾಯ ಬೇಕಾಗಿದೆ. ಆರೋಗ್ಯ ಮತ್ತು ಶಿಕ್ಷಣಕ್ಕೆ ಮಾಡುವ ಖರ್ಚಿನ ನಾಲ್ಕರಷ್ಟು ಭಾಗವನ್ನು ಸಾಲ ಮರುಪಾವತಿಗೆ ವ್ಯಯಿಸುತ್ತಿದೆ. ಪ್ರತಿಯೊಬ್ಬ ಮಹಿಳೆ ಹಾಗೂ ಮಗುವಿನ ಮೇಲೆ ಇಂದು 357 ಮಿಲಿಯನ್ ಡಾಲರ್‌ನಷ್ಟು ಸಾಲವಿದೆ." ಮುಂದಿನ ಉತ್ತಮ ಭವಿಷ್ಯಕ್ಕಾಗಿ ಈಗ ನಷ್ಟ ಅನುಭವಿಸು ಎಂಬ ವಿಶ್ವಬ್ಯಾಂಕ್‌ನ ನೀತಿಯನ್ನು ಖಂಡಿಸಿದರು.

ಭಾರತದ ಪ್ರತಿನಿಧಿಯೊಬ್ಬರು ವಿಶ್ವಬ್ಯಾಂಕ್‌ನ್ನು ಪ್ರಜಾಪ್ರಭುತ್ವ ವಿರೋಧಿ ಸಂಸ್ಥೆಯೆಂದು ಜರಿಯುತ್ತಾ, ಪಾರದರ್ಶಿಕತೆ ಇಲ್ಲದೇ ಸಂಯುಕ್ತ ರಾಷ್ಟ್ರಗಳ ನಿಯಂತ್ರಣ ಹಾಗೂ ನಿರ್ಧಾರದ ಮೇಲೆ ಅವಲಂಬಿತವಾಗಿರುವ ಸಂಸ್ಥೆ. ವಿಶ್ವಬ್ಯಾಂಕ್‌ನಿಂದ ಪ್ರೇರೇಪಿತವಾಗಿ ಪ್ರಾರಂಭಿಸಲಾದ ಯೋಜನೆಗಳಿಂದ ಅನುಭವಿಸಿದ ಚೂರು ಚೂರಾಗಿರುವ ಹಾಗೂ ಸಾವಿಗೀಡಾದ ಜನತೆಯ ಜೀವನದ ಜವಾಬ್ದಾರಿ ಯಾರು ವಹಿಸುವರೆಂದು ಪ್ರಶ್ನಿಸಿದರು.

ಬಾಂಗ್ಲಾದೇಶದ ಪ್ರತಿನಿಧಿಯೊಬ್ಬರು ವಿಶ್ವಬ್ಯಾಂಕ್‌ನ್ನು ಅಧಿಕಾರಶಾಹಿಗಳನ್ನು, ರಾಜಕಾರಣಿಗಳನ್ನು ಹಾಗೂ ಎನ್.ಜಿ.ಓ. ಗಳನ್ನು ಬಳಸಿಕೊಂಡು ತಮ್ಮ ಕೈಗೊಂಬೆಯಾಗಿಸಿಕೊಂಡ ಸಂಸ್ಥೆಯೆಂದೂ, ಎನ್.ಜಿ.ಓ. ಗಳಿಗೆ ಧನ ಸಹಾಯ ಮಾಡುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ಅವರೇ ನಿಯಂತ್ರಿಸುವಂತೆ ಮಾಡಿ ಸರ್ಕಾರವನ್ನು ಕಡೆಗಾಣಿಸುವಂತೆ ಮಾಡಿದ ಸಂಸ್ಥೆಯೆಂದು ದೂರಿದರು. ವಿಶ್ವಬ್ಯಾಂಕ್‌ನಿಂದಾಗಿ ಬಾಂಗ್ಲಾದೇಶದಲ್ಲಿ ಖಾಸಗೀಕರಣ ಪ್ರಾರಂಭವಾಯಿತು.

ಇದೇ ರೀತಿ ಪ್ರೇಕ್ಷಕರಿಂದಲೂ ಸಹ ವಿಶ್ವಬ್ಯಾಂಕ್ ಮೇಲಿರುವ ಅಭಿಪ್ರಾಯ, ಅಸಮಾಧಾನ ಸುರಿಮಳೆ ಯಾಯಿತು.

- ವಿಶ್ವಬ್ಯಾಂಕ್‌ನಿಂದಾಗಿ ಇಂದು ನಾವು ನಾಯಿಯಂತೆ ಸಾಯುತ್ತಿದ್ದೇವೆ, ಇಲಿಗಳಂತೆ ಕೊಲ್ಲಲ್ಪಡುತ್ತಿದ್ದೇವೆ
- ನಮ್ಮ ಕೃಷಿಯಾಧಾರಿತ ಕೈಗಾರಿಕೆಯನ್ನೇ ವಿನಾಶ ಮಾಡಿದ್ದೇವೆ.
- ನಿಮ್ಮ ಯಶಸ್ವಿನ ಕಥೆಗಳನ್ನು ಸಾಕು ಮಾಡಿ, ಮೊಸಳೆ ಕಣ್ಣೀರು ಹಾಕುವುದನ್ನು ನಿಲ್ಲಿಸಿ ನಮಗೆ ಬೇಕಾದ ಜನರ ಭಾಗವಹಿಸುವಿಕೆಯ ಮುಖಾಂತರ ಪ್ರಜಾಪ್ರಭುತ್ವ ನಡೆಸಲು ನಮ್ಮನ್ನು ಬಿಡಿ.
- ನಮಗೆ ರಚನಾ ಹೊಂದಾಣಿಕೆಯ ನೀತಿ ಬೇಡ. ರಚನಾ ಸಮಾನತೆಯ ನೀತಿ ಬೇಕು.
- 1947 ರಿಂದ ಇಂದಿನವರೆಗೆ ಬರೀ ಲಾಭವನ್ನೇ ಮಾಡಿದೆ ವಿಶ್ವಬ್ಯಾಂಕ್.
- ಠೇವಣಿ ರೂಪದಲ್ಲಿ ಹಣವಿಟ್ಟು ಲಾಭ ಮಾಡುವ ಶ್ರೀಮಂತ ವಾಣಿಜ್ಯ ಬ್ಯಾಂಕಾಗಿದೆ.
- ಇಲ್ಲಿ ಬಂದಂತಹ ಅಧಿಕಾರಿಯನ್ನು ಪಿ.ಹೆಚ್.ಎ. ಕೇವಲ ಒಬ್ಬ ವ್ಯಕ್ತಿಯನ್ನಾಗಿ ಸ್ವಾಗತಿಸುತ್ತದೆ. ಬ್ಯಾಂಕಿನ ಪ್ರತಿನಿಧಿಯಾಗಿ ಅಲ್ಲ. ಅದೂ ವಿಶ್ವ ಬ್ಯಾಂಕಿಗೆ ರಾಜೀನಾಮೆ ಕೊಟ್ಟರೆ ಮಾತ್ರ.
- ವಿಶ್ವಬ್ಯಾಂಕ್ ಅನ್ನುವುದು ನೀತಿ ಪಿ.ಹೆಚ್.ಎ. ಜನತೆ ಎಂದೂ ನೀತಿ ಜನತೆಯ ಒಂದು ಭಾಗವಾಗಲು ಸಾಧ್ಯವಿಲ್ಲ.
- ಕೆನ್ಯಾದಲ್ಲಿ ಕೂಲಿಗಾರರ ಸಂಖ್ಯೆಯನ್ನು ಕಡಿತಗೊಳಿಸಲಾಗುತ್ತಿದೆ. ಈಗಾಗಲೇ 2500 ಕೆಲಸಗಾರರನ್ನು ತೆಗೆದು ಹಾಕಲಾಗಿದೆ. ಪರಿಣಾಮವಾಗಿ ಕೆಲವರು ಆತ್ಮಹತ್ಯೆಯನ್ನು ಮಾಡಿಕೊಂಡ ಉದಾಹರಣೆಗಳಿವೆ.
- ದಕ್ಷಿಣಾತ್ಯ ರಾಷ್ಟ್ರಗಳ ಮೇಲಿರುವ ಸಾಲವನ್ನೆಲ್ಲ ವಿಶ್ವಬ್ಯಾಂಕ್ ಮನ್ನಾ ಮಾಡಬೇಕು.
- ಆರ್ಥಿಕ ಭಯೋತ್ಪಾದಕತೆಯ ಹೆಸರಲ್ಲಿ ವಿಶ್ವಬ್ಯಾಂಕ್ ನಮ್ಮನ್ನು ಹೆದರಿಸುತ್ತಿದೆ.

ಈ ಎಲ್ಲ ಪ್ರಶ್ನೆ ಹಾಗೂ ನಿಂದನೆಗಳಿಗೆ ಸಿದ್ಧರಾಗಿಯೇ ಬಂದಂತಿದ್ದ ವಿಶ್ವಬ್ಯಾಂಕ್ ಅಧಿಕಾರಿಗಳು ಜನತೆಯ ದೂಷಣೆ ಹಗೂ ಅಭಿಪ್ರಾಯಗಳಿಗೆ ಸಮಜಾಯಿಸಿ ಕೊಡಲು ಪ್ರಯತ್ನಿಸಿದರು. ಇದುವರೆಗೂ ಇದ್ದ ರಚನಾ ಹೊಂದಾಣಿಕೆ ನೀತಿಯಿಂದ ಜನರ ಜೀವನದ ಮೇಲಾಗುವ ಪರಿಣಾಮದ ಬಗ್ಗೆ ಹೆಚ್ಚಿನ ಗಮನ ಹರಿಸಿರಲಿಲ್ಲ. ಇತ್ತೀಚಿನ 10 ವರ್ಷಗಳಲ್ಲಿ ಜನ ಕಲ್ಯಾಣ ಅದರಲ್ಲೂ ಜನರ ಆರೋಗ್ಯಕ್ಕಾಗಿ ಹೆಚ್ಚಿನ ಹಣದ ಉಪಯೋಗ ಮಾಡುವಂತೆ ಸರ್ಕಾರಕ್ಕೆ ವಿಶ್ವಬ್ಯಾಂಕ್ ತಿಳಿಸಿದೆ ಎಂದು ಬ್ಯಾಂಕ್‌ನ ಬಗ್ಗೆ ಸಮರ್ಥಿಸಿಕೊಂಡರು. ಆದರೂ ಸಹ ವಿಶ್ವಬ್ಯಾಂಕ್ ನೀತಿಯಿಂದಾಗಿ ದುಷ್ಪರಿಣಾಮ, ನಷ್ಟಗಳನ್ನು ಅನುಭವಿಸಿ ರೊಚ್ಚಿಗೆದ್ದ ಜನತೆ ಅವರ ಸಮಜಾಯಿಷಿಗೆ ಬಗ್ಗಲಿಲ್ಲ. ವಿಶ್ವಬ್ಯಾಂಕ್ ವಿರುದ್ಧ ಹಲವಾರು ಘೋಷಣೆಗಳನ್ನು ಕೂಗಿ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದರು.

### 5 ನೇ ದಿನದ ವರದಿ ದಿನಾಂಕ 7-12-2000.

### _ಪರಿಸರ ಹಾಗೂ ಉಳಿವು_

ಈ ದಿನದ ಕಾರ್ಯಕ್ರಮವು ಐಕ್ಯತೆಯ ಘೋಷಣೆಗಳೊಂದಿಗೆ ಬೆಳಿಗ್ಗೆ 9-00 ಗಂಟೆಗೆ ಪ್ರಾರಂಭವಾಯಿತು. ಈ ದಿನದ ಚರ್ಚೆಯಲ್ಲಿ ಮುಖ್ಯವಾಗಿ ಆರೋಗ್ಯದ ಮೇಲೆ ವಿಶ್ವ ವಾಣಿಜ್ಯ ಸಂಸ್ಥೆಯ ಪ್ರಭಾವ ಹಾಗೂ W.T.O. ದಿಂದಾಗಿ ಆರೋಗ್ಯದ ಮೇಲಾದ ಪರಿಣಾಮ, TRIPS ಒಪ್ಪಂದದಿಂದಾಗಿ ಈಗಿರುವ ಔಷಧಿಗಳು ಇನ್ನೂ ಹೆಚ್ಚು ದುಬಾರಿಯಾಗಿ ಬಡವನ ಕೈಗೆಟಕದಂತಾಗುವ ಪರಿಣಾಮದ ಕುರಿತು ಹೊಸ ಸಂಶೋಧನೆಗಳು ಹಾಗೂ TRIPS ಒಪ್ಪಂದದಲ್ಲಾಗಬೇಕಾದ ಬದಲಾವಣೆಗಳು ಜನಸಾಮಾನ್ಯರ ಪರವಾಗಿರಬೇಕೆಂಬುದರ ಬಗ್ಗೆ ಚರ್ಚಿಸಲಾಯಿತು. ಭೂಪಾಲದ ದುರಂತ ಘಟನೆ, ಬಾಂಗ್ಲಾದೇಶದ ಪ್ರವಾಹದಿಂದಾಗಿ ಜನಜೀವನದ ಮೇಲಾದ ಭೀಕರ ಪರಿಣಾಮ, ಸಾಂಪ್ರದಾಯಿಕ ಔಷಧೋಪಚಾರ, ಇರಾಕ್, ಪೆಸಿಫಿಕ್ ಹಾಗೂ ಸೈಬೇರಿಯಾ ದೇಶದ ಜನತೆಯ ಮೇಲಾದ ರೇಡಿಯೇಷನ್‌ನ ಪರಿಣಾಮ, ಪರಿಸರ ಹಾಗೂ ಆರೋಗ್ಯ, ಆಹಾರದ ಲಭ್ಯತೆ ಹಾಗೂ ಹಕ್ಕು ಇತ್ಯಾದಿ ವಿಷಯಗಳ ಕುರಿತು ಚರ್ಚೆ ಹಾಗೂ ಮಾಹಿತಿ ವಿತರಣೆಯಾಯಿತು.

### 6 ನೇ ದಿನದ ವರದಿ ದಿನಾಂಕ 8-12-2000.

### _ಮುಂದಿನ ಮಾರ್ಗಗಳು_

ಕೊನೆಯ ದಿನದ ಕಾರ್ಯಕ್ರಮವು ಬೇರೆ ಬೇರೆ ದೇಶದ ಹಾಡು, ಐಕ್ಯತೆಯ ಘೋಷಣೆಗಳೊಂದಿಗೆ ಪ್ರಾರಂಭವಾಯಿತು. ಈ ದಿನದ ಚರ್ಚೆಯಲ್ಲಿ ಮುಖ್ಯವಾಗಿ ಆರೋಗ್ಯಕ್ಕಾಗಿ ಜನರ ಸನ್ನದನ್ನು ಹಿಂದಿನ 4 ದಿನಗಳಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಅಂತಿಮ ಪ್ರತಿಯನ್ನು ಎಲ್ಲರ ಮುಂದೆಯೂ ಓದಿ ಎಲ್ಲರ ಅಭಿಪ್ರಾಯ ಪಡೆಯಲಾಯಿತು. ಅದರಲ್ಲಿರುವ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

<u>ಆರೋಗ್ಯಕ್ಕಾಗಿ ಜನತೆಯ ಸನ್ನದು (ಜನಾರೋಗ್ಯ ಸನ್ನದು)</u>

**ಪೀಠಿಕೆ:** ಆರೋಗ್ಯವೆಂಬುದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಿಷಯಗಳನ್ನೊಳಗೊಂಡಿದೆ. ಇವೆಲ್ಲವನ್ನೂ ಪಡೆಯುವುದು ಮಾನವನ ಮೂಲಭೂತ ಹಕ್ಕು. ಬಡತನ ರೇಖೆಗಿಂತ ಕೆಳಗಿರುವ ಜನರ ಅನಾರೋಗ್ಯ ಹಾಗೂ ಸಾವಿಗೆ ಮೂಲ ಕಾರಣಗಳು ಅಸಮಾನತೆ, ಬಡತನ, ಶೋಷಣೆ, ಹಿಂಸೆ ಹಾಗೂ ಅನ್ಯಾಯ. ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರಿಸುವುದು, ಜಾಗತೀಕರಣವನ್ನು ವಿರೋಧಿಸುವುದು, ರಾಜಕೀಯ ಹಾಗೂ ಆರ್ಥಿಕ ಆದ್ಯತೆಗಳನ್ನು ಆಮೂಲಾಗ್ರವಾಗಿ ಬದಲಾಯಿಸುವುದು ಇವುಗಳು "ಎಲ್ಲರಿಗೂ ಆರೋಗ್ಯ" ವೆಂಬ ಘೋಷಣೆಯ ಮೂಲ ಉದ್ದೇಶವಾಗಿದೆ.

ಇದುವರೆಗೂ ಕಡೆಗಾಣಿಸಲ್ಪಟ್ಟ ಜನತೆಯ ಧ್ವನಿಯನ್ನು ಕೇಳಿ ಅವರ ದೃಷ್ಟಿಕೋನವನ್ನು ಸಾಕಾರಗೊಳಿಸುವ ದಿಶೆಯಲ್ಲಿ ಈ ಸನ್ನದು ರಚಿಸಲ್ಪಟ್ಟಿದೆ. ಜನರ ಸಮಸ್ಯೆಗಳನ್ನು ಗುರುತಿಸಿ ತಾವೇ ಪರಿಹಾರ ಕಂಡುಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಿ, ಸ್ಥಳೀಯ ವ್ಯವಸ್ಥೆ, ರಾಷ್ಟ್ರ ಹಾಗೂ ಅಂತರಾಷ್ಟ್ರ ಮಟ್ಟದ ಸರ್ಕಾರ ಹಾಗೂ ನಿಗಮಗಳ ಕಾರ್ಯಾಚರಣೆಗಳ ಬಗ್ಗೆ ಪ್ರಶ್ನಿಸುವ ಹಾಗೂ ನಿಯಂತ್ರಿಸುವ ಅಂಶಗಳನ್ನು ಇದು ಒಳಗೊಂಡಿದೆ.

**ದೂರದೃಷ್ಟಿ:** ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಾಮ್ಯತೆ, ನಿರಂತರ ಅಭಿವೃದ್ಧಿ, ಶಾಂತಿ ಇವುಗಳನ್ನು ಪಡೆಯುವುದೇ ಈ ಸನ್ನದಿನ ಪ್ರಮುಖ ದೂರದೃಷ್ಟಿಯಾಗಿದೆ. ಜಗತ್ತಿನಲ್ಲಿರುವ ಭಿನ್ನ ವಿಭಿನ್ನ ಜನತೆಯ ಜೀವನವನ್ನು ಪರಸ್ಪರ ಗೌರವಿಸುವುದು, ಪ್ರಶಂಸಿಸುವುದು ಮತ್ತು ಪ್ರೇರೇಪಿಸಿ ಆಚರಣೆಯಲ್ಲಿ ತರುವುದು, ಪರಸ್ಪರ ಕುಶಲತೆಗಳನ್ನು ಗುರುತಿಸುವ ಮತ್ತು ಪ್ರಶಂಸಿಸುವ ಮೂಲಕ ತಮ್ಮ ಜೀವನವನ್ನು ರೂಪಿಸುವ ಅಂಶಗಳನ್ನು ಹೆಚ್ಚಿಸುವ ಮುಖಾಂತರ ಉತ್ತಮ ಜೀವನಕ್ಕೆ ಅರ್ಥಕೊಡುವುದು. ಈ ದೂರದೃಷ್ಟಿಯ ಸಾಧನೆಗಾಗಿ 'ಸಾಕಷ್ಟು ಸಂಪನ್ಮೂಲಗಳು ಲಭ್ಯವಿದ್ದು, ಅವುಗಳ ಸದ್ಬಳಕೆಯಾಗಬೇಕಾಗಿದೆ.

**ಆರೋಗ್ಯದ ಬಿಕ್ಕಟ್ಟು:** ಅನಾರೋಗ್ಯ ಹಾಗೂ ಸಾವು ನಮ್ಮನ್ನು ಕ್ಷುದ್ರರನ್ನಾಗಿಸುತ್ತಿವೆ. ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವದು ಇದರ ಮುಖ್ಯ ಕಾರಣವಲ್ಲ. ಸಾವು ಮತ್ತು ಅನಾರೋಗ್ಯದ ಮೂಲ ಬೇರುಗಳಾದ ಆರ್ಥಿಕ ಹಾಗೂ ಸಾಮಾಜಿಕ ನೀತಿಗಳನ್ನು ನಮ್ಮ ಮೇಲೆ ಹೇರುತ್ತಿರುವುದೇ ನಮ್ಮ ಕೋಪಕ್ಕೆ ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಜಗತ್ತಿನಾದ್ಯಂತ ಆಗುತ್ತಿರುವ ಆರ್ಥಿಕ ಬದಲಾವಣೆಯಿಂದಾಗಿ ಜನತೆಯ ಆರೋಗ್ಯದ ಮೇಲೆ, ಆರೋಗ್ಯ ಸೌಲಭ್ಯಗಳ ಮೇಲೆ ಹಾಗೂ ಇತರೆ ಸಾಮಾಜಿಕ ಸೇವೆಗಳ ಮೇಲೆ ಪ್ರಬಲವಾದ ಪರಿಣಾಮ ಬೀರುತ್ತಿದೆ. ಜಗತ್ತಿನಲ್ಲಿ ಸಾಕಷ್ಟು ಸಂಪತ್ತಿನ ಭಾಗ್ಯ ಇದ್ದಾಗಲೂ ಬಡತನ ಹಾಗೂ ಹಸಿವು ಹೆಚ್ಚುತ್ತಿದೆ. ಪುರುಷ ಸ್ತ್ರೀಯರ ನಡುವಿನ ಅಂತರ, ಸಾಮಾಜಿಕ ವರ್ಗಗಳ ನಡುವಿನ ಅಂತರ, ಯುವ ಜನತೆ ಹಾಗೂ ವೃದ್ಧರ ನಡುವಿನ ಅಂತರ ಹೆಚ್ಚುತ್ತಿದೆ.

ಜಗತ್ತಿನ ಬಹುಸಂಖ್ಯಾತ ಜನರ ಜೀವನದ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಆಹಾರ, ಶುದ್ಧ ಕುಡಿಯುವ ನೀರು, ಶೌಚಾಲಯ, ಆಶ್ರಯ, ಭೂಮಿ, ಉದ್ಯೋಗ, ಆರೋಗ್ಯ ಹಾಗೂ ಆರೋಗ್ಯ ಸೇವೆಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ. ಅಸಮಾನತೆ ಮುಂದುವರಿಯುತ್ತಲೇ ಇದೆ. ಆರೋಗ್ಯ ಸೇವೆಯಲ್ಲಾಗುತ್ತಿರುವ ವಂಚನೆ ಹಾಗೂ ಅನಾರೋಗ್ಯ ಹರಡುವಿಕೆಯಲ್ಲಿ ಇದರ ಪರಿಣಾಮವನ್ನು ಕಾಣಬಹುದಾಗಿದೆ.

ಜಗತ್ತಿನ ನೈಸರ್ಗಿಕ ಸಂಪತ್ತು ತೀವ್ರಗತಿಯಲ್ಲಿ ನಶಿಸುತ್ತಿದೆ. ಈ ನೈಸರ್ಗಿಕ ಅವನತಿಯು ಎಲ್ಲರ ಆರೋಗ್ಯದ ಮೇಲೆ ಅದರಲ್ಲಿಯೂ ಬಡ ಜನತೆಯ ಮೇಲೆ ತೀವ್ರತರ ಪರಿಣಾಮವನ್ನು ಉಂಟುಮಾಡಿದೆ. ಈ ಪರಿಸ್ಥಿತಿಯಿಂದಾಗಿ ಸಾಮೂಹಿಕ ಅವನತಿಗೆ ಕಾರಣವಾಗುವಂತಹ ಶಸ್ತ್ರಾಸ್ತ್ರಗಳನ್ನು ಹೊಂದುವ ಹೊಸ ಸಂದಿಗ್ಧ ಪರಿಸ್ಥಿತಿಯೂ ಉಂಟಾಗಿದೆ. ಜಗತ್ತಿನ ಸಂಪತ್ತು ಅತಿಯಾದ ಲಾಭದಾಸೆ ಹೊಂದಿರುವ ಕೆಲವೇ ಜನರ ಕೈಯಲ್ಲಿ ಕ್ರೋಢೀಕೃತವಾಗುತ್ತಿದೆ. ಸರ್ಕಾರದ ಹೊಸದಾದ ಆರ್ಥಿಕ, ರಾಜಕೀಯ ಹಾಗೂ ಉದಾರೀಕರಣದ ನೀತಿಯನ್ನು ರೂಪಿಸುವಲ್ಲಿ ಈ ಪ್ರಬಲವಾದ ಗುಂಪು ಪ್ರಮುಖ ಪಾತ್ರ ವಹಿಸುತ್ತಿದೆ. ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ ಹಾಗೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳೇ ಈ ಪ್ರಬಲವಾದ ಗುಂಪಾಗಿದೆ. ಈ ಗುಂಪಿನ ಅನಿಯಂತ್ರಿತ ಚಟುವಟಿಕೆಗಳು ಹಾಗೂ ಸರ್ಕಾರದ ನೀತಿಯಿಂದಾಗಿ ವಿಶ್ವದಾದ್ಯಂತ ಎಲ್ಲ ಜನರ ಜೀವನ, ಆರೋಗ್ಯ ಮತ್ತು ಸಮಾಜದ ಮೇಲೆ ತೀವ್ರವಾದ ಪರಿಣಾಮ ಬೀರಿದೆ.

ಜನತೆಯ ಮೂಲಭೂತ ನಾಗರಿಕ ಸೌಲಭ್ಯಗಳಿಗಾಗಿ ಇರಬೇಕಾದ ಆಯವ್ಯಯದ ಪ್ರಮಾಣವನ್ನು ಸರ್ಕಾರ ಕಡಿತಗೊಳಿಸುತ್ತಿದೆ. ಇದರಿಂದಾಗಿ ಜನರು ಕನಿಷ್ಠ ಮೂಲಭೂತ ಸೌಲಭ್ಯಗಳಿಂದಲೂ ವಂಚಿತರಾಗುತ್ತಿದ್ದಾರೆ. ಆರೋಗ್ಯ ಸೇವೆಗಳ ಲಭ್ಯತೆ ಜನಸಾಮಾನ್ಯರಿಗೆ ಕಡಿಮೆಯಾಗುತ್ತಿದೆ. ಆರೋಗ್ಯ ಸೇವೆಗಳು ಅಸಮಾನವಾಗಿ ಮತ್ತು ಅಸಮರ್ಪಕವಾಗಿ ಹಂಚಲ್ಪಡುತ್ತಿವೆ. ಆರೋಗ್ಯ ಸೇವೆಗೆ ಬೇಕಾದಂತಹ ಸಮಾನತೆಯ ನೀತಿಗೆ ಖಾಸಗೀಕರಣವು ಧಕ್ಕೆ ತರುತ್ತಿದೆ. ನ್ಯಾಯ ಮತ್ತು ಸಮಾನತೆಯ ಬದ್ಧತೆ ಇಲ್ಲವಾಗಿದೆ. ಇದರಿಂದಾಗಿ ಸಾಂಕ್ರಾಮಿಕ ರೋಗಗಳಾದ ಟಿ.ಬಿ. ಮಲೇರಿಯಾ ಇತ್ಯಾದಿಗಳ ಜೊತೆಗೆ ಹೊಸ ಭಯಂಕರ ಮಾರಣಾಂತಿಕ ರೋಗಗಳಾದ HIV/AIDS ಗಳು ಹಬ್ಬಲು ಕಾರಣವಾಗಿವೆ. ಅಲ್ಲದೇ ಈ ರೋಗಗಳು ಮಾನವ ಜಾತಿಯ ಅವನತಿಯ ಎಚ್ಚರಿಕೆ ಗಂಟೆಗಳಾಗಿವೆ.

## ಜನಾರೋಗ್ಯ ಸನ್ನದಿನ ತತ್ವಗಳು:

⇒ ಮಾನವರ ವರ್ಣ, ಪೂರ್ವಾಪರ ಹಿನ್ನೆಲೆ, ಧರ್ಮ, ಜಾತಿ, ಲಿಂಗ, ವಯಸ್ಸು, ಸಾಮರ್ಥ್ಯ ಹಾಗೂ ವರ್ಗಗಳ ಭೇದಭಾವವಿಲ್ಲದೇ ಉತ್ಕೃಷ್ಟ ಆರೋಗ್ಯವನ್ನು ಪಡೆಯುವುದೇ ಮಾನವರ ಮೂಲಭೂತ ಹಕ್ಕು.

⇒ ಎಲ್ಲರಿಗೂ ಪ್ರಾಥಮಿಕ ಆರೋಗ್ಯ ಸಂರಕ್ಷಣೆ ಎಂಬ ದೂರ ದೃಷ್ಟಿಯನ್ನು ಹೊಂದಿದಂತಹ 1978 ರ ಆಲ್ಮಾಆಟಾ ಘೋಷಣೆಯು ಈ ಸನ್ನದಿಗೆ ಆಧಾರವಾಗಿದೆ. ಸಮಾನವಾದ ಹಾಗೂ ಭಾಗವಹಿಸುವಿಕೆಯ ಮುಖಾಂತರ ಆರೋಗ್ಯ ಹಾಗೂ ಆರೋಗ್ಯ ಸೇವೆಯನ್ನು ಪಡೆಯುವ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

⇒ ಜನರ ಅವಶ್ಯಕತೆಯ ಆಧಾರದ ಮೇಲೆ ಜನರ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಉತ್ತಮ ಆರೋಗ್ಯ, ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ಸೌಲಭ್ಯಗಳ ಒದಗಿಸುವಿಕೆ ಜನತೆಯ ಕೊಡುವ ಸಾಮರ್ಥ್ಯದ ಆಧಾರದ ಮೇಲೆ ಅವಲಂಬಿತವಾಗಿರಬಾರದು.

⇒ ಆರೋಗ್ಯಕ್ಕೆ ಸಂಬಂಧಿಸಿದ ನೀತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ, ಅನುಷ್ಠಾನಗೊಳಿಸುವ, ನಿರ್ವಹಿಸುವ ಹಾಗೂ ಮೌಲ್ಯಮಾಪನ ಮಾಡುವ ಪ್ರತಿಯೊಂದು ಹಂತದಲ್ಲೂ ಜನ ಹಾಗೂ ಜನ ಸಂಘಟನೆಯನ್ನು ತೊಡಗಿಸಿಕೊಳ್ಳುವ ಅವಶ್ಯಕತೆ ಇದೆ.

⇒ ಆರೋಗ್ಯವು ಪ್ರಾಥಮಿಕವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಭೌತಿಕ ಪರಿಸರಗಳಿಂದ ನಿಯಂತ್ರಿಸಲ್ಪಡುತ್ತದೆ. ಆದರೆ ಸ್ಥಳೀಯ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನೀತಿ ನಿಯಮಗಳನ್ನು ರೂಪಿಸುವಾಗ ಸಮಾನತೆ ಮತ್ತು ನಿರಂತರ ಅಭಿವೃದ್ಧಿಯ ಅಂಶಗಳಿಗೆ ಪ್ರಮುಖ ಆದ್ಯತೆ ಕೊಡುವ ಅವಶ್ಯಕತೆ ಇದೆ.

⇒ ಆರೋಗ್ಯದ ಬಿಕ್ಕಟ್ಟನ್ನು ಹೊಡೆದೋಡಿಸಲು ವ್ಯಕ್ತಿ, ಸಮುದಾಯ, ರಾಷ್ಟ್ರ, ಅಂತರಾಷ್ಟ್ರೀಯ ಹಾಗೂ ಒಟ್ಟಾರೆಯಾಗಿ ಜಾಗತಿಕ ಮಟ್ಟದಲ್ಲಿ ಕಾರ್ಯಾಚರಣೆಗೆ ಇಳಿಯುವ ಅವಶ್ಯಕತೆ ಇದೆ. ಇದಕ್ಕಾಗಿ ಈ ಕೆಳಗೆ ತಿಳಿಸಿದ ಜನತೆಯ ಬೇಡಿಕೆಗಳು ಕಾರ್ಯಾಚರಣೆಗಿಳಿಯಲು ಆಧಾರವಾಗಿವೆ.

## ಕಾರ್ಯಾಚರಣೆಗಾಗಿ ಕರೆ

♦ ಆರೋಗ್ಯ ಮಾನವರ ಹಕ್ಕು:

⇒ ಆರೋಗ್ಯವು ಸಮಾನತೆ ಮತ್ತು ನ್ಯಾಯಕ್ಕಾಗಿ ಸಮಾಜಕ್ಕೆ ಅವು ಹೊಂದಿರುವ ಬದ್ಧತೆಯನ್ನು ಪ್ರತಿಬಿಂಬಿಸುವ ಅಂಶವಾಗಿದೆ.

ಆರೋಗ್ಯವು ಮಾನವನ ಮೂಲಭೂತ ಹಕ್ಕು ಎಂಬುದು ಆರ್ಥಿಕ ಹಾಗೂ ರಾಜಕೀಯ ಕಳಕಳಿಗಿಂತಲೂ ಮಿಗಿಲಾಗಿರಬೇಕು.

<u>**ಜಗತ್ತಿನ ಜನತೆಗೆ ಸನ್ನದಿನ ಕರೆ**</u>

❖ ಆರೋಗ್ಯದ ಹಕ್ಕನ್ನು ಜಾರಿಗೊಳಿಸಲು ನಡೆಸುವ ಎಲ್ಲ ಪ್ರಯತ್ನಗಳಿಗೆ ಬೆಂಬಲಿಸುವುದು.

❖ ಎಲ್ಲರಿಗೂ ಆರೋಗ್ಯ ಎಂಬ ಅಂಶವನ್ನು ಗೌರವಿಸುವ ನೀತಿಯನ್ನು ಪುನರ್ ರೂಪಿಸಲು ಮತ್ತು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳ ಮೇಲೆ ಒತ್ತಡ ತರುವುದು.

❖ ರಾಜ್ಯ ಹಾಗೂ ರಾಷ್ಟ್ರ ಸಂವಿಧಾನದಲ್ಲಿ ಆರೋಗ್ಯ ಎಲ್ಲರ ಮೂಲಭೂತ ಸಂವಿಧಾನಾತ್ಮಕ ಹಕ್ಕು ಎಂಬ ಅಂಶವನ್ನು ಅಳವಡಿಸುವಂತೆ ಒತ್ತಡ ತರಬೇಕು. ಇದಕ್ಕಾಗಿ ವಿಶಾಲವಾದ ಪ್ರಬಲ ತಳಹದಿ ಇರುವ ಜನ ಚಳುವಳಿಯನ್ನು ರೂಪಿಸಬೇಕು.

❖ ತಮ್ಮ ಲಾಭಕ್ಕಾಗಿ ಜನರ ಆರೋಗ್ಯದ ಅವಶ್ಯಕತೆಗಳನ್ನು ಶೋಷಿಸುತ್ತಿರುವವರ ವಿರುದ್ಧ ಹೋರಾಟ.

<u>ಆರೋಗ್ಯದ ವಿಶಾಲವಾದ ನಿರ್ಣಾಯಕ ಅಂಶಗಳ ನಿಭಾಯಿಸುವಿಕೆ</u>

**ಆರ್ಥಿಕ ಸವಾಲುಗಳು:** ಆರ್ಥಿಕ ವ್ಯವಸ್ಥೆಯು ಜನರ ಆರೋಗ್ಯದ ಮೇಲೆ ತೀವ್ರವಾದ ಪ್ರಭಾವ ಬೀರಿದೆ. ಆರ್ಥಿಕ ನೀತಿಗಳು ಜನರ ಆರೋಗ್ಯ, ಸಮಾನತೆ ಮತ್ತು ಸಾಮಾಜಿಕ ಮೌಲ್ಯಗಳ ಸುಧಾರಣೆಗೆ ಆದ್ಯತೆ ನೀಡುವಂತಿರಬೇಕು.

**ರಾಷ್ಟ್ರಮಟ್ಟದ ಸರ್ಕಾರ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳ** ರಾಜಕೀಯ, ಆರ್ಥಿಕ, ಕೃಷಿ ಹಾಗೂ ಕೈಗಾರಿಕೆಗಳಿಗೆ ಸಂಬಂಧಿಸಿದ ನೀತಿಯನ್ನು ಬಂಡವಾಳಶಾಹಿಗಳ ಪರವಾಗಿ ನೀತಿಗಳನ್ನು ರೂಪಿಸುತ್ತಿವೆ. ಇದು ಸಾಮಾನ್ಯ ಜನರ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಹಾಗೂ ಜನರನ್ನು ಉತ್ತಮ ಮಟ್ಟದ ಜೀವನದಿಂದ ಬೇರ್ಪಡಿಸುತ್ತಿದೆ. ಆರ್ಥಿಕ ಜಾಗತೀಕರಣ ಹಾಗೂ ಉದಾರೀಕರಣದ ಪ್ರಕ್ರಿಯೆಗಳ ರಾಷ್ಟ್ರಗಳ ಆಂತರಿಕ ಹಾಗೂ ರಾಷ್ಟ್ರ ರಾಷ್ಟ್ರಗಳ ನಡುವಿನ ಅಂತರವನ್ನು ಹೆಚ್ಚಿಸುತ್ತಿವೆ. ಪ್ರಬಲವಾದ ರಾಷ್ಟ್ರಗಳು ತಮ್ಮಲ್ಲಿರುವ ಸಂಪನ್ಮೂಲಗಳಾದ ಆರ್ಥಿಕ ಒಪ್ಪಂದಗಳು ಹಾಗೂ ಸೈನ್ಯದ ಮಧ್ಯಸ್ಥಿಕೆಗಳನ್ನು ಬಳಸಿಕೊಳ್ಳುವುದರ ಮುಖಾಂತರ ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಳ್ಳುತ್ತಿವೆ ಮತ್ತು ವಿಸ್ತರಿಸಿಕೊಳ್ಳುತ್ತಿವೆ. ಇದರಿಂದ ಜನತೆಯ ಜೀವನದ ಮೇಲೆ ದುಷ್ಪರಿಣಾಮ ಉಂಟಾಗಿದೆ.

<u>ಈ ಸನ್ನದು ವಿಶ್ವದ ಜನತೆಗೆ ಕೊಟ್ಟ ಕರೆ</u>

➢ ಕ್ಷೀಣಿಸುತ್ತಿರುವ ಜನರ ಆರೋಗ್ಯದ ಹಕ್ಕನ್ನು, ಕಲುಷಿತಗೊಳ್ಳುತ್ತಿರುವ ಸಾಮಾಜಿಕ, ಪಾರಿಸಾರಿಕ ಹಾಗೂ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ದಕ್ಷಿಣಾತ್ಯ ರಾಷ್ಟ್ರಗಳ ಪರವಾಗಿ ಕೆಲಸ ಮಾಡಲು ಜಾಗತಿಕ, ವಾಣಿಜ್ಯ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಒತ್ತಾಯಿಸುವುದು.

➢ ಸಾರ್ವಜನಿಕ ಆರೋಗ್ಯವನ್ನು ಸಂರಕ್ಷಿಸುವ ಚೌಕಟ್ಟಿನೊಳಗೇ ಎಲ್ಲ ಒಪ್ಪಂದಗಳೂ ನಡೆಯಬೇಕು. ಉದಾ: WTO, TRIPS - ವಿಶ್ವ ವಾಣಿಜ್ಯ ಸಂಸ್ಥೆ,

➢ ಇದುವರೆಗೂ ಇದ್ದ ಮೂರನೇ ಜಗತ್ತಿನ ಎಲ್ಲ ಸಾಲಗಳನ್ನು ಮನ್ನಾ ಮಾಡಲು ಬೇಡಿಕೆ.

➢ ವಿಶ್ವಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ತೀವ್ರತರ ಬದಲಾವಣೆಯಾಗಬೇಕು. ಈ ಬದಲಾವಣೆಯು ಅಭಿವೃದ್ಧಿಗೊಳ್ಳುತ್ತಿರುವ ದೇಶಗಳ ಜನರ ಹಕ್ಕುಗಳ ಹಾಗೂ ಆಶೋತ್ತರಗಳ ಕ್ರಿಯಾತ್ಮಕ ಅನುಷ್ಠಾನದ ಪ್ರತಿಫಲನವಾಗಿರಬೇಕು.

➢ ರಾಷ್ಟ್ರೀಯ ಸಮಗ್ರತೆ, ಪರಿಸರ ನಾಶ, ಜನರ ಶ್ರಮದ ಶೋಷಣೆ ಮತ್ತು ಜನರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರದೇ ಇರುವಂತಹ ನೀತಿ-ನಿಯಮಗಳನ್ನು ಜಾರಿಗೊಳಿಸಲು ಬೇಡಿಕೆ (TNCS)

- ಕೃಷಿ ನೀತಿಯನ್ನು ಜಾರಿಗೊಳಿಸುವಾಗ ಮಾರುಕಟ್ಟೆಯ ಬೇಡಿಕೆಗೆ ಆದ್ಯತೆ ಕೊಡದೇ ಜನರ ಅಗತ್ಯಗಳಿಗೆ ಅನುಗುಣವಾಗಿ ಆಹಾರದ ಸಮಾನ ಪೂರೈಕೆ ಹಾಗೂ ಸಂರಕ್ಷಣೆಗೆ ಖಚಿತತೆಯನ್ನು ಒದಗಿಸುವಂತಿರಬೇಕು.
- ಜನಾರೋಗ್ಯಕ್ಕಾಗಿ ಬೌದ್ಧಿಕ ಆಸ್ತಿಯ ಹಕ್ಕನ್ನು ಪ್ರತಿಪಾದಿಸುವಂತೆ ಮತ್ತು ರಕ್ಷಿಸುವಂತೆ ಸರ್ಕಾರಕ್ಕೆ ಒತ್ತಡ ತರುವುದು.
- ಅಂತರಾಷ್ಟ್ರ ಮಟ್ಟದಲ್ಲಿ ಬಂಡವಾಳದ ಹರಿವನ್ನು ನಿಯಂತ್ರಿಸಲು ತೆರಿಗೆಗಳನ್ನು ವಿಧಿಸುವಂತೆ ಸರ್ಕಾರಕ್ಕೆ ಒತ್ತಡ ತರುವುದು.
- ಎಲ್ಲ ಆರ್ಥಿಕ ನೀತಿಗಳು ಆರೋಗ್ಯ, ಸಮಾನತೆ, ಲಿಂಗತ್ವ ಹಾಗೂ ಪರಿಸರದ ಅಂಶಗಳನ್ನು ಉತ್ತಮವಾಗಿ ನಿಯಂತ್ರಿಸುವಂತೆ ಸಾಧ್ಯವಾಗುವ ಅಳತೆಗೋಲನ್ನು ಹೊಂದಿರುವಂತೆ ಒತ್ತಾಯಿಸುವುದು.

ಮಾನವೀಯ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣದಂತಹ ಪರ್ಯಾಯ ನೀತಿಗಳನ್ನು ತರಲು ಒತ್ತಾಯಿಸುವ ಮೂಲಕ ಕೇಂದ್ರೀಕೃತ ಬೆಳವಣಿಗೆಯ ಆರ್ಥಿಕ ತತ್ವಗಳನ್ನು ಬದಲಾಯಿಸುವುದು. ಈ ದಿಶೆಯಲ್ಲಿ ಆರ್ಥಿಕ ಸಮಾನತೆ ಹಾಗೂ ಆರೋಗ್ಯದ ಮೂಲಭೂತ ಪ್ರಾಮುಖ್ಯತೆಯ ಅಂಶಗಳನ್ನು ಗಮನಿಸುವುದು. ವೇತನ ರಹಿತ ಕಾರ್ಮಿಕರ ಹಾಗೂ ಗುರುತಿಸಲ್ಪಡದ ಮಹಿಳೆಯರ ಕೆಲಸಗಳನ್ನು ಪರಿಗಣಿಸುವುದು.

**ಸಾಮಾಜಿಕ ಹಾಗೂ ರಾಜಕೀಯ ಸವಾಲುಗಳು:** ಸಮಗ್ರ, ಸಾಮಾಜಿಕ ನೀತಿಯು ಜನತೆಯ ಜೀವನದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದರೂ ಸಹ ಆರ್ಥಿಕ ಜಾಗತೀಕರಣ ಮತ್ತು ಖಾಸಗೀಕರಣದಿಂದಾಗಿ ಜನತೆಯ ವ್ಯಕ್ತಿಗತ ಕುಟುಂಬದ ಹಾಗೂ ಸಮುದಾಯದ ಸಂಸ್ಕೃತಿಯ ಮೇಲೆ ದುಷ್ಪರಿಣಾಮ ಬೀರಿದೆ. ಸಾಮಾಜಿಕ ಬಂಧನವನ್ನು ನಿರಂತರವಾಗಿ ಶ್ರಮಿಸಿದರೂ ಸಹ ಅವರ ಮೂಲಭೂತ ಅಗತ್ಯತೆಗಳನ್ನು ನಿರ್ಲಕ್ಷಿಸಿ ಅವರ ಮಾನವೀಯ ಹಕ್ಕುಗಳನ್ನು ಹೊಂದಲೂ ಸಹ ನಿರ್ಬಂಧಿಸಲಾಗಿದೆ.

ಜನತೆಯ ಒಳಿತನ್ನು ಕಡೆಗಾಣಿಸಿ ತಮ್ಮ ಜವಾಬ್ದಾರಿಯನ್ನು ಖಾಸಗೀ ವಲಯಗಳಿಗೆ, ನಿಗಮಗಳಿಗೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ವರ್ಗಾಯಿಸಿರುವುದರಿಂದ ಸಾರ್ವಜನಿಕ ಶಿಕ್ಷಣ ಕಡೆಗಾಣಿಸಲ್ಪಟ್ಟಿವೆ ಮತ್ತು ಬಲಹೀನವಾಗುತ್ತಿದೆ. ಇದಕ್ಕೂ ಹೆಚ್ಚಾಗಿ ಮೂಲಭೂತವಾದಿಗಳ ಬಲ ಹೆಚ್ಚಾದಂತೆ ರಾಜಕೀಯ ಮುಖಂಡರ ಹಾಗೂ ಟ್ರೇಡ್ ಯೂನಿಯನ್‌ನವರ ಆಸೆ - ಆಮಿಷೆಗಳನ್ನು ಮೊಟಕುಗೊಳಿಸಲಾಗುತ್ತಿದೆ. ರಾಜಕೀಯ ಸಂಸ್ಥೆಗಳಲ್ಲಿ ಹಾಗೂ ನಾಗರಿಕ ಸೇವೆಗಳಲ್ಲಿ ಪ್ರಜೆಗಳ ಭಾಗವಹಿಸುವಿಕೆಯ ಅಗತ್ಯವಿದೆ ಮತ್ತು ಸ್ವಾತಂತ್ರ್ಯ ಹಾಗೂ ಪಾರದರ್ಶಕತೆಯ ಅವಶ್ಯಕತೆಯೂ ಇದೆ.

<u>**ವಿಶ್ವಜನತೆಗೆ ಈ ಸನ್ನದಿನ ಕರೆ**</u>

◊ **ಸಮಗ್ರ ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ಹಾಗೂ ಅನುಷ್ಠಾನಗೊಳಿಸುವಲ್ಲಿ ಜನತೆಯ ಸಂಪೂರ್ಣ ಭಾಗವಹಿಸುವಿಕೆಗೆ ಒತ್ತಡ ತರುವುದು ಮತ್ತು ಬೆಂಬಲಿಸುವುದು.**

◊ **ಎಲ್ಲ ಮಹಿಳೆಯರು ಹಾಗೂ ಪುರುಷರು ಕೆಲಸ ಸಮಾನತೆ, ಜೀವನೋಪಾಯ, ಭಾವನೆಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ, ರಾಜನೀತಿಯಲ್ಲಿ ಭಾಗವಹಿಸುವಿಕೆ, ಧಾರ್ಮಿಕ ಆಚರಣೆಗಳನ್ನು ಆಚರಿಸುವಲ್ಲಿ ಅವಕಾಶ, ಶಿಕ್ಷಣಕ್ಕೆ ಅವಕಾಶ ಹಾಗೂ ಹಿಂಸೆಯಿಂದ ಸ್ವಾತಂತ್ರ್ಯ ಪಡೆಯುವ ಸಮಾನ ಹಕ್ಕನ್ನು ಪಡೆಯುವಂತೆ ಖಚಿತಪಡಿಸಿಕೊಳ್ಳುವುದು.**

◊ ಕಡೆಗಾಣಿಸಲ್ಪಟ್ಟ ಜನರ ಮಾನಸಿಕ, ದೈಹಿಕ ಹಾಗೂ ಬೌದ್ಧಿಕ ಆರೋಗ್ಯ ಹಾಗೂ ಮಾನವ ಹಕ್ಕುಗಳನ್ನು ಸಂರಕ್ಷಿಸುವಂತೆ ಸರ್ಕಾರದ ಮೇಲೆ ಒತ್ತಡ ತರುವುದು.

◊ ಆರೋಗ್ಯ ಹಾಗೂ ಶಿಕ್ಷಣದ ವಿಷಯಗಳು ರಾಜಕೀಯ ಚರ್ಚಾ ವಿಷಯಗಳಲ್ಲಿ ಅತ್ಯುನ್ನತ ಸ್ಥಾನದಲ್ಲಿರುವಂತೆ ಒತ್ತಾಯಿಸುವುದು. ಇದರಿಂದಾಗಿ ಮಕ್ಕಳ, ಯುವಕರ ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಕರೆ ಮಾಡಿಕೊಟ್ಟಂತಾಗುತ್ತದೆ.

◊ ಸಾರ್ವಜನಿಕ ಸಂಸ್ಥೆಗಳ ಚಟುವಟಿಕೆಗಳಾದ ಶಿಶುಪಾಲನಾ ಸೇವೆಗಳು, ಆಹಾರ, ಪಡಿತರ ಹಂಚಿಕೆಯ ವ್ಯವಸ್ಥೆ, ಗೃಹ ಸೌಲಭ್ಯಗಳು, ವೈಯಕ್ತಿಕ ಹಾಗೂ ಸಮುದಾಯದ ಆರೋಗ್ಯಕ್ಕೆ ಪೂರಕವಾಗಿರುವಂತೆ ಒತ್ತಾಯಿಸುವುದು.

◊ ಜನರ ಭೂಮಿ, ಮನೆ ಹಾಗೂ ಉದ್ಯೋಗಗಳಿಂದ ಬಲವಂತವಾದ ಸ್ಥಾನಪಲ್ಲಟವನ್ನು ತಡೆಗಟ್ಟಲು ಇರುವಂತಹ ನೀತಿಗಳನ್ನು ಖಂಡಿಸುವುದು.

◊ ಜಗತ್ತಿನಾದ್ಯಂತ ಮಹಿಳೆಯರ, ಮಕ್ಕಳ ಹಾಗೂ ಅಲ್ಪಸಂಖ್ಯಾತರ ಜನತೆಯ ಮೂಲಭೂತ ಬಲವನ್ನು ಸ್ವಾತಂತ್ರವನ್ನು ಹೆದರಿಸುತ್ತಿರುವ ಮೂಲಭೂತವಾದಿಗಳ ಬಲವನ್ನು ವಿರೋಧಿಸುವುದು.

◊ ಮಹಿಳೆಯರ ಮತ್ತು ಮಕ್ಕಳ ಮೇಲಾಗುತ್ತಿರುವ ಲೈಂಗಿಕ ಹಿಂಸೆ ಹಾಗೂ ಜಾಗತೀಕರಣದ ಒತ್ತಡವನ್ನು ವಿರೋಧಿಸುವುದು.

<u>ಪಾರಿಸಾರಿಕ ಸವಾಲುಗಳು:</u>

ನೀರು ಹಾಗೂ ವಾಯು ಮಲಿನತೆ, ವಾತಾವರಣದಲ್ಲಿ ದಿಢೀರ್ ಬದಲಾವಣೆ, ಓಜೋನ್ ಪದರದ ಕ್ಷೀಣಿಸುವಿಕೆ, ನ್ಯೂಕ್ಲಿಯರ್ ಶಕ್ತಿಯ ನಾಶ, ವಿಷಕಾರಕ ರಾಸಾಯನಿಕಗಳು, ಕೀಟನಾಶಕಗಳು, ಜೈವಿಕ ನಾಶ, ಅರಣ್ಯ ನಾಶ, ಮತ್ತು ಮಣ್ಣಿನ ಸವಕಳಿ ಇವೆಲ್ಲವೂ ಜನರ ಆರೋಗ್ಯದ ಮೇಲೆ ಪ್ರಬಲವಾದ ಪರಿಣಾಮ ಬೀರಿದೆ. ಈ ಅನಾಹುತಕ್ಕೆ ಮುಖ್ಯ ಕಾರಣಗಳು:

◊ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಆಗುತ್ತಿರುವ ನಿರಂತರ ಶೋಷಣೆ, ದೂರದೃಷ್ಟಿ ಇಲ್ಲದಿರುವುದು, ವೈಯಕ್ತಿಕ ಹಾಗೂ ಲಾಭದಾಯಕ ಮನೋಭಾವನೆ ಹೊಂದಿರುವುದು ಮತ್ತು ಶ್ರೀಮಂತರಿಂದ ಅತಿಯಾದ ಅನುಭವಿಸುವಿಕೆ ಇವೇ ಮುಂತಾದವುಗಳಾಗಿವೆ. ಈ ಅನಾಹುತಗಳನ್ನು ತಕ್ಷಣ ಎದುರಿಸುವ ಅವಶ್ಯಕತೆ ಇದೆ.

<u>ಈ ಸನ್ನದು ವಿಶ್ವದ ಜನತೆಗೆ ಕೊಟ್ಟ ಕರೆ</u>

✓ ಪರಿಸರ ಹಾಗೂ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಹಾಗೂ ಅಪಾಯಕಾರಿ ಪರಿಣಾಮ ಬೀರುವ ಚಟುವಟಿಕೆಗಳ ಮೇಲೆ ನಿಯಂತ್ರಣ ತರಲು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಸಂಸ್ಥೆಗಳ ಮೇಲೆ ಒತ್ತಡ ತರುವುದು.

✓ ಪ್ರತಿಯೊಂದು ಅಭಿವೃದ್ಧಿ ಯೋಜನೆಗಳು ಜನತೆಯ ಆರೋಗ್ಯ ಹಾಗೂ ಪರಿಸರದ ಅರ್ಹತಾ ಮಾಪಕಗಳಾಗಿರಬೇಕು. ಆರೋಗ್ಯ ಹಾಗೂ ಪರಿಸರದ ಮೇಲೆ ನೀತಿ ಹಾಗೂ ತಾಂತ್ರಿಕತೆಯ ಒತ್ತಡ ಹೇರುವಾಗ ಎಚ್ಚರಿಕೆ ವಹಿಸಬೇಕು.

✓ ಬಡ ರಾಷ್ಟ್ರಗಳ ಹಾಗೂ ಕಡೆಗಾಣಿಸಲ್ಪಟ್ಟ ಸಮಯದಾಯದ ಮೇಲೆ ವರ್ಗಾಯಿಸ್ಪಡುತ್ತಿರುವ ಅಪಾಯಕಾರಿ ಕೈಗಾರಿಕೆ ಮತ್ತು ವಿಷಕಾರಕ ವಸ್ತುಗಳ ಮತ್ತು ಅಣುಶಕ್ತಿಯ ವಸ್ತುಗಳನ್ನು ಖಂಡಿಸಬೇಕು. ಈ ರೀತಿಯ ಅನಾವಶ್ಯಕ ವಸ್ತುಗಳ ಉತ್ಪಾದನೆಯನ್ನು ಕಡಿಮೆ ಮಾಡಲು ಪರಿಹಾರ ಕಂಡುಹಿಡಿಯಲು ಪ್ರೋತ್ಸಾಹಿಸಬೇಕು.

- ✓ ಉತ್ತರ ಹಾಗೂ ದಕ್ಷಿಣ ರಾಷ್ಟ್ರಗಳಲ್ಲಾಗುತ್ತಿರುವ ಅತಿಯಾದ ಬಳಕೆಯ ಹಾಗೂ ಅನಿರಂತರ ಜೀವನ ಶೈಲಿಯನ್ನು ಕಡಿಮ ಮಾಡುವುದು ಕೈಗಾರೀಕರಣಗೊಂಡ ಸಂಪತ್ಭರಿತ ರಾಷ್ಟ್ರಗಳ ಬಳಕೆಯ ಪ್ರಮಾಣ ಹಾಗೂ ಕಲುಷಿತ ವಾತಾವರಣವನ್ನು ಶೇ. 90 ರಷ್ಟು ಕಡಿತಗೊಳಿಸಲು ಒತ್ತಡ ತರುವುದು.
- ✓ ಕೆಲಸದ ಸ್ಥಳದಲ್ಲಿ ಆರೋಗ್ಯ, ಔದ್ಯೋಗಿಕ ಭದ್ರತೆ, ಕಾರ್ಮಿಕ ಕೇಂದ್ರೀಕೃತ ನಿರ್ವಹಣಾ ಪದ್ಧತಿಯನ್ನು ಜಾರಿಗೊಳಿಸಲು ಸೂಕ್ತಕ್ರಮ ಕೈಗೊಳ್ಳುವಂತೆ ಬೇಡಿಕೆ.
- ✓ ಕೆಲಸದ ಸ್ಥಳ, ಸಮುದಾಯ ಹಾಗೂ ಮನೆಗಳಲ್ಲಿ ಅಪಘಾತ ಹಾಗೂ ಗಾಯಗಳನ್ನು ತಡೆಗಟ್ಟಲು ಸೂಕ್ತಕ್ರಮ ಕೈಗೊಳ್ಳಲು ಬೇಡಿಕೆ.
- ✓ ಪುರಾತನ ಹಾಗೂ ಸಾಂಪ್ರದಾಯಿಕ ಜ್ಞಾನವನ್ನು ಮತ್ತು ಸಂಪನ್ಮೂಲವನ್ನು ತಿರಸ್ಕರಿಸುವ ಸನ್ನದನ್ನು (Patent) ತಿರಸ್ಕರಿಸುವುದು.
- ✓ ಪರಿಸರ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಜನಾಧಾರಿತ ಹಾಗೂ ಸಮುದಾಯ ಆಧಾರಿತ ಸೂಚಿಕಗಳನ್ನು ಅಭಿವೃದ್ಧಿಪಡಿಸುವುದು. ಜನತೆಯ ಸ್ಥಿತಿಗತಿಗಳಿಗೆ ಕಾರಣವಾದ ಪರಿಸರದ ವಿನಾಶವನ್ನು ತಡೆಗಟ್ಟಿ ಅಭಿವೃದ್ಧಿಯ ಸೂಚ್ಯಾಂಕಗಳನ್ನು ಅನುಷ್ಠಾನಗೊಳಿಸುವುದು.

**ಯುದ್ಧ, ಅಹಿಂಸೆ ಹಾಗೂ ಸಂದಿಗ್ಧತೆ:** ಯುದ್ಧ ಅಹಿಂಸೆ ಮತ್ತು ಸಂದಿಗ್ಧತೆಗಳು ಜನರ ಹಾಗೂ ಸಮುದಾಯದ ಘನತೆ-ಗೌರವಗಳನ್ನು ನಾಶಗೊಳಿಸುತ್ತಿವೆ. ಮಕ್ಕಳ ಹಾಗೂ ಮಹಿಳೆಯರ ಶಾರೀರಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರಿದೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಲಯಗಳಲ್ಲಿ ಅತಿಯಾದ ಶಸ್ತ್ರಾಸ್ತ್ರಗಳ ಹೊಂದುವಿಕೆ ಮತ್ತು ಸಂಪನ್ಮೂಲ ಹಂಚಿಕೆಯಲ್ಲಿ ಆಗುತ್ತಿರುವ ಭ್ರಷ್ಟತೆಯಿಂದಾಗಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿರತೆ ಇಲ್ಲದಂತಾಗಿದೆ.

<u>**ಜಗತ್ತಿನ ಜನತೆಗೆ ಈ ಸನ್ನದಿನ ಕರೆ**</u>

- ಶಾಂತಿ ಮತ್ತು ನಿಶಸ್ತ್ರೀಕರಣಕ್ಕಾಗಿ ಮಾಡುವ ಚಳುವಳಿಗಳನ್ನು ಬೆಂಬಲಿಸುವುದು.
- ಸಮುದಾಯವನ್ನು ಹಾಳು ಮಾಡುವ ಸಂಶೋಧನೆ, ಉತ್ಪಾದನೆ, ಶಸ್ತ್ರಾಸ್ತ್ರ ಪರೀಕ್ಷೆ ಶಸ್ತ್ರಾಸ್ತ್ರಗಳ ಬಳಕೆಯನ್ನು ವಿರೋಧಿಸುವ ಚಳುವಳಿಗಳನ್ನು ಬೆಂಬಲಿಸುವುದು.
- ಯುದ್ಧ ಸಂದಿಗ್ಧತೆಗಳನ್ನು ಹಾಗೂ ಸಾಮೂಹಿಕ ಹತ್ಯಾಕಾಂಡಗಳನ್ನು ಎದುರಿಸಿದ ರಾಷ್ಟ್ರಗಳ ನ್ಯಾಯ ಹಾಗೂ ನಿರಂತರ ಶಾಂತಿಗಾಗಿ ಜನರ ಚಳುವಳಿಯನ್ನು ಬೆಂಬಲಿಸುವುದು.
- ಬಾಲ ಸೈನಿಕರ ಬಳಕೆ, ಮಕ್ಕಳು ಮತ್ತು ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರ, ದೌರ್ಜನ್ಯ ಮತ್ತು ಶೋಷಣೆಗಳನ್ನು ಖಂಡಿಸುವುದು.
- ಮಾನವೀಯವಾಗಿ ಕೊಡುವಂತಹ ಸಹಾಯವನ್ನು ಯುದ್ಧಕ್ಕೆ ಸಂಬಂಧಿಸಿದ ವಿಷಯಗಳಿಗೆ ಬಳಸಿಕೊಳ್ಳಬಾರದು.
- ಸಂಯುಕ್ತ ರಾಷ್ಟ್ರದ ಭದ್ರತಾ ಕೌನ್ಸಿಲ್‌ನಲ್ಲಿ ಬಹುಮತದ ಆಧಾರದ ಮೇಲೆ ನಿರ್ವಹಿಸುವಂತೆ ಅದರ ರಚನೆಯಲ್ಲಿ ಆಮೂಲಾಗ್ರ ಬದಲಾವಣೆಯ ಅವಶ್ಯಕತೆ.
- ಸಂಯುಕ್ತರಾಷ್ಟ್ರ ಸಂಘವಾಗಲೀ ಇತರೆ ರಾಷ್ಟ್ರಗಳಾಗಲೀ ಬೇರೆ ರಾಷ್ಟ್ರಗಳ ಮೇಲೆ ಹೇರುವ ನಿಬಂಧನೆಗಳು ಅಲ್ಲಿಯ ಜನ ಸಾಮಾನ್ಯರ ಆರೋಗ್ಯದ ಮೇಲೆ ಧಕ್ಕೆ ಆಗದಂತೆ ಇರಬೇಕೆಂದು ಬೇಡಿಕೆ ಇಡುವುದು.
- ಶಸ್ತ್ರಾಸ್ತ್ರ ರಹಿತ ಶಾಂತಿ ವಲಯಗಳೆಂದು ಹಲವು ಪಟ್ಟಣಗಳನ್ನು ಹಾಗೂ ಹಲವು ವಲಯಗಳನ್ನು ಘೋಷಿಸಲು ಪ್ರಯತ್ನಿಸುವ ಜನಪರ ಸಂಘಟನೆಗಳ ಪ್ರಯತ್ನಗಳಿಗೆ ಬೆಂಬಲ ಮತ್ತು ಪ್ರೋತ್ಸಾಹಿಸುವುದು.

- ಆಕ್ರಮಕಾರಿ ಮತ್ತು ಹಿಂಸಾತ್ಮಕ ವರ್ತನೆಗಳನ್ನು ಮುಖ್ಯವಾಗಿ ಪುರುಷರಲ್ಲಿ ಇದನ್ನು ತಡೆಗಟ್ಟುವ ಪ್ರಯತ್ನಗಳಿಗೆ ಮತ್ತು ಪ್ರಚಾರಕ್ಕೆ ಬೆಂಬಲ ನೀಡುವುದು ಮತ್ತು ಸೌಹಾರ್ದಯುತ, ಶಾಂತಿಯುತ ಬಾಳ್ವೆಗೆ ಬೆಂಬಲಿಸುವುದು.

**ಜನಕೇಂದ್ರೀಕೃತ ಆರೋಗ್ಯ ವಿಭಾಗ:** ಜನತೆಯ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳದೇ ವಿಶ್ವದಾದ್ಯಂತ ಜನರ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗೆ ಅವಕಾಶ ಒದಗಿಸಿ ಕೊಡುವುದೇ ಈ ಸನ್ನದಿನ ಮುಖ್ಯ ಕರೆಯಾಗಿದೆ. ಇದನ್ನು ಸಾಧಿಸುವುದಕ್ಕಾಗಿ ಆರೋಗ್ಯ ಸೇವೆಗಳು ಪ್ರಜಾಸತ್ತಾತ್ಮಕವಾಗಿರಬೇಕು ಮತ್ತು ಅವಶ್ಯಕ ಸಂಪನ್ಮೂಲಗಳೊಂದಿಗೆ ಕಾರ್ಯ ನಿರ್ವಹಿಸುವಂತಿರಬೇಕು.

**<u>ಜಗತ್ತಿನ ಜನತೆಗೆ ಈ ಸನ್ನದಿನ ಕರೆ</u>**

- ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯವನ್ನು ಖಾಸಗೀಕರಣಗೊಳಿಸುವ ಮತ್ತು ವ್ಯಾಪಾರೀಕರಣಗೊಳಿಸುವ ನೀತಿಗಳನ್ನು ವಿರೋಧಿಸುವುದು.
- ಜನರ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಲು, ಉಚಿತ ಹಾಗೂ ಸಮಗ್ರ ಆರೋಗ್ಯ ಸೇವೆಗಳನ್ನು ಒದಗಿಸಲು ಹಾಗೂ ಹಣಕಾಸಿನ ಸೌಲಭ್ಯವನ್ನು ಒದಗಿಸಲು ಸರ್ಕಾರವನ್ನು ಒತ್ತಾಯಿಸುವುದು.
- ರಾಷ್ಟ್ರೀಯ ಆರೋಗ್ಯ ಮತ್ತು ಔಷಧಿ ನಿಯಮಗಳನ್ನು ಪುನರ್ ರಚಿಸಿ, ಒಪ್ಪಿ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು.
- ಆರೋಗ್ಯ ಸೇವೆಗಳನ್ನು ಖಾಸಗೀಕರಣಗೊಳಿಸುವುದನ್ನು ಸರ್ಕಾರ ವಿರೋಧಿಸುವಂತೆ ಒತ್ತಾಯಿಸುವುದು ಮತ್ತು ಖಾಸಗೀ ವೈದ್ಯಕೀಯ ಸೇವೆ ಮತ್ತು ಸ್ವಯಂ ಸಂಸ್ಥೆಗಳ ವೈದ್ಯಕೀಯ ಸೇವೆಯನ್ನು ನಿಯಂತ್ರಣದಲ್ಲಿಡಲು ಒತ್ತಾಯಿಸುವುದು.
- ವಿಶ್ವ ಆರೋಗ್ಯ ಸಂಸ್ಥೆಯು ಜನತೆಯ ಸಂಘಟನೆಗಳನ್ನೊಳಗೊಂಡು ಬಡ ಜನತೆಗೆ ಆರೋಗ್ಯದ ಲಾಭವನ್ನು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತಹ ತೀವ್ರತರ ಬದಲಾವಣೆ ತರಲು ಒತ್ತಾಯಿಸುವುದು.
- ರೋಗಿಗಳು ಹಾಗೂ ಗ್ರಾಹಕರ ಹಕ್ಕುಗಳನ್ನೊಳಗೊಂಡಂತೆ ಎಲ್ಲ ಮಟ್ಟದ ಆರೋಗ್ಯಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ಪ್ರಬಲವಾಗಿ ಕೈಗೊಳ್ಳುವಂತೆ ಹಾಗೂ ಜನತೆಯು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು.
- ಪುರಾತನ ಹಾಗೂ ಸಾಂಪ್ರದಾಯಿಕ ಆರೋಗ್ಯ ಪದ್ಧತಿಯನ್ನು ಅನುಸರಿಸುತ್ತಿರುವವರನ್ನು ಗುರುತಿಸಿ ಪ್ರಾಥಮಿಕ ಆರೋಗ್ಯ ಸೇವೆಯಲ್ಲಿ ಸೌಹಾರ್ದಯುತವಾಗಿ ನಡೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಿ ಬೆಂಬಲಿಸುವುದು.
- ವೈದ್ಯಕೀಯ ಶಿಕ್ಷಣ ಬೇಕು. ರೋಗಿಗಳ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಚಿಕಿತ್ಸಾಧಾರಿತವಾಗಿರಬೇಕು. ಸಮಾಜದಲ್ಲಿರುವ ವೈವಿಧ್ಯತೆಯನ್ನು ಗುರುತಿಸಿ ಗೌರವಿಸಿ ಸಮುದಾಯದೊಂದಿಗೆ ಕೆಲಸ ಮಾಡುವುದನ್ನು ತಿಳಿ ಹೇಳುವಂತಿರಬೇಕು. ಜಾಗತಿಕ ಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ಅರ್ಥ ಮಾಡಿಕೊಂಡು ಅದರಿಂದ ನಮ್ಮ ಸಮಾಜದ ಆರೋಗ್ಯ ವ್ಯವಸ್ಥೆಯ ಮೇಲಾಗುವ ಪರಿಣಾಮವನ್ನು ತಿಳಿದುಕೊಳ್ಳುವ ಸೂಕ್ಷ್ಮತೆಯನ್ನು ಹೆಚ್ಚಿಸಬೇಕು.
- ಜನತೆಯ ಆರೋಗ್ಯದ ಅಗತ್ಯತೆಗಳ ಆಧಾರದ ಮೇಲೆ ವೈದ್ಯಕೀಯ ಸಂಶೋಧನೆ ಹಾಗೂ ತಾಂತ್ರಿಕ ಸಂಶೋಧನೆಯನ್ನು ನಡೆಸುವಂತೆ ಒತ್ತಾಯಿಸುವುದು.
- ಯಾವುದೇ ವೈದ್ಯಕೀಯ ಸಂಶೋಧನೆ ಹಾಗೂ ಅಭಿವೃದ್ಧಿಯು ಜನತೆಯ ಭಾಗವಹಿಸುವಿಕೆಯ ಮುಖಾಂತರ ಆಗಬೇಕು. ಅದರಿಂದಾಗುವ ಬೆಳವಣಿಗೆಯು ಜನತೆಯ ಅವಶ್ಯಕತೆಯ ಆಧಾರದ ಮೇಲೆ ನಡೆಸುವಂತೆ ಸಂಸ್ಥೆಗಳನ್ನು ಒತ್ತಾಯಿಸುವುದು.

- ಸಂತಾನೋತ್ಪತ್ತಿ ಮತ್ತು ಲೈಂಗಿಕತೆಯ ಬಗ್ಗೆ ಸ್ವ ನಿರ್ಧಾರ ತೆಗೆದುಕೊಳ್ಳುವುದು ಜನತೆಯ ಹಕ್ಕಾಗಿರುವಂತೆ ಬೆಂಬಲಿಸುವುದು. ಅದಕ್ಕೆ ವಿರುದ್ಧವಾದ ಕುಟುಂಬ ಕಲ್ಯಾಣ ನೀತಿಯನ್ನು ವಿರೋಧಿಸುವುದು. ಸುರಕ್ಷಿತ ಹಾಗೂ ಪರಿಣಾಮಕಾರಿಯಾದ ಸಂತಾನೋತ್ಪತ್ತಿ ನಿಯಂತ್ರಣ ವಿಧಾನಗಳ ಹಕ್ಕನ್ನು ಬೆಂಬಲಿಸುವುದು.

ಆರೋಗ್ಯಕರ ಜಗತ್ತಿಗಾಗಿ ಜನತೆಯ ಭಾಗವಹಿಸುವಿಕೆ: ಪ್ರಜಾಸತ್ತಾತ್ಮಕ, ಪಾರದರ್ಶಕ ಹಾಗೂ ಬದ್ಧತೆಯುಳ್ಳ, ನಿರ್ಣಾಯಕ ಪ್ರಕ್ರಿಯೆಗಳಲ್ಲಿ ಪ್ರಬಲವಾದ ಸಂಘಟನೆಗಳು ಹಾಗೂ ಚಳುವಳಿಗಳು ಮೂಲಭೂತ ಅವಶ್ಯಕತೆಗಳಾಗಿವೆ. ಜನತೆಯ ನಾಗರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಅವಶ್ಯಕತೆ ಇದೆ ಎಂದು ಖಚಿತಪಡಿಸಿಕೊಳ್ಳುವ ಅಗತ್ಯವಿದೆ. ಮಾನವನ ಮೂಲಭೂತ ಮಾನವೀಯ ಹಕ್ಕು ಮತ್ತು ಸಮಾನ ಆರೋಗ್ಯ, ಸಂಪರ್ಕದ ಹಕ್ಕನ್ನು ಪ್ರೇರೇಪಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ ಹಾಗೂ ಜವಾಬ್ದಾರಿಯಾಗಿದೆ. ಜನತೆಯ ನಿರ್ಧಾರ ಶಕ್ತಿಯನ್ನು, ನೀತಿ-ನಿಯಮಗಳ ರಚನೆಯನ್ನು ಅನುಷ್ಠಾನ ಗೊಳಿಸುವುದು ಮತ್ತು ನಿಯಂತ್ರಿಸುವುದರಲ್ಲಿ ನಾಗರಿಕ ಸಂಸ್ಥೆಗಳ ಮತ್ತು ಚಳುವಳಿಗಳ ಮತ್ತು ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ.

ಈ ಸನ್ನದಿಗೆ ಜಗತ್ತಿನ ಜನತೆಯ ಕರೆ:

- ವಿಶ್ಲೇಷಣಾತ್ಮಕ ಮತ್ತು ಕ್ರಿಯಾತ್ಮಕವಾದ ತಳಹದಿಯನ್ನು ಹುಟ್ಟು ಹಾಕಲು ಜನತೆಯ ಪ್ರಬಲವಾದ ಚಳುವಳಿಯನ್ನು ಕಟ್ಟುವುದು.
- ಎಲ್ಲ ಹಂತದ ಸಾರ್ವಜನಿಕ ಸೇವೆಗಳಲ್ಲಿ ಜನತೆಯೇ ನಿರ್ಧಾರ ಕೈಗೊಳ್ಳುವಂತೆ ಪ್ರೇರೇಪಿಸುವುದು, ಬೆಂಬಲಿಸುವುದು ಮತ್ತು ಜನರನ್ನು ತೊಡಗಿಸುವುದು.
- ಆರೋಗ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಹಂತಗಳಲ್ಲಿ ಅಂದರೆ ಸ್ಥಳೀಯ, ರಾಷ್ಟ್ರ ಮತ್ತು ಅಂತರಾಷ್ಟ್ರ ಮಟ್ಟದ ವೇದಿಕೆಯಲ್ಲಿ ಜನರ ಪ್ರತಿನಿಧಿತ್ವ ಇರುವಂತೆ ಒತ್ತಾಯಿಸುವುದು.
- ಜನಕೇಂದ್ರೀಕೃತ ಸೌಹಾರ್ದತಾ ಜಾಲವನ್ನು ಜಗತ್ತಿನಾದ್ಯಂತ ಹಬ್ಬಿಸಲು ಸ್ಥಳೀಯ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಪ್ರೇರೇಪಿಸುವುದು.

ಈ ಸನ್ನದನ್ನು ವೇದಿಕೆಯ ಮೇಲಿರುವ ಪ್ರತಿಯೊಬ್ಬರೂ ಸ್ವಲ್ಪ ಸ್ವಲ್ಪ ಭಾಗವನ್ನು ಓದಿ ವಿವರಿಸಿದ ನಂತರ 93 ರಾಷ್ಟ್ರಗಳಿಂದ ಬಂದ ಎಲ್ಲ ಪ್ರತಿನಿಧಿಗಳ ಒಪ್ಪಿಗೆಯ ದ್ಯೋತಕವಾಗಿ ಅಲ್ಲಲ್ಲೇ ಇಟ್ಟಿರುವ ಬಟ್ಟೆಗಳ ಮೇಲೆ ಎಲ್ಲರೂ ಸಹಿ ಮಾಡಲಾಯಿತು. ನಂತರ ಇಡೀ ಸಮಾವೇಶದ ಅನಿಸಿಕೆ ಹಾಗೂ ಅನುಸರಣೆಯನ್ನು 5 ಚಾರ್ಟ್ ಮೇಲೆ ಈ ಕೆಳಗಿನ ಅಂಶಗಳ ಮುಖಾಂತರ ವ್ಯಕ್ತಪಡಿಸಲಾಯಿತು.

1. ಈ ಸನ್ನದಿನ ಬಳಕೆಯ ಬಗ್ಗೆ ಅನಿಸಿಕೆ.
2. ಸನ್ನದಿನ ಪ್ರಚಾರ ಹಾಗೂ ಸಮರ್ಥನೆ.
3. ಸಭೆಗಳು ಹಾಗೂ ಪರಸ್ಪರ ಸೌಹಾರ್ದತೆ ಬೆಳೆಸುವುದು.
4. ಪ್ರಕಟಣೆಗಳು
5. ಚಳುವಳಿಗಳ ಕೇಂದ್ರೀಕೃತ ಪರಿಣಾಮ.
6. ಇತರೆ.

ಕೊನೆಯದಾಗಿ 5 ದಿನದ ಸಮಾವೇಶವನ್ನು ಜಪಾನ್ ರಾಷ್ಟ್ರದವರು ಹಾಗೂ ಬಾಂಗ್ಲಾದೇಶದ ಪ್ರತಿನಿಧಿಗಳು ಮಾಡಿದ ನಾಟಕ ಹಾಗೂ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳು ಹಾಡಿದ ಹಾಡುಗಳ ಮುಖಾಂತರ ಮುಕ್ತಾಯ ಗೊಳಿಸಲಾಯಿತು.







ಜಿಲ್ಲಾ ಸಂಯೋಜಕರು
ಮಹಿಳಾ ಸಮಖ್ಯಾ ಕರ್ನಾಟಕ - ರಾಯಚೂರು ಘಟಕ
ನಂ. 1-9-3, ಆಜಾದ್ ನಗರ, ಮಾವಿನಕೆರೆ ಹತ್ತಿರ,
ರಾಯಚೂರು - 584 101
: 28372